# ಪ್ರಸಾದ

ಮಾಸಿಕ


ಅಕ್ಟೋಬರ್ 2025

ಸಂಪುಟ 40 ಸಂಚಿಕೆ 10





ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಪರಮಪೂಜ್ಯ ಜಗದ್ಗುರುಗಳವರು ಭೇಟಿ ನೀಡಿದ್ದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ಶ್ರೀಮತಿ ಹೇಮಾವತಿ ಹೆಗ್ಗಡೆಯವರನ್ನು ಸನ್ಮಾನಿಸಿ ಗೌರವಿಸಿದರು. ಶ್ರೀ ಡಿ. ಹರ್ಷೇಂದ್ರಕುಮಾರ್, ಶ್ರೀಮತಿ ಸುಪ್ರಿಯಾ, ಶ್ರೀ ಡಿ. ಸುರೇಂದ್ರಕುಮಾರ್ ಹಾಗೂ ಶ್ರೀ ಡಿ. ಶ್ರೇಯಸ್‌ಕುಮಾರ್‌ರವರುಗಳಿದ್ದಾರೆ (25 ಅಕ್ಟೋಬರ್ 2025)

# ಪ್ರಸಾದ

**ಸಂಪುಟ 40 : ಸಂಚಿಕೆ 10** **ಅಕ್ಟೋಬರ್ 2025**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ವಿಜಯದಶಮಿಯಂದು ಪರಮಪೂಜ್ಯ ಜಗದ್ಗುರುಗಳವರು ಹಾಗೂ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋತ್‌ರವರು 'ಏಕ್ ಪೇಡ್ ಮಾ ಕೀ ನಾಮ್' ಅಭಿಯಾನದ ಅಂಗವಾಗಿ ಸಸಿಯನ್ನು ನೆಟ್ಟು ನೀರೆರೆಯುತ್ತಿರುವುದು (2 ಅಕ್ಟೋಬರ್ 2025)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


| | |
|---|---|
| ಗುರುವಾಣಿ | 5 |
| ಸಂಪಾದಕೀಯ | 8 |
| ಪರಮಗತಿ<br>ಶ್ರೀ ಸಿದ್ಧೇಶ್ವರ ಸ್ವಾಮಿಗಳು<br>(ಪ್ರವಚನಸಾರ) | 10 |
| ಸಾತ್ವಿಕ ತೇಜಸ್ಸು<br>ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ<br>ಮುರುಘರಾಜೇಂದ್ರ ಮಹಾಸ್ವಾಮಿಗಳು | 15 |
| ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ<br>ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳು<br>(ವೀರಶೈವ ಟೀಕು ಸಾಹಿತ್ಯ ಸರಣಿ) | 18 |
| ಭಾಷಾ ಏಕತೆಯ ಸೇತುವಾಗಿ 'ಸಂಸ್ಕೃತ'<br>ಪ್ರೊ. ವಿ. ಗಿರೀಶ್‌ಚಂದ್ರ | 22 |
| ಶೂನ್ಯಸಂಪಾದನೆಗಳು : ಮರುಚಿಂತನೆ ಮತ್ತು<br>ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು<br>ಡಾ. ಬಿ. ನಂಜುಂಡಸ್ವಾಮಿ | 27 |
| ಪುರಂದರದಾಸರ ಉಗಾಭೋಗ ಮತ್ತು<br>ಶರಣರ ವಚನಗಳ ತೌಲನಿಕ ಅಧ್ಯಯನ<br>ಪ್ರೊ. ಎಚ್.ಎಸ್. ಉಮಾದೇವಿ | 35 |
| ಅಪವಾದ ನಿವಾರಣೆ<br>ಬೇಲೂರು ರಾಮಮೂರ್ತಿ | 38 |
| ಮುಡುಕುತೊರೆ ಧಾರ್ಮಿಕ ಕ್ಷೇತ್ರ ದರ್ಶನ<br>ಡಾ. ಎಸ್.ಜಿ. ರಾಮದಾಸ ರೆಡ್ಡಿ<br>(ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ) | 43 |

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು 49
ರಂಗನಾಥ್ ಮೈಸೂರು

ವಾರ್ತಾವಿಹಾರ 52
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ಕಾಲ ಕಾಮರ ಗೆಲುವ ಉಪಾಯ

ಮುಂದನರಿಯದೆ
ಮತಿಗೆಟ್ಟ ಮರುಳು ಮನವೇ,
ತಲೆಯೂರಿ ನೆಲನ ಬರೆಯುತ್ತಿಪ್ಪೆ
ನೀನು ಮರುಳು ಮನವೇ !

ಮೊಲ-ಜಂಬುಕಂಗಳ ಹೊಯ್ಲಿಗೆ
ಆನೆಯ ಪೌಜನು ಅಡ್ಡಮಾಡಬೇಕೇ ?
ಕಾಲ-ಕಾಮರ ಗೆಲುವುದಕ್ಕೆ
ಆಲೋಚನೆ ಏತಕಯ್ಯ, ಮನವೇ ?

ಪಂಚೇಂದ್ರಿಯಂಗಳು
ಪಂಚಬ್ರಹ್ಮವನಪ್ಪಿ ಅಗಲದಿಪ್ಪುದೇ
ಪಂಚಬಾಣನ ಹರಣದ ಕೇಡು !

ನಾನು ಪರಬ್ರಹ್ಮದಲ್ಲಿಯೇ ಜನನ,
ಎನ್ನ ತನು-ಮನ-ಧನಂಗಳ
ಪರಬ್ರಹ್ಮಕ್ಕೆ ಮಾರುಕೊಟ್ಟೆನೆಂಬ
ನಿಚ್ಚಟದ ನುಡಿಯೇ ಕಾಲನ ಗಂಟಲ ಗಾಣ !

ಅದು ಹೇಗೆಂದರೆ –
ಲಿಂಗಾಂಕಿತವಾದ ವೃಕ್ಷಂಗಳ
ಮಂಡಲಾಧಿಪತಿ ಮೊದಲಾಗಿ ಮುಟ್ಟಲಮ್ಮರು !
ಆನೆಯ ತನುಜನ ಆಡು ಮುರಿದರೆ
ಹೀನವಾರಿಗಪ್ಪುದಯ್ಯ ?

ಈ ಪ್ರಕಾರದ ಸಮ್ಯಕ್‌ಜ್ಞಾನದಿಂದ
ನಿಮ್ಮ ಶರಣರು ಕಾಲ-ಕಾಮರ ಗೆಲಿದರಯ್ಯ
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ !

– ಘನಲಿಂಗಿದೇವರು

# ಗುರುವಾಣಿ

ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ
ಕೈ ಹಿಡಿದು ನಡೆಸೆನ್ನನು
ಇರುಳು ಕತ್ತಲೆಯ ಗವಿ ಮನೆ ದೂರ ಕನಿಕರಿಸಿ
ಕೈಹಿಡಿದು ನಡೆಸೆನ್ನನು

ಆಧುನಿಕ ಕನ್ನಡ ಸಾಹಿತ್ಯಕ್ಕೆ ನಾಂದಿ ಹಾಡಿದ ಕವಿ ಬಿಎಂಶ್ರೀ ಅವರ "ಇಂಗ್ಲಿಷ್ ಗೀತೆಗಳು" ಕವನಸಂಕಲನದಲ್ಲಿ, ಕಾರ್ಡಿನಲ್ ನ್ಯೂಮನ್ ಎಂಬ ಕ್ರೈಸ್ತ ಪಾದ್ರಿಯು ಬರೆದ "ಲೀಡ್ ಕೈಂಡ್ಲೀ ಲೈಟ್" ಕವಿತೆಯನ್ನು ಕನ್ನಡಕ್ಕೆ ರೂಪಾಂತರಿಸಿ ಬರೆದ ಕವಿತೆಯ ಆರಂಭಿಕ ಪಂಕ್ತಿಗಳಿವು. ವಾಸ್ತವಿಕವಾಗಿ ನ್ಯೂಮನ್ ತೀವ್ರ ಬೇಸರ, ಒತ್ತಡ, ಅಸಹಾಯಕತೆಯಲ್ಲಿದ್ದ ಸಂದರ್ಭದಲ್ಲಿ ಈ ಕವಿತೆಯನ್ನು ಬರೆದದ್ದು, ಮೂಲದಲ್ಲಿ ಈ ಕವಿತೆಯ ಅರ್ಥ "ಕರುಣೆಯಿಂದ ಮುನ್ನಡೆಸು ಬೆಳಕೆ" ಎಂದಿತ್ತು. ಆದರೆ ಅದನ್ನು ಶ್ರೀಯವರು ಬಹಳ ಸೊಗಸಾಗಿ "ಪ್ರಾರ್ಥನೆ" ಎಂದು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಭಾರತೀಯ ಪರಂಪರೆಯಲ್ಲಿ ಪ್ರಮುಖವೂ ಪ್ರಧಾನವೂ ಆದ ಆಯಾಮಗಳೆಂದರೆ, (1) ಭಗವಂತನ ಸಾನ್ನಿಧ್ಯದ ಕೋರಿಕೆ; (2) ಭಕ್ತನು ತನ್ನ ಅಸಹಾಯಕತೆಯನ್ನು ತೋಡಿಕೊಳ್ಳುವಿಕೆ; (3) ಭಗವಂತನೇ ಹೊಣೆ ಹೊತ್ತುಕೊಂಡು ಭಕ್ತನನ್ನು ಸನ್ಮಾರ್ಗದಲ್ಲಿ ಮುನ್ನಡೆಸುವಿಕೆ; ಮತ್ತು (4) ಇಷ್ಟಾರ್ಥಸಿದ್ಧಿಗಾಗಿ ಪ್ರಾಂಜಲ ಬೇಡಿಕೆ.

ಈ ನಾಲ್ಕು ಬಗೆಯ ಪ್ರಾರ್ಥನೆಯಲ್ಲಿ ಮೊದಲ ಮೂರು ಅಕಾಮ್ಯಭಕ್ತಿ. ಕೊನೆಯದು ಕಾಮ್ಯಭಕ್ತಿ. ಬಹುತೇಕ ಜನರು ಸದಾ ಈ ಕಾಮ್ಯಭಕ್ತಿಯ ಮೊರೆ ಹೋಗುತ್ತಾರೆ. ಆದರೆ ಈ ಕಾಮ್ಯಭಕ್ತಿ ನಿಜವಾದ ಅರ್ಥದಲ್ಲಿ ಭಕ್ತಿಯಲ್ಲ. ಅದೊಂದು ವ್ಯವಹಾರ. ಭಗವಂತನ ನಿರಂತರ ಕರುಣೆಯಿಂದಲೇ ಈ ಜಗತ್ತು ಮುನ್ನಡೆಯುತ್ತಿದೆ. ಆತನಿಗೆ ಎಲ್ಲರ ಅಗತ್ಯ ತಿಳಿದೇ ಇರುತ್ತದೆ. ವಾಸ್ತವವಾಗಿ ಭಗವಂತನ ನೆನಪು ಇರುವುದಿಲ್ಲ. ಆ ಬಗೆಗಿನ ತಿಳಿವು ಮತ್ತು ನೈಜ ಅರಿವಿನ ನಡುವಣ ಹೊಯ್ದಾಟವೇ ಜೀವನದ ಸಂಘರ್ಷವಾಗಿರುತ್ತದೆ. ಎಲ್ಲವನ್ನೂ ಬಲ್ಲೆವು ಎಂಬ ಅಜ್ಞಾನವನ್ನೇ ಜ್ಞಾನವೆಂದು ಭ್ರಮಿಸಲಾಗುತ್ತದೆ. ಅಲ್ಲಮಪ್ರಭುದೇವರು "ಕತ್ತಲೆಯೊಳಗೆ ಹೊಳೆವ ಬೆಳಕಿನಂತೆ" ಎನ್ನುವಾಗ ಅಜ್ಞಾನದ ಅಂಧಕಾರದ ನಡುವೆ ಮಿಂಚಿನಂತೆ ಕಾಣಿಸುವ

ಚೈತನ್ಯದ ಬೆಳಕನ್ನು ಕುರಿತು ಬಹುಶಃ ಹೇಳುತ್ತಿದ್ದಾರೆ ಎನ್ನಿಸುತ್ತದೆ. ಸುತ್ತಲೂ ಈ ಕತ್ತಲೆಯೇ ಆವರಿಸಿಕೊಂಡಾಗ ಅಂತರಂಗದಲ್ಲಿ ಅಡಗಿರುವ ಬೆಳಕಿನ ಅರಿವು ಇರುವುದಿಲ್ಲ.

ಭಗವಂತ ಸದಾ ಕರುಣಾಳು, ದಯಾಪರ. ಅವನು ಜ್ಞಾನಾನಂದಮಯ ನಾಗಿರುವುದರಿಂದ ಅವನನ್ನು ಅಜ್ಞಾನ ಮುಸುಕುವುದಿಲ್ಲ. ಅವನಲ್ಲಿ ಅಹಂಕಾರಾದಿ ಅವಗುಣಗಳಿಗೆ ಸ್ಥಾನವೂ ಇಲ್ಲ. ಆದರೆ ಮನುಷ್ಯ ಅಹಂಕಾರದ ಮಹಾಸಾಗರ. ಆತ್ಮಸ್ತುತಿ, ಪರನಿಂದೆಗಳೇ ಅವನ ಸದಾಕಾಲದ ಉದ್ಯೋಗವಾಗಿದೆ. ಆದುದರಿಂದ ಬದುಕಿನಲ್ಲಿ ಕತ್ತಲೆ ಆವರಿಸಿರುತ್ತದೆ. ಕವಿತೆಯಲ್ಲಿ "ಇರುಳು ಕತ್ತಲೆಯ ಗವಿ, ಮನೆ ದೂರ" ಎಂಬ ಮಾತು ಎಷ್ಟು ಧ್ವನ್ಯರ್ಥವನ್ನು ಹೊಂದಿದೆ ಎಂಬುದು ಗಮನಾರ್ಹ. ಮೊದಲೇ ಅಜ್ಞಾನದ ಕರಾಳರಾತ್ರಿ. ಅಂಥ ಕತ್ತಲೆಯಿಂದ ಆವೃತವಾದ ಗವಿಯನ್ನು ದಾಟಬೇಕಾಗಿದೆ. ಸೇರಬೇಕಾದ ಮನೆಯೋ ಬಲು ದೂರ. ದಾರಿಯೇ ತಿಳಿಯುತ್ತಿಲ್ಲ. ಇದು ಕೇವಲ ವಾಚ್ಯಾರ್ಥವಲ್ಲ. ಭೌತಿಕ ಜಗತ್ತಿನ ಸಾಧಾರಣ ವರ್ಣನೆಯಲ್ಲ. ಲೌಕಿಕ ಜಗತ್ತಿನಲ್ಲಿ ಕಾಣುವ ಇಂಥ ಕತ್ತಲೆಯನ್ನು ಬೇರೆ ಉಪಕರಣಗಳಿಂದ ದೂರ ಮಾಡಬಹುದು. ಅಥವಾ ಸಂಜೆ ಮುಗಿದು, ಬೆಳಕು ಹರಿದ ಮೇಲೆ ಪ್ರಯಾಣ ಬೆಳಸಬಹುದು. ಆದರೆ ಹೃದಯದಲ್ಲಿ, ಮನಸ್ಸಿನಲ್ಲಿ ಕತ್ತಲೆ ಆವರಿಸಿದರೆ ಬೆಳಕು ಮೂಡುವುದೆಲ್ಲಿಂದ! ಮೊದಲೇ ಅಜ್ಞಾನದ ಕತ್ತಲೆಯಾವರಿಸಿದೆ. ಅದರ ನಡುವೆ ಹೃದಯದಲ್ಲಿಯೂ ಅಹಂಕಾರದ ಕತ್ತಲೆ ತುಂಬಿದೆ. ಜೀವನದ ಪರಮ ಗಮ್ಯ ತುಂಬ ದೂರದಲ್ಲಿದೆ. ಹೀಗಿರುವಾಗ ಅಂತರಂಗದ ಬೆಳಕು ಮುನ್ನೆಡೆಸಬೇಕೇ ಹೊರತು ಹೊರಗಿನ ಬೆಳಕು ಏನೂ ಮಾಡಲಾರದು. ಆದುದರಿಂದಲೇ ಕವಿ "ಕನಿಕರಿಸಿ ಕೈಹಿಡಿದು ನಡೆಸೆನ್ನನು" ಎಂದು ಆರ್ತವಾಗಿ ಪ್ರಾರ್ಥಿಸುತ್ತಾನೆ. ಮುಂದಿನ ಪಂಕ್ತಿಯಲ್ಲಿ "ಇಷ್ಟು ದಿನ ಸಲಹಿರುವೆ ಈ ಮೂರ್ಖನನು ನೀನು" ಎಂಬ ಮಾತು ಬರುತ್ತದೆ. ಮಾನವನ ಅಸೀಮ ಮೂರ್ಖತೆಯನ್ನು ತಿಳಿದೂ ಅವನನ್ನು ಕ್ಷಮಿಸಿ ಮುನ್ನಡೆಸುವ ಶಕ್ತಿ ಕರುಣಾಳುವಾದ ಭಗವಂತನಿಗೆ ಮಾತ್ರ ಸಾಧ್ಯವೆಂಬುದು ಕವಿಯ ಮನೋಗತ.

ಸಾಧಾರಣವಾಗಿ ಕಷ್ಟಕಾಲದಲ್ಲಿ ಮಾತ್ರ, ಭಗವಂತನ ಮೊರೆಹೋಗಲಾಗುತ್ತದೆ. "ಸಂಕಟ ಬಂದಾಗ ವೆಂಕಟರಮಣ" ಎಂಬ ಗಾದೆ ಹುಟ್ಟಿರುವುದು ಇದರಿಂದಲೇ ಇರಬಹುದು. ಯೌವ್ವನ, ಸುಖ, ಸಂಪತ್ತು ಜೀವನದಲ್ಲಿ ಇದ್ದಾಗ ಯಾರ ನೆನಪೂ ಆಗುವುದಿಲ್ಲ. ಕಷ್ಟ ಬಂದಾಗ ಮಾತ್ರ ಎಲ್ಲರ ನೆನಪಾಗುತ್ತದೆ. ಹಾಗೆ ಯಾರೂ ಬಾರದಿದ್ದಾಗ ಅಂತಿಮ ಶರಣಾಗತಿಯೆಂಬಂತೆ ಭಗವಂತನನ್ನು ಆಶ್ರಯಿಸಲಾಗುತ್ತದೆ. ಬಸವಣ್ಣನವರು "ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ

ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಪೂಜಿಸು ಕೂಡಲಸಂಗಮದೇವನ" ಎಂದಿದ್ದಾರೆ. ಅಸಹಾಯಕರಾಗಿ ಭಗವಂತನನ್ನು ಪ್ರಾರ್ಥಿಸಿಕೊಳ್ಳುವುದಕ್ಕಿಂತಲೂ ಆ ಚೈತನ್ಯದ ಬೆಳಕಿನ ಕಡೆ ನೋಡುವಾಗಲೇ ಪರಿವರ್ತನೆ ಹೊಂದಿ, ಜಾಗೃತರಾಗಿ ಆತನ ಅನಂತ ಕರುಣೆಗೆ ಪಾತ್ರರಾಗಲು ಯೋಗ್ಯತೆ ಗಳಿಸಿಕೊಳ್ಳಬೇಕು.

"ಕರುಣೆ" ಎಂಬುದು ಸಂಸ್ಕೃತದ "ಕರುಣಾ" ಎಂಬುದರ ತತ್ಸಮ. ಅದರ ಮೂಲಾರ್ಥ ಇತರರ ದುಃಖವನ್ನು ತನ್ನದಾಗಿಸಿಕೊಳ್ಳುವ ಮನಃಸ್ಥಿತಿ. ಇದು ಮನಸ್ಸಿನ ಒಂದು ಅತ್ಯಂತ ಸೂಕ್ಷ್ಮ ಭಾವ. "ಕರುಣೆ" ಎಂಬುದು "ದಯೆ" ಅಥವಾ "ಸಹಾನುಭೂತಿ"ಯಷ್ಟೇ ಅಲ್ಲ; ಅದೊಂದು ಮಾನವೀಯ ಆರ್ದ್ರಭಾವ; ಅಂತರಾಳದ ಕಾಳಜಿ. ಶುದ್ಧ ಮನಸ್ಸು ಮತ್ತು ನಿರ್ಮಲ ಪ್ರೀತಿಯ ಪ್ರತಿಫಲನ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು "ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ" (12–13) ಎಂದರೆ "ಯಾವ ಜೀವಿಗಳ ಮೇಲೂ ದ್ವೇಷವಿಲ್ಲದವರು, ಸ್ನೇಹಪರರು, ಕರುಣಾಮಯಿಗಳು, ಅವರೇ ಯೋಗಿಗಳು" ಎನ್ನುತ್ತಾನೆ. ಬುದ್ಧದೇವರು "ಕರುಣಾವತಿ ಚಿತ್ತಂ ಪ್ರಪಂಚಾಯ ವಿರಮತಿ" ಎಂದಿದ್ದಾರೆ. ಕರುಣೆಯಿಂದ ತುಂಬಿದ ಮನಸ್ಸು ಪ್ರಾಪಂಚಿಕ ಜಂಜಡಗಳಿಂದ ದೂರವಾಗಿರುತ್ತದೆ ಎನ್ನುವುದು ಇದರ ಸಾರ. ಭಗವಂತನ ಶುದ್ಧಚೈತನ್ಯವೇ ಇಂತಹ ಪರಮೋಚ್ಚ ಸ್ಥಿತಿ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಭವಿಸಂಗವಳಿದು ಭಕ್ತನಾದ ಬಳಿಕ
ಭಕ್ತಂಗೆ ಭವಿಸಂಗವತಿಘೋರ ನರಕ
ಶರಣಸತಿ ಲಿಂಗಪತಿಯಾದ ಬಳಿಕ
ಶರಣಂಗೆ ಸತಿಸಂಗವು ಅಘೋರನರಕ
ಚೆನ್ನಮಲ್ಲಿಕಾರ್ಜುನಾ
ಪ್ರಾಣಗುಣವಳಿಯದವರ ಸಂಗವೇ ಭಂಗ

**– ಅಕ್ಕಮಹಾದೇವಿ**

# ಸಂಪಾದಕೀಯ

> ತಿದ್ದಿಕೊಳೊ ನಿನ್ನ ನೀಂ; ಜಗವ ತಿದ್ದುವುದಿರಲಿ
> ತಿದ್ದಿಕೆಗಮೊಂದು ಮಿತಿಯುಂಟು ಮರೆಯದಿರು ।
> ಉದ್ದ ನೀಂ ಬೆರಳನಿತು ಬೆಳೆದೀಯೆ ಸಾಮಿಂದೆ
> ಸ್ಪರ್ಧಿಯೆ ತ್ರಿವಿಕ್ರಮಗೆ? – ಮಂಕುತಿಮ್ಮ ॥

ಅಂತರಂಗವನ್ನು ಸಾಂತ್ವನಗೊಳಿಸಿದ ಹೊರತು, ಶಾಂತಿಯು ಎಂದಿಗೂ ದೊರಕಲಾರದು. ರಾಷ್ಟ್ರಕವಿ ಕುವೆಂಪು ಅವರು ಈ ಕಾರಣದಿಂದಲೇ "ಅಂತರತಮ ನೀ ಗುರು ಹೇ ಆತ್ಮತಮೋಹಾರಿ" ಎಂದು ಪ್ರಾರ್ಥಿಸಿದ್ದಾರೆ. ನಮ್ಮೊಳಗಿರುವ ಆತ್ಮಸಾಕ್ಷಿಯೇ ನಮ್ಮ ನಿಜವಾದ ಗುರು. ಆ ಗುರುವಿನ ಕರೆಗೆ ಓಗೊಡಬೇಕು. ಅದಕ್ಕೆ ಬದಲಾಗಿ ಬಾಹ್ಯ ಜಗತ್ತಿನಲ್ಲಿ ಲೋಕದೆದುರು ಕಾಣುವ ಪ್ರತಿಯೊಂದು ವಸ್ತುವಿನ ಬಗೆಗೂ ನಮ್ಮ ಪ್ರತಿಕ್ರಿಯೆಯನ್ನು ನೀಡುತ್ತ ಕಾಲಹರಣ ಮಾಡುತ್ತೇವೆ. ನಮ್ಮ ದೃಷ್ಟಿಕೋನಕ್ಕೆ ಅನುಗುಣವಾಗಿ ವಸ್ತುಗಳನ್ನು, ಸಂಗತಿಗಳನ್ನು ಅಳೆದು ತೂಗಿ ನಿರ್ಧಾರವನ್ನು ಪ್ರಕಟಿಸುತ್ತೇವೆ. ಪ್ರತಿ ವಸ್ತುವಿಗೂ ಅದರದೇ ಆದ ಸೀಮಿತ ಬೆಲೆ ಮತ್ತು ಪ್ರಮಾಣವಿರುತ್ತದೆ. ಆದರೆ ನಮ್ಮ ಕಣ್ಣಳತೆಯ ಮೂಲಕ ಪ್ರತಿಯೊಂದರ ಮೌಲ್ಯ ನಾವೇ ಅಳೆಯುತ್ತೇವೆ ಮತ್ತು ನಿರ್ಧರಿಸುತ್ತೇವೆ. ಇದರಿಂದಾಗಿ ಪ್ರತಿ ವಸ್ತುವಿನ ಅಪಮೌಲ್ಯ ಮಾತ್ರವಲ್ಲ, ನಮ್ಮ ಅಪಮೌಲ್ಯವೂ ಆಗುತ್ತದೆ. ಆದರೆ ನಾವು ಈ ಅಪಮೌಲ್ಯೀಕರಣದ ಪರಿವೆಯೇ ಇಲ್ಲದೆ ವೃಥಾ ಬಳಲುತ್ತಿರುತ್ತೇವೆ. ಈ ಅಪಮೌಲ್ಯೀಕರಣದಿಂದ ಹೊರಬರಲು ಇರುವ ಏಕೈಕ ಮಾರ್ಗವೆಂದರೆ ನಮ್ಮ ಅಂತರಂಗದಲ್ಲಿ ನೆಲೆಸಿರುವ ಆ ಪರಮ ಗುರುವಿನ ಕಡೆಗೆ ದೃಷ್ಟಿ ಹರಿಸುವುದು. ತನುವ ಸಂತೈಸುವುದಕ್ಕೆ ಬದಲಾಗಿ ಮನವ ಸಂತೈಸುವುದು. ಆದರೆ ನಾವು ಎಲ್ಲ ಕಾಲದಲ್ಲಿಯೂ ಮನದ ಸಂತೈಕೆಯನ್ನೇ ಮರೆಯುತ್ತಿದ್ದೇವೆ.

ಡಿ.ವಿ.ಜಿ.ಯವರು ಮೇಲಿನ ಕಗ್ಗದಲ್ಲಿ, ಜಗತ್ತನ್ನು ತಿದ್ದುವ ಹಂಬಲದಿಂದಲೋ ಅತಿಯಾದ ಆತ್ಮವಿಶ್ವಾಸದಿಂದಲೋ ಅಥವಾ ಅದನ್ನೊಂದು ಪ್ರವೃತ್ತಿ ಮಾಡಿಕೊಂಡಿರುವುದರಿಂದಲೋ ಪ್ರತಿಯೊಬ್ಬರೂ ಮೊದಲು ಅರಿಯಬೇಕಾಗಿರುವ ಸಂಗತಿಯೆಂದರೆ, ಲೋಕದ ಡೊಂಕನ್ನು ತಿದ್ದುವ ಮೊದಲು ತಮ್ಮ ತಮ್ಮ ಮನದ ಡೊಂಕನ್ನು ತಿದ್ದುವುದು ಮುಖ್ಯವೆಂದು ಅರಿತುಕೊಳ್ಳಬೇಕೆಂದು ಹೇಳುತ್ತಾರೆ. ಲೋಕದಲ್ಲಿ ವಿಶ್ವಾಸವೆಂಬುದು ತುಂಬ ದೊಡ್ಡದು. ಅದರ ವೈವಿಧ್ಯವೂ ವೈಶಿಷ್ಟ್ಯವೂ ಅನಂತವಾದುದು.

ಅದನ್ನು ಅರಿಯುವುದು ದುಸ್ಸಾಧ್ಯ. ಅಂತರಂಗದಲ್ಲಿ ಲೋಕವನ್ನು ನೇರ್ಪುಗೊಳಿಸಲು ತೊಡಗುತ್ತೇವೆ ಎನ್ನುವುದು ಒಂದು ವ್ಯರ್ಥ ಸಾಹಸ. ಇಂಥ ಸಾಹಸವನ್ನು ಲೋಕದಲ್ಲಿ ಇದುವರೆಗೆ ಯಾರೂ ಮಾಡಿಲ್ಲವೇ ಎಂದರೆ ಮಾಡಿದ್ದಾರೆ, ಅಥವಾ ಆ ನಿಟ್ಟಿನಲ್ಲಿ ಪ್ರಾಂಜಲವಾಗಿ ಪ್ರಯತ್ನಿಸಿದ್ದಾರೆ. ರಾಮ, ಕೃಷ್ಣ, ಬುದ್ಧ, ಮಹಾವೀರ, ಶಂಕರ, ರಾಮಾನುಜ, ಬಸವಣ್ಣ ಹೀಗೆ ಎಲ್ಲ ಮಹಾನ್ ವ್ಯಕ್ತಿಗಳೂ ಈ ಕೆಲಸವನ್ನು ಮಾಡಿ ಹೋಗಿದ್ದಾರೆ. ಇವರೆಲ್ಲರೂ ಮೊದಲು ತಮ್ಮ ಅಂತರಂಗವನ್ನು ತಿದ್ದಿಕೊಂಡವರು. ಆತ್ಮಜ್ಞಾನವನ್ನು ಸಾಧಿಸಿದವರು. ಅಂತರಂಗದ ಬೆಳಕಿನಿಂದ ಬಹಿರಂಗದ ಜಗತ್ತನ್ನು ನೋಡಿದವರು. ಈ ಎಲ್ಲ ಮಹಾತ್ಮರಿಗೆ ಲೋಕವನ್ನು ತಿದ್ದುವುದಷ್ಟೇ ಉದ್ದೇಶವಾಗಿರಲಿಲ್ಲ. ಅವರುಗಳು ಸಹಜ ಕರುಣಾಳುಗಳು, ಮಾತೃಹೃದಯಿಗಳು. ಅವರಲ್ಲಿ ನೊಂದವರಿಗೆ ಸಾಂತ್ವನ ನೀಡುವ ಹೃದಯವಿತ್ತು. ಆದರೆ ನಾವೆಲ್ಲರೂ ರಾಮ, ಕೃಷ್ಣ, ಬುದ್ಧರಾಗಲು ಸಾಧ್ಯವಿಲ್ಲವಲ್ಲ!

ಈ ಪದ್ಯದ ಕೊನೆಯ ಸಾಲಿನಲ್ಲಿ "ಸ್ಪರ್ಧಿಯೇ ತ್ರಿವಿಕ್ರಮಗೆ" ಎಂಬ ಮಾತು ಬರುತ್ತದೆ. ವಿಷ್ಣುಪುರಾಣದಲ್ಲಿ ಬರುವ ಈ ವಾಮನಾವತಾರದ ಕಥೆ ಲೋಕಪ್ರಸಿದ್ಧವಾದುದು. ಮಹಾವಿಷ್ಣುವು ವಾಮನಾವತಾರದಲ್ಲಿ ಬೇಡಲು ಬಂದ ವಟುವಾಗಿ, ತನ್ನ ಅಂತಶ್ಶಕ್ತಿಯಿಂದ ತ್ರಿವಿಕ್ರಮನಾಗಿ ಬೆಳೆದು ಭೂಮಿ, ಆಕಾಶವನ್ನು ಎರಡು ಹೆಜ್ಜೆಗಳಲ್ಲಿ ಅಳೆದು ಮೂರನೇ ಹೆಜ್ಜೆಯನ್ನು ಬಲಿಯ ತಲೆಯ ಮೇಲಿರಿಸಿ ಅವನ ಅಹಂಕಾರವನ್ನು ಮೆಟ್ಟಿದ; ಆದರೂ ಅವನ ಮೇಲೆ ಕರುಣೆ ತೋರಿ ಅವನಿಗೆ ಪಾತಾಳದಲ್ಲಿ ಉನ್ನತ ಸ್ಥಾನವನ್ನು ಕಲ್ಪಿಸಿದ. ಆದರೆ ಎಲ್ಲರೂ ವಾಮನನಂತಾಗಲು ಸಾಧ್ಯವಿಲ್ಲ. ಅಂತೆಯೇ ಎಲ್ಲರೂ ಬುದ್ಧ, ಬಸವಣ್ಣನವರಾಗುವುದೂ ಸಾಧ್ಯವಿಲ್ಲ. ಅದರರ್ಥ ಇಂತಹ ಪ್ರಯತ್ನಗಳನ್ನು ನಾವು ಮಾಡಲೇಬಾರದು ಎಂದಲ್ಲ. ಆದರೆ ಲೋಕವನ್ನು ತಿದ್ದುವ ಮೊದಲು ನಮ್ಮ ನಮ್ಮ ಅಂತರಂಗವನ್ನು ಮೊದಲು ಅರಿಯಬೇಕು. ಅಂತರಂಗದ ಬೆಳಕು ಕಂಡವನು ಹೊರಗೂ ಬೆಳಕು ಕಾಣುತ್ತಾನೆ. ಒಳಗೆ ಕತ್ತಲಿರುವವನು ಹೊರಗೂ ಕತ್ತಲೆಯನ್ನೇ ಕಾಣುತ್ತಾನೆ. ಇವೆಲ್ಲಕ್ಕಿಂತ ಮಿಗಿಲಾಗಿ ಲೋಕವನ್ನು ತಿದ್ದುವುದಕ್ಕೂ ತನ್ನದೇ ಆದ ಒಂದು ಇತಿಮಿತಿ ಇರುತ್ತದೆ. ಇದು ಎಲ್ಲರಿಗೂ ಅನ್ವಯಿಸುತ್ತದೆ ಅಂದ ಮೇಲೆ, ಸಾಮಾನ್ಯ ಜನರ ಪಾಡೇನು! ಶ್ರೀಸಾಮಾನ್ಯನಾದವನು ಲೋಕದ ವಿಚಾರಗಳನ್ನು, ತನ್ನ ಅಂತರಂಗವನ್ನು ತಿದ್ದುವುದಕ್ಕೆ ಸಾಧನವಾಗಿ ಬಳಸಿಕೊಳ್ಳಬೇಕು ಅಷ್ಟೆ, ಲೋಕವನ್ನು ತಿದ್ದುವುದಕ್ಕೆ ಅಲ್ಲ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಪರಮಗತಿ

**ಶ್ರೀ ಸಿದ್ಧೇಶ್ವರ ಸ್ವಾಮಿಗಳು**

ವಸ್ತುಗಳನ್ನು ನಾವು ಬಯಸುತ್ತೇವೆ. ಬದುಕಿನ ಸಮೃದ್ಧಿಗೆ ವಸ್ತುಗಳ ಅಪೇಕ್ಷೆ ಅನಿವಾರ್ಯ. ನಾವು ಬಯಸುವ ವಸ್ತುಗಳಲ್ಲಿ ಕೆಲವು ಸ್ಥೂಲ, ಕೆಲವು ಸೂಕ್ಷ್ಮ. ಕೆಲವು ವಸ್ತುಗಳು ಸಹಜ ಸಂಗ್ರಹಣೀಯ, ಇನ್ನು ಕೆಲವು ವಸ್ತುಗಳು ಶ್ರಮಸಾಧ್ಯ. ಹಾಗೆ ದೊರೆತ ವಸ್ತುಗಳ ಆಲಂಬನೆಯಿಂದ ಬದುಕನ್ನು ರೂಪಿಸುತ್ತೇವೆ. ಅನ್ನ, ನೀರು, ಮನೆ-ಮಾರು ಎಲ್ಲವೂ ಇಂಥವು. ಇವುಗಳಲ್ಲಿ ಕೊರತೆಯಾದರೆ ಬದುಕು ಬಡವೆನಿಸುತ್ತದೆ. ಇವುಗಳ ಸಂಗ್ರಹ ಹೆಚ್ಚಿದಾಗ ಬದುಕು ಸಮೃದ್ಧವಾಯಿತೆನ್ನಿಸುತ್ತದೆ. ಆ ವಸ್ತುಗಳೇ ಬದುಕಿನ ಗತಿಗಳು!

ಆ ಗತಿಗಳಲ್ಲಿ ಎರಡು ವಿಧ; ಸಾಮಾನ್ಯ ಹಾಗೂ ವಿಶೇಷ. ದಿನ ದಿನವೂ ನಾವು ಬಯಸುವ ವಸ್ತುಗಳು ಸಾಮಾನ್ಯ ಗತಿಗಳು. ಅವು ಪ್ರಾಸಂಗಿಕ. ಸಂಪೂರ್ಣ ಬದುಕನ್ನು ವ್ಯಾಪಿಸಿದ ಗತಿಗಳೇ ವಿಶೇಷ ಗತಿಗಳು ಅಥವಾ ಅಂತಿಮ ಗತಿಗಳು. ಹತ್ತು ಹಲವು ವಸ್ತುಗಳನ್ನು ಬಯಸುತ್ತೇವೆ, ಕೆಲವನ್ನು ಪಡೆಯುತ್ತೇವೆ; ಆ ಗತಿಗಳು ಅಲ್ಲಿಗೆ ಮುಗಿಯುತ್ತವೆ. ಮನೆಯಿಂದ ಹೊರಟೆವು, ಈ ಮಂದಿರಕ್ಕೆ ಬಂದು ತಲುಪಬೇಕೆಂಬ ಉದ್ದೇಶದಿಂದ. ಇಲ್ಲಿಗೆ ಬಂದು ತಲುಪಿದೆವು, ಆ ಗತಿಗೆ ಕೊನೆ. ಅಲ್ಲಿಗೆ ಉದ್ದೇಶ ತೀರಿತು. ಅಷ್ಟಕ್ಕೆ ನಮಗೆ ಸಮಾಧಾನವಾಗುತ್ತದೆ. ಇಂಥ ಅನೇಕ ಗತಿಗಳು ಜೀವನದಲ್ಲಿ ಘಟಿಸುತ್ತವೆ. ಕ್ಷಣಕ್ಷಣಕ್ಕೆ ಈ ಗತಿಗಳು ಬದಲಾಗುತ್ತವೆ. ಕೆಲವು ಮಾತ್ರ ಬಾಳಿನುದ್ದಕ್ಕೂ ಉಳಿಯುತ್ತವೆ. ಅವು ಬದುಕಿಗೇ ಗತಿಗಳು !

ಸಣ್ಣ ಪುಟ್ಟ ಗತಿಗಳನ್ನು ಕುರಿತು ಚಿಂತಿಸುವ ಆವಶ್ಯಕತೆ ಇಲ್ಲ. ಅಂದಂದಿಗೆ ಅಷ್ಟಷ್ಟನ್ನು ನಾವು ಪೂರೈಸಿಕೊಳ್ಳುತ್ತೇವೆ. ಹಸಿವಾಯಿತು, ಒಂದಿಷ್ಟು ಅನ್ನವನ್ನು ಉಣ್ಣುತ್ತೇವೆ. ತೃಷೆಯಾಯಿತು, ಒಂದಿಷ್ಟು ನೀರನ್ನು ಕುಡಿಯುತ್ತೇವೆ. ಪ್ರಾಣಿಗಳಲ್ಲೂ ನಮ್ಮಲ್ಲೂ ಇದು ಸಾಮಾನ್ಯ. ಇಂತಹ ಗತಿಗಳನ್ನು ನಮಗೆ ತ್ಯಜಿಸಲಿಕ್ಕೆ ಆಗುವುದಿಲ್ಲ.

ನಾವು ಅಂತಿಮ ಗತಿ ಕುರಿತು ಸ್ವಲ್ಪ ಆಲೋಚಿಸುವುದು ಒಳಿತು. ಯಾವ ಗತಿಗಾಗಿ ಸಮಗ್ರ ಬದುಕನ್ನು ಮೀಸಲಾಗಿಟ್ಟಿರುತ್ತೇವೆಯೊ ಅಂಥ ಒಂದು ಗತಿಯನ್ನು ಪ್ರತಿಯೊಬ್ಬ ಮನುಷ್ಯ ಸ್ವೀಕರಿಸಿರುತ್ತಾನೆ. ತನ್ನ ಬದುಕಿನಲ್ಲಿ ಅದು ಅವನಿಗೆ ಪರಮ ಗತಿ, ಪರಮಾರ್ಥ. ಎಲ್ಲರೂ ಒಂದೇ ಗತಿಯನ್ನು ಸ್ವೀಕರಿಸಿರುವುದಿಲ್ಲ. ತಾನು ಪರಮಗತಿಯೆಂದು ತಿಳಿದುದು

ಅವಗತವಾದರೆ ತನ್ನ ಜೀವನ ಸಫಲ ಆಯಿತು ಎಂದು ಭಾವಿಸುತ್ತಾನೆ. ಒಂದು ವೇಳೆ ಆ ಗತಿಯ ತಲುಪದೇ ಇದ್ದರೆ ಜೀವನ ನಿಷ್ಫಲವಾಯಿತೆಂದು ಭಾವಿಸುತ್ತಾನೆ.

ಕೆಲವರು ಹೆಣ್ಣನ್ನು, ಕೆಲವರು ಹೊನ್ನನ್ನು, ಕೆಲವರು ರಾಜ್ಯವನ್ನು, ಕೆಲವರು ವಿದ್ಯೆಯನ್ನು, ಕೆಲವರು ಸ್ವರ್ಗವನ್ನು ಪರಮಗತಿ ಮಾಡಿಕೊಂಡರು.

ಹೊನ್ನಿಗಾಗಿ ಸತ್ತುದೊಂದು ಕೋಟ್ಯನುಕೋಟಿ
ಹೆಣ್ಣಿಗಾಗಿ ಸತ್ತುದೊಂದು ಕೋಟ್ಯನುಕೋಟಿ
ಮಣ್ಣಿಗಾಗಿ ಸತ್ತುದೊಂದು ಕೋಟ್ಯನುಕೋಟಿ
ನೀ ಗುರಿಯಾಗಿ ಸತ್ತವರನಾರನೂ ಕಾಣೆ ಗುಹೇಶ್ವರಾ!

ಯಾವುದಕ್ಕಾಗಿ ನಾವು ಸಾಯುತ್ತೇವೆ, ಯಾವುದಕ್ಕೆ ನಾವು ಇಷ್ಟು ಕಷ್ಟಪಡುತ್ತೇವೆ ಅದು ನಮ್ಮ ಪರಮ ಗತಿ ಎನ್ನುತ್ತೇವೆ. ಅದು ಸಿಕ್ಕಿತೆಂದರೆ ಸಂತೋಷಪಡುತ್ತೇವೆ. ಒಂದು ವೇಳೆ ಜೀವನದ ತುಂಬಾ ಕಷ್ಟಪಟ್ಟರೂ ಸಹಿತ ಸಿಗದೆ ಹೋಯಿತು ಎಂದರೆ ಮನಸ್ಸಿಗೆ ತಾಪ. ಜೀವನದಲ್ಲಿ ಅತೃಪ್ತಿ.

ಅಧಿಕಾರವನ್ನು ಪಡೆಯಬೇಕೆಂದು ಹಿಟ್ಲರ್ ಮಹಾಶಯ ಎಷ್ಟು ಕಷ್ಟಪಟ್ಟ! ಇಡೀ ಜಗತ್ತಿಗೆ ಏಕೈಕ ಒಡೆಯನಾಗಬೇಕೆಂದು ಬಯಸಿದ; ಸಾಹಸ ಮಾಡಿದ. ಅದು ಆತನ ಜೀವನದ ಪರಮ ಗುರಿಯಾಗಿತ್ತು. ಆ ಗುರಿಗಾಗಿ ಏನೆಲ್ಲವನ್ನು ಆತ ಮಾಡಲು ಸಿದ್ಧನಾಗಿದ್ದ. ಯಾವುದೇ ಸಾಧನವನ್ನು ಬಳಸಲು ಆತ ನಿರ್ಧರಿಸಿದ್ದ. ಘೋರ ಯುದ್ಧವನ್ನು ಮಾಡಿದ. ಜಗತ್ತನ್ನೆಲ್ಲಾ ಅಸ್ತವ್ಯಸ್ತವಾಗಿಸಿದ. ಫ್ರಾನ್ಸ್ ದೇಶವನ್ನು ಗೆದ್ದಾಗ ಕುಣಿದ, ನೃತ್ಯ ಮಾಡಿದ. ಪ್ರಪಂಚದ ಬಹು ಭಾಗ ಆತನ ಆಡಳಿತ ಕ್ಕೊಳಪಟ್ಟಿತು. ಆದರೆ ಅದೇ ಮನುಷ್ಯ ಸಾವಿನ ಕ್ಷಣದೊಳಗೆ ಅತ್ಯಂತ ನಿರಾಶನಾಗಿದ್ದ. ಅತ್ಯಂತ ಅಸಹನೀಯ ದುಃಖಕ್ಕೆ ಈಡಾಗಿದ್ದ. ಕೊನೆ ಕ್ಷಣದಲ್ಲಿ ಅವನಷ್ಟು ದುಃಖಿ ಆತನೇ!

ನಮ್ಮ ಜೀವನದಲ್ಲೂ ಹಾಗೆಯೇ. ನಮಗೆ ಹಲವಾರು ಗೊತ್ತು-ಗುರಿಗಳು. ಅವುಗಳಲ್ಲಿ ಕೆಲವು ಒಮ್ಮೆ ಸಾಧ್ಯವಾಗುತ್ತವೆ, ಒಮ್ಮೆ ಸಾಧ್ಯವಾಗುವುದಿಲ್ಲ. ಸಾಧ್ಯವಾದಾಗಲೂ ಸಂತೃಪ್ತಿ ಉಂಟಾಗುತ್ತದೆ ಎನ್ನುವ ಭರವಸೆ ಇಲ್ಲ. ಎಲ್ಲ ರಾಜ್ಯವನ್ನೂ ಪಾಂಡವರು ಪಡೆದರು. ಕೌರವರೆಲ್ಲರೂ ಮರಣ ಹೊಂದಿದರು. ಪಾಂಡವರು ಸಿಂಹಾಸನದ ಮೇಲೆ ಕುಳಿತಾಗ ಒಬ್ಬ ವೃದ್ಧೆ ಬಂದಳು, ನುಡಿದಳು ಧರ್ಮನಿಗೆ; "ಧರ್ಮರಾಜನೇ. ನೀನೀಗ ಆಳುವುದು ಯಾರನ್ನು? ಎಲ್ಲ ಬಂಧು-ಬಾಂಧವರು ಅಳಿದಿದ್ದಾರೆ. ಲಕ್ಷ ಲಕ್ಷ ಯುವಕರು ಅಸುನೀಗಿದ್ದಾರೆ. ಈಗ ಉಳಿದವರು ಲಕ್ಷಾಂತರ ವಿಧವೆಯರು, ಚಿಕ್ಕಮಕ್ಕಳು, ಅತ್ಯಂತ ಅಶಕ್ತ ಮುಪ್ಪಿನ ಜನ! ನೀನು ಅಂಥವರ ರಾಜ! ತಾಯಿ ದುಃಖಿ, ಹೆಣ್ಣುಮಕ್ಕಳು ದುಃಖಿತರು, ಮಕ್ಕಳೆಲ್ಲಾ ಅನಾಥರು! ಅವರನ್ನು ಆಳುವ ದೊರೆ ನೀನು!" ಆ ಮಾತು ಧರ್ಮನ ಮನಸ್ಸನ್ನು ವೇಧಿಸಿತು. ಆತ ಕಣ್ಣೀರ ಸುರಿಸಿದ.

ಯಾವುದನ್ನು ನಾವು ಪಡೆದರೆ ಜೀವನ ಸಾರ್ಥಕ ಆಗುತ್ತದೆ ಎಂದು ಭಾವಿಸಿಕೊಂಡಿರುತ್ತೇವೆಯೋ ಅದು ಸಿಕ್ಕಿರುತ್ತದೆ; ಆದರೆ ಸಮಾಧಾನ ಇರುವುದಿಲ್ಲ. ಆದ್ದರಿಂದ ಏನನ್ನು ಗತಿಯಾಗಿ ಇಟ್ಟುಕೊಳ್ಳಬೇಕು ಎನ್ನುವುದನ್ನು ಪರಾಮರ್ಶಿಸಬೇಕು ಮನುಷ್ಯ! ಈ ಲೌಕಿಕ ವಸ್ತುಗಳು ಬೇಡವೆಂದಲ್ಲ; ಇವೆಲ್ಲ ಇರಬೇಕು, ಆದರೆ ಪರಮಗತಿಯಾಗಿರಬಾರದು! ಪರಮಗತಿ ಯಾವುದಾಗಿರಬೇಕು? ಯಾವ ಗತಿಯನ್ನು ಪಡೆದರೆ ನಮಗೆ ಪರಮ ತೃಪ್ತಿಯಾದೀತೊ ಅದು. ಅದು ಯಾವುದು? ಯಾವ ಗತಿಗಾಗಿ ಸಂತರು ಈ ಪ್ರಪಂಚವನ್ನು ತೊರೆದರೋ ಅದು. ಬಹಳ ಜನ ಅಂತಹ ಗತಿಯನ್ನು ಪಡೆಯಲು ಪ್ರಪಂಚವನ್ನು ತೊರೆದುಹೋದರು. ಯಾವ ವಸ್ತುವನ್ನು ಬಯಸಿ ಬಯಸಿ ಸಂಗ್ರಹಿಸುತ್ತೇವೆಯೋ ಆ ವಸ್ತುವನ್ನು ತ್ಯಜಿಸಿ, ಯಾವುದನ್ನು ಪಡೆಯಲು ಸಂತರು ಹೊರಟುಹೋದರೋ ಅದನ್ನು ಪಡೆದ ಬಳಿಕ ಚಿರ ನೆಮ್ಮದಿ; ಯಾವುದರಿಂದ ನಿತ್ಯಪ್ರಸನ್ನತೆ ದೊರೆಯುತ್ತದೆಯೋ ಅದು ಪರಮ ಗತಿ. ಅದೇ ಪರಮಾರ್ಥ.

ಮೋಳಿಗೆ ಮಾರಯ್ಯ ಕಾಶ್ಮೀರದ ಪ್ರಭು. ಯಾವ ಕೊರತೆಯೂ ಇರಲಿಲ್ಲ. ಆದರೆ ಎಲ್ಲವನ್ನೂ ಪರಿತ್ಯಜಿಸಿ ಕಲ್ಯಾಣಕ್ಕೆ ಬಂದ. ಕುಟೀರ ನಿವಾಸಿಯಾದ. ಕಾಯಕ ಮಾಡಿ ಬದುಕಿದ! ಆತನ ಹೃದಯ ಎಷ್ಟು ನೆಮ್ಮದಿಯಿಂದ ತುಂಬಿಕೊಂಡಿತ್ತು! ಏನು ಪಡೆದಿದ್ದ? ಬಾಹ್ಯವಾಗಿ ಏನನ್ನೂ ಪಡೆದಿರಲಿಲ್ಲ. ಆದರೆ ಒಂದನ್ನು ಪಡೆದಿದ್ದ. ಯಾವ ವಸ್ತುವನ್ನು ಪಡೆದರೆ ಜೀವನ ಪವಿತ್ರವೆನಿಸೀತೋ ಆ ಅದ್ಭುತ ವಸ್ತುವನ್ನು ಪಡೆದಿದ್ದ. ಆಸೆ ಹರಿದುಹೋಗಿತ್ತು. ಮೋಳಿಗೆ ಮಾರಯ್ಯನಂತೆ ಭಗವಾನ್ ಬುದ್ಧ ರಾಜ. ಮಹಾವೀರನೂ ರಾಜ. ಎಲ್ಲವನ್ನೂ ಅವರು ತ್ಯಜಿಸಿದರು. ಬದುಕನ್ನು ಸಾರ್ಥಕಗೊಳಿಸುವ ಪರಮಾರ್ಥ ಪಡೆದರು. ಬುದ್ಧ ಮನೆ ಬಿಟ್ಟು ಹೋಗುವಾಗ ಬಹಳ ದುಃಖಿತ. ಬದುಕಿನ ಭೋಗ-ಸುಖದ ಕ್ಷಣಗಳನ್ನು ಕಂಡಿದ್ದ. ಅವನು ಒಮ್ಮೆ ರಾತ್ರಿ ನಿರ್ಧರಿಸಿದ. ಹೆಂಡತಿ ಮಲಗಿದ್ದಾಳೆ. ಮಗು ಅಲ್ಲೇ ಮಲಗಿಕೊಂಡಿದೆ. ಬಹಳ ಚಿಕ್ಕ ಮಗು. ಸುಂದರವಾದ ಮಗು. ಪರಮಾರ್ಥ ಸಾಧಿಸಲು ಹೊರಗೆ ಹೋಗಬೇಕೆಂದು ನಿರ್ಧರಿಸಿದ. ಮನಸ್ಸು ಹೇಳುತ್ತದೆ, 'ನೋಡು, ಇನ್ನೊಂದು ಕ್ಷಣ ಹೆಂಡತಿಯ ಮುಖವನ್ನು ನೋಡು, ಕೊನೆ ಕ್ಷಣ; ನೋಡು,' ಎಂದು. ಬುದ್ಧ ಮಾನಸಿಕ ಹೊಯ್ದಾಟಕ್ಕೆ ಸಿಕ್ಕಿದ್ದ. ಒಂದು ಕಡೆ ಅತ್ಯಂತ ಸುಂದರವಾದ ವೈವಾಹಿಕ ಜೀವನ. ಇನ್ನೊಂದು ಕಡೆ ಗೊತ್ತಿಲ್ಲದ ಸಾಧಕ ಜೀವನ! ಕೊನೆಯ ನಿರ್ಧಾರ ಮಾಡಿದ. ಪರಮಾರ್ಥ ಸಾಧನೆಗಾಗಿ ಅಲ್ಪಾರ್ಥ ತ್ಯಜಿಸಿದ.

ಮನುಷ್ಯ ಕೆಲವು ಸಂಗತಿಗಳನ್ನು ಅನಿವಾರ್ಯವಾಗಿ ತ್ಯಜಿಸಬೇಕಾಗುತ್ತದೆ. ಮಹತ್ತರ ಉದ್ದೇಶಕ್ಕಾಗಿ ಸಣ್ಣ ಪುಟ್ಟ ಉದ್ದೇಶಗಳನ್ನು ತ್ಯಜಿಸಬೇಕಾಗುತ್ತದೆ. ಆದರೆ ತ್ಯಜಿಸುವುದು ಬಹಳ ಕಷ್ಟ.

ಜೀವವುಳ್ಳನ್ನಕ್ಕರ ಕ್ರೋಧದ ಮೂಲ
ಕಾಯವುಳ್ಳನ್ನಕ್ಕರ ಕಾಮದ ಮೂಲ
ಸಂಸಾರವ್ಯಾಪ್ತಿಯ ಮೋಹವುಳ್ಳನ್ನಕ್ಕರ ಆಶೆಯ ಮೂಲ
ಇಂತಪ್ಪ ಆಶೆಯ ಕೆಡಿಸಿ
ಮೋಕ್ಷದ ಲೇಸ ತೋರಿ ಬದುಕಿಸಾ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ

"ನಾನು" ಎನ್ನುವುದು ಜೀವಭಾವ. ಸಾಮಾಜಿಕವಾಗಿ ಆರ್ಥಿಕವಾಗಿ ಅದನ್ನು ಪುಷ್ಟಿಗೊಳಿಸುವ ಯತ್ನ ಮನುಷ್ಯನದು. "ನಾನು" ಎಂಬುದು ಬಹು ದೊಡ್ಡವಾಗಬೇಕು ಎನ್ನುವ ಇಚ್ಛೆ ಇರುವವರೆಗೆ "ಕ್ರೋಧ" ಇದ್ದದ್ದೇ; ಏಕೆಂದರೆ "ಅಹಂ" ಅಭಿವೃದ್ಧಿಗೆ ಆತಂಕ ಬಹಳ. "ಕಾಯ" ಎಂದರೆ ದೇಹ; ದೇಹದ ಮೋಹ. ಅದರಿಂದ ಇನ್ನೊಂದು ದೇಹದ ಬಯಕೆ. ಅದು ಕಾಮ. "ಸಂಸಾರ"=ಭೋಗವಸ್ತುಗಳ ಪಸಾರ. ಹೆಚ್ಚು ಹೆಚ್ಚು ವಸ್ತುಗಳನ್ನು ಸಂಗ್ರಹಿಸುವ ರುಚಿ. ಆ ರುಚಿ ಇರುವವರೆಗೆ ಸಂಗ್ರಹಭಾವ ತಪ್ಪದು. ಅದು ಆಸೆ. ಈ ಆಸೆಯನ್ನು ಕೆಡಿಸಿದಾಗ ಮೋಕ್ಷ. ಅದು  ಬದುಕಿನ ಸಾಫಲ್ಯ!

ಇದು ಪರಮ ಗತಿ. ಜೀವಭಾವ ನಶಿಸಬೇಕು, ಕಾಯದ ಮೋಹ ಮರೆಯಾಗಬೇಕು. ಆ ಬಳಿಕ ಸಂಸಾರವ್ಯಾಪ್ತಿಯ ಹಂಗು ಹರಿಯಬೇಕು. ಈ ಮೂರೂ ಮಹತ್ವದ ಸಂಗತಿಗಳು! ದೊರೆತುದರಲ್ಲಿ ಸಂತೃಪ್ತಿಪಡುವ ಮನಸ್ಥಿತಿ. ಅದು ಇಲ್ಲವಾದರೆ ಕ್ರೋಧ, ಕಾಮ, ಆಸೆ ಏನೆಲ್ಲಾ ಉಂಟಾಗುತ್ತವೆ. ಅನಿವಾರ್ಯ ಯದೃಚ್ಛಾ ಮನಃಸ್ಥಿತಿ ಸಾಧಿಸಿದರೆ, ಕ್ರೋಧ ಕಾಮ ಮರೆಯಾಗುತ್ತವೆ. ಬಂಧನ ನೀಗುತ್ತದೆ. ಇಂತಹ ಅವಸ್ಥೆ ಮನುಷ್ಯನ ಪರಮಗತಿ! ನಿರಾಭಾರ ನಿಲುವು! ಅನಂತ ತೃಪ್ತಿಯ ಬದುಕು!

ಡಯೋಜಿನಸ್ ಗ್ರೀಸ್ ದೇಶದ ಬಹಳ ದೊಡ್ಡ ಸಂತ; ನಮ್ಮಲ್ಲಿ ಹೇಗೆ ಸರ್ವಜ್ಞಮೂರ್ತಿ ಇದ್ದನೋ ಹಾಗೆ ಡಯೋಜಿನಸ್ ಆ ದೇಶದಲ್ಲಿ. ಆತನ ಮೈಮೇಲೆ ಅತ್ಯಲ್ಪ ಬಟ್ಟೆ. ಕೈಯಲ್ಲಿ ಒಂದು ಕಟ್ಟಿಗೆ, ಮಗ್ಗುಲಲ್ಲಿ ಒಂದು ನಾಯಿ. ಇಷ್ಟು ಬಿಟ್ಟರೆ ಆತನಲ್ಲಿ ಯಾವ ವಸ್ತುಗಳೂ ಇಲ್ಲ. ಒಂದು ಗಿಡವೇ ಆತನ ಮನೆ. ಅಲ್ಲಿ ಒಂದು ಸಲ ಒಬ್ಬ ಅಧಿಕಾರಿ ಆತನನ್ನು ಕಾಣಲಿಕ್ಕೆ ಬಂದ. ಕಂಡ. ಆತನ ಮಾತುಗಳನ್ನು ಕೇಳಿ ಬಹಳ ಪ್ರಭಾವಿತನಾಗಿದ್ದ. ಅಥೆನ್ಸ್ ಪಟ್ಟಣದಲ್ಲೆಲ್ಲಾ ಡಯೋಜಿನಸ್‌ನ ಪ್ರಭಾವ ಆ ಕಾಲಕ್ಕೆ. ಆತ ನುಡಿದ, "ಗುರುಗಳೇ, ತಾವು ದೊಡ್ಡ ಜ್ಞಾನಿಗಳು. ತಮ್ಮ ಮಾತುಗಳನ್ನು ಕೇಳಿ ಸಾವಿರ ಸಾವಿರ ಜನ ತೃಪ್ತಿಪಟ್ಟವರು ಬದುಕಿನಲ್ಲಿದ್ದಾರೆ. ತಮ್ಮಂಥವರ ಮಾತುಗಳಿಂದ ಮನಸ್ಸಿಗೆ ಸಮಾಧಾನವಾಗುತ್ತದೆ. ತಮ್ಮ ಸೇವೆಗಾಗಿ ಒಂದು ವಿಶಾಲವಾದ ಮನೆ ಕೊಡುವ ಇಚ್ಛೆ. ಅದನ್ನು ತಮ್ಮ ಪದತಲದಲ್ಲಿ ಅರ್ಪಿಸುತ್ತೇನೆ. ತಾವು ಸ್ವೀಕರಿಸಿ ಹರಸಬೇಕು." ಆವಾಗ ಡಯೋಜಿನಸ್ ಹೇಳುತ್ತಾನೆ, "ನೋಡು ಗೆಳೆಯನೆ, ನಾನು ಈ ಗಿಡದ ಕೆಳಗೆ ಕುಳಿತೇ ಜ್ಞಾನೋದಯ ಮಾಡಿಕೊಂಡವ. ನನಗೆ ಈ ಗಿಡದ ನೆರಳು ಪ್ರಿಯ. ಅದರಿಂದ ಸಂತಸ. ಭವ್ಯಮಹಲಿನಲ್ಲಿ ಇದ್ದರೂ ಇಷ್ಟು ಸಂತಸವಾಗದು. ಆದ್ದರಿಂದ ನನಗೆ ಅರಮನೆಗಳ

ಆವಶ್ಯಕತೆ ಇಲ್ಲ. ನಿನಗೆ ಒಂದು ವೇಳೆ ನನ್ನ ತತ್ತ್ವಜ್ಞಾನ ಕೇಳಬೇಕೆನ್ನುವ ಇಚ್ಛೆ ಇದ್ದರೆ, ಅರಮನೆ ಬಿಟ್ಟು ಹೊರಗೆ ಬರಬೇಕೇ ವಿನಾಃ ನನ್ನನ್ನು ಅರಮನೆಯೊಳಗೆ ಕರೆದೊಯ್ಯುವುದಲ್ಲ. ನನ್ನ ಮಾತುಗಳು ಅರ್ಥವಾಗಬೇಕಿದ್ದರೆ ನೀನು ನಿನ್ನ ಪರಿಸರವನ್ನು ತ್ಯಜಿಸಿ ದೂರದ ಈ ಸ್ಥಾನಕ್ಕೆ ಬರಬೇಕು. ಇಲ್ಲಿ ನಿನ್ನದನ್ನು ನೀನು ಮರೆಯಬಲ್ಲೆ. ಇಲ್ಲಿ ಮೇಲುಕೀಳಿಲ್ಲ. ಎಲ್ಲ ಸಮ. ಎಲ್ಲ ಸುಭಗ."

ಯಾವುದರ ಆವಶ್ಯಕತೆಯೂ ಇರಲಿಲ್ಲ ಡಯೋಜಿನಸ್‌ಗೆ. ಮೈಮೇಲೆ ಸಾಕಷ್ಟು ಬಟ್ಟೆಯಿರಲಿಲ್ಲ, ಬಟ್ಟೆ ಬೇಕು ಅನ್ನುವ ಭಾವವಿರಲಿಲ್ಲ. ಮನೆ ಇರಲಿಲ್ಲ. ಮನೆ ಬೇಕು ಅನ್ನುವ ಕಲ್ಪನೆ ಇರಲಿಲ್ಲ. ನಮ್ಮಲ್ಲೂ ಅಂತಹ ಸಂತರು ಎಷ್ಟೋ ಜನ ಬದುಕಿ ಹೋಗಿದ್ದಾರೆ. ಎಲ್ಲಾ ಸಂತರಲ್ಲಿ ಒಂದು ಗುಣ ಕಾಣುತ್ತೇವೆ; ಅದು ಪರಮ ಆತ್ಮತೃಪ್ತಿ. ಅದ್ಭುತವಾದ ಆಂತರಿಕ ತೃಪ್ತಿ. ಇಂತಹ ತೃಪ್ತಿಯೇ ಸಂತರ ಪರಮಗತಿ. ಸತಾಂ ಹಿ ಗತಿಃ! ಸಂತರ ಗತಿ ಇದು. ಇಂತಹ ಸಂತರ ಗತಿಯನ್ನು ನಮ್ಮ ಜೀವನದಲ್ಲಿ ಪರಮಗತಿ ಯೆಂದು ಸ್ವೀಕಾರ ಮಾಡಿದರೆ ಜೀವನ ಸಂತ ಜೀವನವಾಗಿ ಮಾರ್ಪಡುತ್ತದೆ. ಈ ಗತಿಯನ್ನು ಪಡೆದ ಬಳಿಕ ಇನ್ನ್ಯಾವುದೇ ಗತಿ ಬೇಕು ಎನ್ನಿಸುವುದಿಲ್ಲ. ಏನೆಲ್ಲಾ ಗತಿಗಳನ್ನು ಪಡೆದರೂ ಮನಸ್ಸು ಇನ್ನೊಂದು ಗತಿಗಾಗಿ ಆಶಿಸುವುದು. ಆದ್ದರಿಂದ ಆ ಗತಿಗಳನ್ನು ಗೌಣವಾಗಿಸಿ ಈ ಗತಿಯನ್ನು ಸ್ವೀಕರಿಸಬೇಕು.

ಈ ಗತಿಯನ್ನು ಗುರಿಯಾಗಿಟ್ಟು ಭಗವತ್ ಚಿಂತನೆ ಮಾಡುವುದು. ಜಗತ್ತಿನ ಅಮೂಲ್ಯವಾದ ವಸ್ತುಗಳಲ್ಲಿ ಅತ್ಯಮೂಲ್ಯವಾದ ವಸ್ತು ಏನಾದರೂ ಇದ್ದರೆ ಅದು ದೇವರು ಅನ್ನುವ ಭಾವ. ಇದು ಭಗವತ್ ಚಿಂತನ. ದೇವರ ಕಲ್ಪನೆ ಮನಸ್ಸನ್ನು ತುಂಬಿ, ಈ ಜಗತ್ತಿನಲ್ಲಿ ಇನ್ನು ಯಾವುದೇ ವಸ್ತು ದೊಡ್ಡದಾಗಿ ಕಾಣದೇ ಇದ್ದರೆ ಅದು ಭಗವತ್ ಚಿಂತನ. ತಕ್ಕಡಿಯ ಒಂದು ಪರಡಿಯೊಳಗೆ ಭಗವತ್ ಭಾವ. ಇನ್ನೊಂದು ಪರಡಿಯೊಳಗೆ ಸಮಸ್ತ ಜಗತ್ತಿನ ವಸ್ತು ಒಡವೆ. ಇದನ್ನು ತೂಗಬೇಕು ಮನುಷ್ಯ. ಒಂದು ಕಡೆ ಇದು, ಒಂದು ಕಡೆ ಅದು. ಈ ಎರಡು ವಸ್ತುಗಳ ಮಧ್ಯ ಆಯ್ಕೆ ಮಾಡಿಕೊಳ್ಳುವುದು. ಭಗವತ್ ಭಾವ ಆರಿಸಿಕೊಂಡರೆ, ಭಗವತ್ ಸತ್ಯ ನಮ್ಮ ಬದುಕನ್ನು ತುಂಬಿಕೊಳ್ಳುತ್ತದೆ.

> ಕರಿಯನಿತ್ತಡೆ ಒಲ್ಲೆ. ಸಿರಿಯನಿತ್ತಡೆ ಒಲ್ಲೆ
> ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
> ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ
> ನಿಮ್ಮನಿತ್ತೆ ಕಾಣಾ ರಾಮನಾಥಾ!

ಎಂತಹ ಪ್ರೇಮ ಇದು! ಶರಣರ ಒಂದು ಶಬ್ದವನ್ನು ಕೇಳಿ ಜೋಪಾನ ಮಾಡಿ, ಅದನ್ನು ಬದುಕಿನ ಅಮೂಲ್ಯ ವಸ್ತು ಎಂದು ಭಾವಿಸುವುದು. ಕರಿ, ಸಿರಿ, ರಾಜ್ಯ ಏನೆಲ್ಲಾ ಇದ್ದರೂ ಅದನ್ನೆಲ್ಲಾ ಬದಿಗೆ ಸರಿಸಿ ಒಂದು ಕಡೆ ಸೂಳ್‌ನುಡಿ! ಅತ್ಯಂತ ಮಧುರವಾದ ಸತ್ಯಗರ್ಭಿತವಾದ ಆ ನುಡಿ ಯನ್ನು ಸ್ವೀಕರಿಸುವುದು ಜಾಣ್ಮೆ. ಈ ಸತ್ಯನುಡಿಯ ಪ್ರೇಮದಿಂದ ಜೀವನ ಸಫಲವಾಗುತ್ತದೆ.

□

# ಸಾತ್ವಿಕ ತೇಜಸ್ಸು

**ಜಗದ್ಗುರು ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು**
ಶ್ರೀ ಮುರುಘರಾಜೇಂದ್ರ ಮಠ, ಆನಂದಪುರಂ, ಶಿವಮೊಗ್ಗ ಜಿಲ್ಲೆ

ಈ ನಾಡಿನಲ್ಲಿ ವಿಶಿಷ್ಟ ಸಂಪ್ರದಾಯ, ಸಾಂಸ್ಕೃತಿಕ ಪರಂಪರೆ ಹೊಂದಿರುವ ಜಿಲ್ಲೆ ಮೈಸೂರು. ಈ ನಾಡನ್ನು ಆಳಿದ ಮೈಸೂರಿನ ಒಡೆಯರು, ದಾರ್ಶನಿಕ ಕವಿ ಕುವೆಂಪು ಸೇರಿದಂತೆ ವಿಚಾರವಾದಿಗಳು, ಕಲಾವಿದರು, ಸಾಹಿತಿಗಳ ಕರ್ಮಭೂಮಿ ಮೈಸೂರಿಗೆ ಧರ್ಮ ಹಾಗೂ ಆಧ್ಯಾತ್ಮದ ತಳಹದಿ ಸುತ್ತೂರು ಮಠ. ಬಸವಾದಿ ಶರಣರ ಆಶಯ ಗಳಾದ ಕಾಯಕ, ದಾಸೋಹ, ಅನುಭಾವಗಳನ್ನು ಸಮಾಜಮುಖಿ ಯಾಗಿ ಕಾಲಕಾಲಕ್ಕೆ ಜನಸಮುದಾಯಕ್ಕೆ ತಲುಪಿಸುವ ಮೂಲಕ ದಾರಿದೀಪವಾಗಿದೆ. ಇಂತಹ ವಿಶಿಷ್ಟ ಪರಂಪರೆಯ ಸುತ್ತೂರು ಮಠಕ್ಕೆ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಕಳಶಪ್ರಾಯರು. ಅವರ ಕಾಯಕನಿಷ್ಠೆ, ಸೇವಾ ಮನೋಭಾವ, ನಿಸ್ಪೃಹತೆ, ಸದೃಢ ಸಮಾಜ ಕಟ್ಟಬೇಕೆಂಬ ದೂರದೃಷ್ಟಿ ಜನಮಾನಸದಲ್ಲಿ ಅವರಿಗೆ ಶಾಶ್ವತ ಸ್ಥಾನ ಲಭಿಸಿದೆ.

ಸುಮಾರು 70ರ ದಶಕದಲ್ಲಿ ನಾವು ಶಿವಯೋಗಮಂದಿರದಲ್ಲಿ ಸಾಧಕರಾಗಿದ್ದಾಗ ಸಹಪಾಠಿಗಳೊಂದಿಗೆ ನಾಡಿನ ಮಠಗಳ ಮಠಾಧೀಶರ ಬಗ್ಗೆ ತುಲನಾತ್ಮಕ ಚಿಂತನೆ-ಸಮಾಲೋಚನೆ ನಡೆಯುತ್ತಿತ್ತು. ಆಗ ಪ್ರಸ್ತಾಪವಾಗುತ್ತಿದ್ದ ಮಠಗಳ ಸಾಲಿನಲ್ಲಿ ಸುತ್ತೂರು ಮತ್ತು ಅಂದಿನ ಶ್ರೀ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಪ್ರಮುಖ ವಿಷಯವಾಗಿರುತಿತ್ತು. ಹೀಗಾಗಿ 'ಕಣ್ಣರಿಯದಿದ್ದರೂ ಕರುಳರಿತಿತ್ತು' ಬಯಕೆ ಬರುವುದು ಕಣ್ಣನ್ನೆ ಕಾಣೋ ಎಂಬಂತೆ ಒಂದು ದಿನ ಕನಸೊ-ನೆನೆಸೊ ಎಂಬಂತೆ ಅನಿರೀಕ್ಷಿತವಾಗಿ ನಾವು ನೋಡಬೇಕೆಂದು ಹಂಬಲಿಸಿದ್ದ ಸುತ್ತೂರು ಶ್ರೀ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಶಿವಯೋಗ ಮಂದಿರಕ್ಕೆ ದಯಮಾಡಿಸಿದರು. ನಮ್ಮ ಸಂತೋಷಕ್ಕೆ ಪಾರವೇ ಇಲ್ಲ. ಭವ್ಯ ದೇಗುಲದ ಗರ್ಭಗುಡಿಯಲ್ಲಿರುವ ಪುಟ್ಟ ದೇವರ ಮೂರ್ತಿಯಂತೆ ದೊಡ್ಡಕಾರಿನಲ್ಲಿ ಮುಹೂರ್ತಮಾಡಿದ್ದ ಶ್ರೀಗಳನ್ನು ಗೌರವಪೂರಕವಾಗಿ ಸ್ವಾಗತಿಸಿದೆವು. ವಿಶಾಲವಾದ ಹಣೆ, ಎದ್ದು ಕಾಣುವ ತ್ರಿಪುಂಡ್ರ ಧಾರಣೆ, ತಿಳಿಕಾವಿ, ರಾಜಕಳೆಯೊಂದಿಗೆ ಆಧ್ಯಾತ್ಮದ ಸಾತ್ವಿಕ ತೇಜಸ್ಸು, ಪ್ರೀತಿ-ವಾತ್ಸಲ್ಯ ತುಂಬಿದ ಕೃಪಾದೃಷ್ಟಿ ನೋಟಮಾತ್ರದಿಂದಲೆ ಭಕ್ತಿ-ಗೌರವ ಮೂಡುವಂತ ಪ್ರಭಾವಪೂರ್ಣ ವ್ಯಕ್ತಿತ್ವ ಎಂಥವರನ್ನಾದರೂ ಆಕರ್ಷಿಸು ವಂತಿದ್ದ ಪೂಜ್ಯರ ಪ್ರಥಮ ದರ್ಶನ ಇನ್ನೂ ನಮ್ಮ ಮುಂದೆ ಹಚ್ಚ ಹಸಿರಾಗಿದೆ. ಸುತ್ತೂರು ಮಠದ ದಾರಿಯಲ್ಲೇ ನಡೆಯುತ್ತಿದ್ದ ಹುಬ್ಬಳ್ಳಿ ಶ್ರೀ ಜಗದ್ಗುರು ಮೂರುಸಾವಿರ ಮಠದ

ಶ್ರೀ ಕುಮಾರೇಶ್ವರ ಶಿವಯೋಗಿ ಸಂಘಕ್ಕೆ ಪ್ರವೇಶ ಪಡೆದದ್ದು ಒಂದು ಯೋಗಾಯೋಗ. ನಾವೆಲ್ಲ ಸಾಧಕರು ರಜೆಯಲ್ಲಿ ಪ್ರವಾಸ ಮಾಡಬೇಕೆಂದು ತೀರ್ಮಾನಿಸಿದೆವು. ಮೊದಲಿಗೆ ಸುತ್ತೂರು ಮಠದ ವೀಕ್ಷಣೆ ಹಾಗೂ ಶ್ರೀಗಳವರ ದರ್ಶನ ಪಡೆದು ಶ್ರೀಮಠದ ಕಾರ್ಯ ಕ್ಷೇತ್ರವನ್ನು ಕಣ್ಣಾರೆ ಕಾಣಬೇಕೆಂಬುದೆ ನಮ್ಮೆಲ್ಲರ ಅಭಿಲಾಷೆಯಾಗಿತ್ತು.

ಹುಬ್ಬಳ್ಳಿ ಹೊಸಮಠದ ಶ್ರೀ ಶಿವಬಸವಸ್ವಾಮಿಗಳವರು, ಚಿಂಚಣಿ ಶ್ರೀಗಳು, ಚಿಕ್ಕೋಡಿ ಶ್ರೀಗಳು, ಶ್ರೀ ಸಿದ್ಧರಾಮದೇವರು (ಗದಗ ತೋಂಟದಾರ್ಯಮಠದ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು) ಶ್ರೀ ಮಲ್ಲಿಕಾರ್ಜುನ ದೇವರು ತೇಲಸಂಗ, ಶಿರಹಟ್ಟಿ ಶ್ರೀಗಳು, ಶ್ರೀ ಪ್ರಭುದೇವರು ಕಲ್ಯಾಣ (ನಿಡಸೊಸಿ ಶ್ರೀಗಳು) ಶ್ರೀ ಗುರುಸಿದ್ಧದೇವರು ಕಾರಂಜಿಮಠ, ಶ್ರೀ ರುದ್ರಮುನಿದೇವರು, ಶ್ರೀ ಶಿವಕುಮಾರ ದೇವರು ಕುನ್ನಾಳು ಹೊರಟೆವು. ಸಂಘದ ಸಾಧಕ ಮೊದಲ ಪ್ರವಾಸವಾದುದರಿಂದ ಶ್ರೀ ಮೂಜಗಂ ಅವರು ಸಂತೋಷದಿಂದ ಬೀಳ್ಕೊಟ್ಟರು. ಸುತ್ತೂರು ಮಠದ ಆವರಣ ತಲುಪಿದಾಗ ಅದೆಷ್ಟು ಕುತೂಹಲ, ಆಸಕ್ತಿಯಿಂದ ಪ್ರವೇಶ ಪಡೆದೆವು. ಗುರುಕುಲದಲ್ಲಿದ್ದ ಶ್ರೀ ವಿಜಯಮಹಾಂತದೇವರು ಮತ್ತು ಕೆ.ಪಿ. ಬಸವರಾಜು ಅವರು ಆತ್ಮೀಯತೆಯಿಂದ ಬರಮಾಡಿಕೊಂಡರು. ಶ್ರೀ ಸನ್ನಿಧಿಯವರು ನಮ್ಮನ್ನೆಲ್ಲ ವೈಯಕ್ತಿಕವಾಗಿ ಪರಿಚಯಿಸಿಕೊಂಡ ರೀತಿ ಅವರ ಪ್ರೀತಿ ವಾತ್ಸಲ್ಯಪೂರ್ಣ ಕೃಪಾದೃಷ್ಟಿ ಮೊದಲ ದರ್ಶನದಲ್ಲೆ ಅವರ ಬಗ್ಗೆ ನಮಗೆ ಅಪಾರ ಅಭಿಮಾನ ಗೌರವ ಭಾವ ಮೂಡಿಸಿತು. ಆದರಾತಿಥ್ಯ ಸಿಬ್ಬಂದಿಯ ಸೇವಾಭಾವನೆ, ಸುಂದರ ಪರಿಸರ, ಭೇಟಿ ನೀಡುತ್ತಿದ್ದ ಗಣ್ಯರು, ಭಕ್ತಸಮೂಹ ಒಟ್ಟಾರೆ ಶ್ರೀಮಠದಲ್ಲಿ ನಾವು ಕಂಡ ದೃಶ್ಯಾವಳಿ ಶ್ರೀ ಸನ್ನಿಧಿಯವರ ಕರ್ತೃತ್ವ ಶಕ್ತಿಯ ನಿದರ್ಶನ ನಮ್ಮಂಥ ಸಾಧಕರಿಗೆ ಮಾರ್ಗದರ್ಶನವಾಗಿತ್ತು.

ನಾವು ಮೈಸೂರಿಗೆ ಭೇಟಿ ನೀಡಿದ ವರ್ಷ ನಡೆದ ಒಂದು ವಿಶೇಷ ಘಟನೆ ಐತಿಹಾಸಿಕ ದಾಖಲೆಯಾಯಿತು. ಆ ವರ್ಷದ ದಸರಾ ರಾಜಮನೆತನದ ಇತಿಹಾಸದಲ್ಲಿ ರಾಜಪರಂಪರೆ ಜಂಬೂಸವಾರಿ ಕೊನೆಯ ದರ್ಬಾರು ನಡೆದ ವರ್ಷವಾಗಿತ್ತು. ಮೈಸೂರು ಅರಸರಿಗೆ ಗುರುಗಳಾಗಿ ರಾಜಗುರುತಿಲಕರೆಂದು ಗೌರವಿಸಲ್ಪಟ್ಟಿದ್ದ ಶ್ರೀ ಜಗದ್ಗುರುಗಳವರಿಗೆ ಅರಸರ ದರ್ಬಾರಿನಲ್ಲಿ ಪ್ರತ್ಯೇಕ ವಿಶೇಷ ಆಸನ ವ್ಯವಸ್ಥೆಯೊಂದಿಗೆ ಸಾನ್ನಿಧ್ಯವಿರುತ್ತಿತ್ತು.

ಆಗ ಶ್ರೀ ಸನ್ನಿಧಿಯವರು ನಮ್ಮನ್ನೆಲ್ಲ ಜೊತೆಯಲ್ಲಿ ಕರೆದುಕೊಂಡು ಹೋಗ ಬಯಸಿದರು. ಆಗ ನಮಗೆಲ್ಲ ಅರಮನೆಯ ಸಂಪ್ರದಾಯದಂತೆ ಕಚ್ಚೆಪಂಚೆ, ಪೇಟಾತೊಡಿಸಿ ದರ್ಬಾರ್ ವೀಕ್ಷಣೆಗೆ ಅನುವು ಮಾಡಿಕೊಟ್ಟದ್ದು ನಮ್ಮ ಸ್ಮರಣೀಯ ಘಟನೆಗಳಲ್ಲೊಂದು. ಮೈಸೂರಿನ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ವೀಕ್ಷಣೆ ಮಾಡಿದ್ದು, ಶ್ರೀಮಠದ ಶಿಕ್ಷಣ ಸಂಸ್ಥೆಗಳ ವೀಕ್ಷಣೆ, ಸುಂದರ ಭವ್ಯವಾದ ಕಟ್ಟಡಗಳು, ಉದ್ಯಾನವನ, ಮುಖ್ಯಸ್ಥರು, ಸಿಬ್ಬಂದಿಯ ಸೌಜನ್ಯಪೂರ್ಣ ನಡವಳಿಕೆ ಎಲ್ಲೆಲ್ಲೂ ಪೂಜ್ಯ ಸನ್ನಿಧಿಯವರ ಪ್ರಭಾವದ ಪ್ರತಿಬಿಂಬ ದಂತಿತ್ತು. ಸುತ್ತೂರು ಮೂಲಮಠದ ವೀಕ್ಷಣೆಗೆ ಅವಕಾಶ ಕಲ್ಪಿಸಿದರು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರ ಗದ್ದುಗೆ ದರ್ಶನ, ಕಾಷ್ಠದಿಂದ ನಿರ್ಮಿತವಾದ ಸುಂದರಮಠ ಕಪಿಲಾ ನದಿ ದಡದಲ್ಲಿ ಕಂಗೊಳಿಸುತ್ತಿತ್ತು. ಮಂತ್ರ ಮಹರ್ಷಿ ಶ್ರೀ ಜಗದ್ಗುರುಗಳವರ ಮಹಾಮಂತ್ರ

ಲೇಖನದ ಮಹಾಗ್ರಂಥಗಳ ದರ್ಶನ ಪಡೆದುದು ಮಹಾಮಂತ್ರದ ಮೂಲಕ ಮಂತ್ರ ಮಹರ್ಷಿ ಜಗದ್ಗುರುಗಳವರ ದರ್ಶನ ಪಡೆದ ಅನುಭವ ನಮ್ಮದಾಯಿತು.

ಶ್ರೀ ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಜಯಂತಿ ಮಹೋತ್ಸವಕ್ಕೆ, ವಿಚಾರಸಂಕಿರಣ ಹೀಗೆ ಹಲವು ಕಾರ್ಯಕ್ರಮಗಳಿಗೆ ಕರೆಸುತ್ತಿದ್ದುದು, ನಮ್ಮ ಬಗ್ಗೆ ವಿಶೇಷವಾದ ಪ್ರೀತಿಯನ್ನು ತೋರುತ್ತಿದ್ದುದು ನಮಗೆ ಅವರ ಬಗ್ಗೆ ಅಪಾರ ಅಭಿಮಾನ ಗೌರವ ಮೂಡಲು ಕಾರಣವಾಗಿತ್ತು. ಪೂಜ್ಯರು ಶಿವಮೊಗ್ಗ ಶ್ರೀ ಬಸವೇಶ್ವರ ಸಮಾಜದ ಬಸವಸದನ ಉದ್ಘಾಟನಾ ಸಮಾರಂಭಕ್ಕೆ ದಯಮಾಡಿಸಿದ್ದು ಅವರೊಂದಿಗೆ ವೇದಿಕೆ ಹಂಚಿಕೊಂಡದ್ದು ಹಾಗೂ ಅವರ ಬಗ್ಗೆ ಮಲೆನಾಡಿನ ಭಕ್ತರು ಇಟ್ಟುಕೊಂಡ ಶ್ರದ್ಧೆ-ಭಕ್ತಿಯನ್ನು ಕಂಡು ಶ್ರೀಗಳವರ ಮೇಲಿನ ಗೌರವ ಇಮ್ಮಡಿಯಾಯಿತು.

ಶ್ರೀಗಳವರ ಸಮಾಜಸೇವಾಕಾರ್ಯ ಬಹಳ ದೊಡ್ಡದು. ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ, ಅವುಗಳನ್ನು ನಡೆಸಲು ಬಂಗಾರದ ಕರಡಿಗೆಯನ್ನು ಮಾರಿ ಹಾಸ್ಟೆಲ್ ನಡೆಸಿದರೆಂಬ ಸಂಗತಿ ಅನುಕರಣೀಯ ಆದರ್ಶವಾದುದು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸ್ಥಾಪಿಸಿ ಅದನ್ನು ಸಮರ್ಥವಾಗಿ ಮುನ್ನಡೆಸಲು ವಿದ್ವಾಂಸರಾದ ಡಾ. ತಿಪ್ಪೇರುದ್ರಸ್ವಾಮಿಯವರನ್ನು ಆ ಸಂಸ್ಥೆಗೆ ದೊರಕಿಸಿದ್ದು ಶ್ರೀಗಳವರ ದೂರದೃಷ್ಟಿಗೊಂದು ಕೈಗನ್ನಡಿ. ಇಂದು ಆ ಸಂಸ್ಥೆ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ನಿಂತು ಬಸವಾದಿ ಶರಣರ ಸಂದೇಶ ಸಾರುತ್ತಿರುವುದು ಹೆಮ್ಮೆಯಲ್ಲವೇ? ಜೆಎಸ್ಎಸ್ ಮಹಾವಿದ್ಯಾಪೀಠ ಮಠ-ಮಠಮಾನ್ಯಗಳ ಇತಿಹಾಸದಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಈ ಮಟ್ಟದ ಸೇವೆಸಲ್ಲಿಸಿರುವುದು ಇನ್ನೊಂದಿಲ್ಲ.

ಪ್ರಸ್ತುತ ಅತ್ಯಂತ ಸಮರ್ಥ ದಕ್ಷ, ದೂರದೃಷ್ಟಿಯುಳ್ಳ, ಸೇವಾ ಮನೋಭಾವದ ಉತ್ತರಾಧಿಕಾರಿ ಆಯ್ಕೆಮಾಡಿ ಪೂರಕ ಶಿಕ್ಷಣ, ಸಂಸ್ಕಾರ ನೀಡಿ ಶ್ರೀ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳವರನ್ನು ಸಮಾಜಕ್ಕೆ ನೀಡಿದ್ದು ಒಂದು ದೊಡ್ಡ ಕೊಡುಗೆ. ಉತ್ತರಾಧಿಕಾರಿ ಆಯ್ಕೆಯಲ್ಲಿಯೂ ಯಶಸ್ವಿಯಾಗಿ ಮಾದರಿಯಾಗಿದ್ದಾರೆ. ಆ ಹಿಂದಿನ ಶಕ್ತಿಯೇ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು.

ಭಾರತೀಯ ಸಾಂಸ್ಕೃತಿಕ ಪರಿಷತ್ತಿನ ಧರ್ಮದರ್ಶಿ ಪ್ರವರ್ತಕ ಮಂಡಳಿ ಸದಸ್ಯರಾಗಿ ನಮ್ಮನ್ನು ಆಯ್ಕೆ ಮಾಡಿದ್ದರು. ಇದು ಸುತ್ತೂರು ಮಠದ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಿರುವುದು ನಾಲ್ಕು ದಶಕದ ಹಿಂದೆ ಆರಂಭವಾದ ಶ್ರೀಕ್ಷೇತ್ರ ಸುತ್ತೂರು ಮಠಕ್ಕೂ ನಮಗೂ ಇದ್ದ ಸಂಬಂಧ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಅಂತಃಕರಣ ಪ್ರೀತಿಯಿಂದ ಬೆಳೆದು ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ಆತ್ಮೀಯತೆಯಿಂದ ನಿರಂತರವಾಗಿ ವ್ಯಾಪಕವಾಗಿ ಬೆಳೆದು ಬಂದಿರುವುದು ಅಪೂರ್ವಯೋಗ. ಮಂತ್ರಮಹರ್ಷಿಗಳು ರಾಜಗುರುತಿಲಕ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಮತ್ತು ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು ಇವರೀರ್ವರ ಸಂಕಲ್ಪ, ಕರ್ತೃತ್ವಶಕ್ತಿ ದೂರದೃಷ್ಟಿಯು ಮುಪ್ಪುರಿಗೊಂಡು ವ್ಯಾಪಕವಾಗಿದೆ.

□

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

**ಕಂ॥** ದೇವೇಶ ನಿಮ್ಮ ಪದರಾ ।
ಜೀವದ ಭಾವನೆಯ ಪೆರ್ಮೆಯೆಂತುಟೋ ಮುನಿಪ ॥
ರ್ತೀವಿರ್ದ ಬನದ ಪರಿಸರ ।
ದೋವರಿಯೋಳ್ಮಿಳ್ತು ಸುಳಿಯಲಳುವುದಜಸ್ರಂ ॥ ೬೭ ॥

**ಟೀಕೆ ॥** ದೇವೇಶ – ದೇವತೆಗಳಿಗೊಡೆಯನಾದ ಶಿವನೇ, ನಿಮ್ಮ ಪದರಾಜೀವದ – ಅಡಿದಾವರೆಯ, ಭಾವನೆಯ – ಧ್ಯಾನದ, ಪೆರ್ಮೆ – ಹೆಚ್ಚಿಕೆ, ಎಂತುಟೋ – ಎಷ್ಟರದೋ, ಮುನಿಪರ್, ತೀವಿ – ತುಂಬಿಯಿರ್ದ, ಬನದ – ವನದ ಪರಿಸರದ, ಓವರಿಯೋಳ್ – ಸಂದಿನಲ್ಲಿ, ಸುಳಿಯಲು – ತಿರುಗುವದಕ್ಕೆ, ಮಿಳ್ತು – ಮೃತ್ಯುವು, ಅಜಸ್ರಂ – ಯಾವಾಗಲೂ, ಅಳುವುದು – ಅಳುತ್ತಿರುವದು ॥

**ತಾ ॥** ಶಿವನೇ, ಕಾಲಾಂತಕನಾದ ನಿನ್ನ ಚರಣಧ್ಯಾನದ ಘನತೆಯು ಅಪರಿಮಿತವಾದ್ದು. ಹೇಗೆಂದರೆ ನಿನ್ನ ಭಕ್ತರಾದ ಮುನಿಗಳಿರುವ ವನದ ಬಳಿಗೆ ಬರಬೇಕೆಂದರೆ, ಮೃತ್ಯುದೇವತೆ ಹೆದರಿ ಅಳುತ್ತಿರುವಳು. ಅಲ್ಲಿನ ಶಿವಯೋಗಿಗಳಿಗೆ ಮೃತ್ಯುಭಯವಿಲ್ಲವೆಂದು ಭಾವವು. (ಅತಿಶಯೋಕ್ತ್ಯಲಂಕಾರವು).

ಮ ॥ ಜಡೆಯಂ ಸುಂಕಿಡುವಕ್ಷಮಾಲೆಗಳನೊಳ್ಪಿಂ ಕೋವ ಯೋಗಾಂಗಮಂ ।
ಬಿಡದಭ್ಯಾಸಿಪ ಜನ್ನಮಂ ನೆಗಳ್ವ ಭಸ್ಮೋದ್ಧೂಳನಂಗೈಯ್ವ ಸ ॥
ನ್ಮೃಡನಂ ಜಾನಿಪ ನಾರಸೀರೆಯನಲಂಪಿಂ ಮಾಳ್ಪ ವೇದಾಂತದಿಂ ।
ಪಡೆದರ್ಥಂಗಳನಾಲಿಪುಜ್ಜುಗದೊಳಿರ್ಕುಂ ತಾಪಸಪ್ರೋತ್ಕರಂ ॥ ೬೮ ॥

**ಟೀಕೆ ॥** ತಾಪಸಪ್ರೋತ್ಕರಂ – ತಪಸ್ವಿಗಳ ಗುಂಪು, ಜಡೆಯಂ – ಜಡೆಯನ್ನು, ಸುಂಕಿಡುವ – ಸುಕ್ಕಿ ಬಿಡಿಸುವ ಅಥವಾ ಸುತ್ತಿಕೊಳ್ಳುವ, ಅಕ್ಷಮಾಲೆಗಳು – ಜಪಸರಗಳನ್ನು, ಒಳ್ಪಿಂ – ಚನ್ನಾಗಿ, ಕೋವ – ಪೋಣಿಸುವ, ಯೋಗಾಂಗಮಂ – ಯಮನಿಯ ಮಾದ್ಯಷ್ಟಾಂಗಗಳನ್ನು, ಬಿಡದೆ ಅಭ್ಯಾಸಿಪ – ಕಲಿಯುತ್ತಿರುವ, ಜನ್ನಮಂ – ಯಜ್ಞವನ್ನು, ನೆಗಳ್ವ – ಮಾಡುವ, ಭಸ್ಮೋದ್ಧೂಳನಂ – ವಿಭೂತಿಲೇಪನವನ್ನು, ಗೈವ – ಮಾಡುವ, ಸನ್ಮೃಡನಂ – ಸದ್ರೂಪನಾಗಿಯೂ, ಸುಖಕರನಾಗಿಯೂ ಇರುವ ಶಿವನನ್ನು, ಜಾನಿಪ

– ಧ್ಯಾನಿಸುವ ಮತ್ತು, ನಾರಸೀರೆಯನು – ನಾರ ಮಗುಟವನ್ನು, ಅಲಂಪಿಂ – ಅನಾಯಾಸದಿಂದ, ಮಾಳ್ಪ – ಹೆಣೆಯುತ್ತಿರುವ, ವೇದಾಂತದಿಂ – ಉಪನಿಷತ್ತುಗಳಿಂದ, ಪಡೆದ – ತಿಳಿಯಬಂದ, ಅರ್ಥಂಗಳನು – ಶಿವಾಧಿಕ್ಯಾದಿ ಸಿದ್ಧಾಂತಗಳನ್ನು, ಆಲಿಪ – ಕೇಳುತ್ತಿರುವ, ಉಜ್ಜುಗದೋಳ್ – ಉದ್ಯೋಗದಲ್ಲಿ, ಇರ್ಕುಂ – ಇರುವುದು.

**ತಾ ॥** ಋಷಿಗಳು ಯಾವಾಗಲೂ ಸ್ವಧರ್ಮನಿಷ್ಠರಾಗಿ ಶಿವಯೋಗಕ್ಕೆ ಸಾಧನಗಳನ್ನು ಹವಣಿಸಿಕೊಳ್ಳುತ್ತಿರುವರು (ಸ್ವಭಾವೋಕ್ತ್ಯಲಂಕಾರ).

ಮ ॥ ಒಡಲಂ ಪುತ್ತಡರ್ದೆತ್ತಲು ಮುಸುಕೆ ಪಾವೇಳ್ದಾಡೆ ತನ್ಮಸ್ತಕಂ ।
ಬಿಡುದುದ್ಯನ್ನಖಪಙ್ತಿಬೇರ್ವರಿಯೆ ದೀರ್ಘಶ್ಮಶ್ರುವೋಳ್ಪಕ್ಕಿಗೂ ॥
ಡಿಡೆ ಸುತ್ತಂ ಜಡೆವಳ್ಳಿ ಪರ್ಬಿರೆ ಮೃಡಧ್ಯಾನಾಮೃತಾಸ್ವಾದನಂ ।
ಬಡೆದುದ್ಯುತ್ತಪಮಾಂತು ನಿಶ್ಚಲತೆಯಿಂ ಕಣ್ಗೊಪ್ಪಿದರ್ತಾಪಸರ್ ॥ ೬೯ ॥

**ಟೀಕೆ ॥** ಒಡಲಂ – ಮೈಯನ್ನು, ಪುತ್ತು ಅಡರ್ದು – ಹುತ್ತು ಬೆಳದು, ಎತ್ತಲೂ – ಯಾವ ಕಡೆಯಲ್ಲಿ ನೋಡಿದರೂ, ಮುಸುಕೆ – ಮುಚ್ಚಿಕೊಂಡಿರುವಲ್ಲಿ, ತನ್ಮಸ್ತಕಂ – ಆ ತಲೆಯನ್ನು, ಬಿಡದೆ ಪಾವು – ಸರ್ಪವು, ಏಳ್ದು – ಎದ್ದು, ಆಡೆ – ಹೆಡೆ ಬಿಚ್ಚಿಕೊಂಡು ಆಡುತ್ತಿರಲು, ಉದ್ಯುನ್ನಖಪಂಕ್ತಿ – ಬೆಳೆಯುತ್ತಿರುವ ಉಗುರುಗಳ ಸಾಲು, ಬೇರ್ವರಿಯೆ – ನೆಲದಲ್ಲಿ ನುಗ್ಗಿ ಬೇರು ಬಿಟ್ಟುಕೊಳ್ಳುತ್ತಿರಲು, ದೀರ್ಘಶ್ಮಶ್ರುವೋಳ್ – ನೀಳವಾದ ಗಡ್ಡಮೀಸೆಗಳಲ್ಲಿ, ಪಕ್ಕಿ – ಹಕ್ಕಿಯು, ಗೂಡಿಡೆ – ಗೂಡನ್ನು ಇಟ್ಟಿರಲು, ಜಡೆವಳ್ಳಿ – ಬಳ್ಳಿಯ ಹಾಗಿರುವ ಜಡೆಯು ಸುತ್ತಂ – ಸುತ್ತಲೂ, ಪರ್ಬಿ – ಹಬ್ಬಿಯಿರೆ, ಮೃಡ – ಶಿವನ, ಧ್ಯಾನಾಮೃತಸ್ವಾದನಂ – ಧ್ಯಾನಭಾವನೆಯಿಂದಾದ, ಅಮೃತ – ಸುಖರಸದ, ಆಸ್ವಾದನಂ – ಅನುಭವವನ್ನು, ಬಡೆದ – ಪಡೆದ, ಉದ್ಯುತ್ತಮ – ವೃದ್ಧಿಹೊಂದುತ್ತಿರುವ, ತಪಮಂ–ಶಿವಯೋಗವನ್ನು, ಆಂತು – ಧರಿಸಿ, ನಿಶ್ಚಲತೆಯಿಂ – ಚಲನವಿಲ್ಲದಿರುವಿಕೆಯ, ತಾಪಸರ್ – ತಪಸ್ವಿಗಳು, ಕಣ್ಗೆ – ಕಣ್ಣಿಗೆ, ಒಪ್ಪಿದರ್ – ಚೆನ್ನಾಗಿ ಕಂಡರು.

**ತಾ ॥** ಯೋಗಿಗಳು ದೀರ್ಘಕಾಲ ಕುಂಭಕದಿಂದ ಚಿರಕಾಲ ಸಮಾಧಿಯೊಳು ನಿಶ್ಚೇಷ್ಟರಾಗಿ ಕುಳಿತು ಶಿವೈಕ್ಯಾನುಸಂಧಾನದ ಆನಂದವನ್ನನುಭವಿಸುತ್ತಿರುವಾಗ ಭೌತಿಕಂಗಳಾದ ಅವರ ದೇಹಾದಿಗಳಲ್ಲಿ ಕಾಲಸ್ವಭಾವದಿಂದ ಮೈಮೇಲೆ ಹುತ್ತ ಬೆಳೆದು ತಲೆಯ ಮೇಲೆ ಹಾವಾಡುತ್ತ, ಉಗುರು ಬೆಳೆದು ಬೇರಿಟ್ಟು, ಗಡ್ಡಮೀಸೆಗಳಲ್ಲಿ ಹಕ್ಕಿಗಳು ಗೂಡಿಟ್ಟು, ಬಳ್ಳಿಗಳ ಹಾಗೆ ಜಡೆಗಳು ಬೆಳೆಯುತ್ತಿದ್ದವು ಎಂದು ಹಠಯೋಗ ಸ್ವಭಾವವು ಬಣ್ಣಿಸಲ್ಪಟ್ಟಿದೆ ॥ ೬೯ ॥

ಮ॥ ಸ್ಥಿರಪದ್ಮಾಸನದಿಂದೆ ಸರ್ವಕರಣವ್ಯಾಪಾರಮಂ ಮಾಣ್ದು ಸಂ ।
ಚರಣಂಬೆತ್ತ ಸುವೃತ್ತಿಯಂ ತಡೆದುಮಾಜ್ಞಾಚಕ್ರಪಂಕೇಜ ವಿ ॥
ಷ್ಟರ ಮಧ್ಯಸ್ಥಿತ ಮಂಡಲತ್ರಯದಖಂಡಜ್ಯೋತಿಯಂ ಶುದ್ಧ ಭಾ ।
ಸುರ ಚಿಚ್ಚಕ್ಷುವಿನೀಕ್ಷಿಸುತ್ತೆ ಯಮಿವೃಂದಂ ತಾಳ್ದುಮಾನಂದಮಂ ॥ ೭೦ ॥

**ಟೀಕೆ ॥** ಯಮಿವೃಂದಂ – ಇಂದ್ರಿಯನಿಗ್ರಹವುಳ್ಳವರ ಗುಂಪು, ಸ್ಥಿರವಾದ – ಪದ್ಮಾಕಾರವಾದ, ಆಸನದಿಂದೆ – ಕುಳಿತುಕೊಳ್ಳುವ ಸಂಸ್ಥಾವಿಶೇಷದಿಂದ, ಸರ್ವಕರಣ ವ್ಯಾಪಾರಮಂ – ಎಲ್ಲಾ ಇಂದ್ರಿಯಗಳ ಕೆಲಸಗಳನ್ನು, ಮಾಣ್ದು – ನಿಲ್ಲಿಸಿಬಿಟ್ಟು, ಸಂಚಲನಂಬೆತ್ತ – ತಿರುಗುತ್ತಿರುವ, ಅಸುವೃತ್ತಿಯಂ – ಪ್ರಾಣಧರ್ಮವನ್ನು, ತಡೆದು – ಅಡ್ಡಿಗೆಯ್ದು, ಆಜ್ಞಾಚಕ್ರ – ಹಣೆಯೊಳು ಬುದ್ಧಿಪ್ರೇರೇಪಣವಾಗುವ, ಸಣ್ಣ ನರಗಳ ಯಂತ್ರವೆಂಬ, ಪಂಕೇಜ – ದ್ವಿದಳಕಮಲವೆಂಬ, ವಿಷ್ಟರ – ಗದ್ದುಗೆಯ, ಮಧ್ಯ – ನಡುವೆ, ಸ್ಥಿತ – ಯಿರುವ, ಮಂಡಲತ್ರಯದ – ಸೋಮಸೂರ್ಯಾಗ್ನಿ ರೂಪವಾದ, ಬಿಂಬತ್ರಯವಾಗಿ ಕಾಣುವ, ಅಖಂಡಜ್ಯೋತಿಯಂ – ಪೂರ್ಣ ಪ್ರಕಾಶವನ್ನು, ಶುದ್ಧ – ಲಯವಿಕ್ಷೇಪಕಷಾಯ ದೋಷಗಳಿಲ್ಲದೆ ಅಚ್ಚವಾದ, ಭಾಸುರ – ಸ್ವಜ್ಞಪ್ತಿಯಾಗಿ ಬೆಳಗುವ, ಚಿಚ್ಚಕ್ಷುವಿಂ – ಜ್ಞಾನನೇತ್ರದಿಂದ, ರಕ್ಷಿಸುತ್ತೆ – ಸಾಕ್ಷಾತ್ಕರಿಸುತ್ತೆ, ಆನಂದಮಂ – ಸುಖವನ್ನು, ತಾಳ್ಗುಂ – ಧರಿಸುವದು.

**ತಾ ॥** ಯೋಗಿಗಳು ಜಿತೇಂದ್ರಿಯರಾಗಿ, ಸ್ಥಿರಾಸನದಲ್ಲಿ ಕುಳಿತು ಪ್ರಾಣಾಯಾಮ ವಂಗೈಯ್ದು ತಾರಕಲಕ್ಷ್ಯದಲ್ಲಿ ಆತ್ಮಾನುಸಂಧಾನವಂ ಗೈಯುತ್ತ ಆನಂದಿಸುವರು (ಸ್ವಭಾವೋಕ್ತ್ಯಲಂಕಾರವು).

ಮ॥ ಸ್ರ॥ ಪದದೊಂದಂಗುಷ್ಟದಗ್ರಂ ನೆಲಸೆ ನೆಲದೊಳೊಂದಂಘ್ರಿಯಂ ಕೊಂ।
ಕಿಸುತ್ತೆತ್ತಿ ದುರಾಶಾಪಾಶಮಂ ನೀಳ್ಕರಿಸಿ ನಿಜಭುಜದ್ವಂದ್ವಮಂ ನೀಡಿ ಮೇ
ಗೆಣ್ಗೆದಿಕ್ಕೂರ್ಯಂಗ ನಿಂದೆಚ್ಚರಿಸುತಭವ ಸನ್ಮಂತ್ರಮಂ ಜಾನಿಸುತ್ತ।
ಗ್ಗದ ಭಾಸ್ವದ್ಭರ್ಗ ಪಾದಾಂಬುಜಮನಚಲ ಯೋಗಾನ್ವಿತರ್ ಕಣ್ಗೆವಂದರ್ ॥

**ಟೀಕೆ ॥** ಪದದ – ಅಡಿಯ, ಒಂದು ಅಂಗುಷ್ಟದ – ಹೆಬ್ಬೆಟ್ಟಿನ, ಅಗ್ರಂ–ತುದಿಯನ್ನು, ನೆಲದೊಳು – ನೆಲಸಿ, ವೂರಿ, ಒಂದಂಘ್ರಿಯಂ – ಮತ್ತೊಂದು ಕಾಲನ್ನು, ಕೊಂಕಿಸುತ್ತ – ಮಡಿಸುತ್ತ, ಎತ್ತಿ ಮೊಣಕಾಲಿನ ಮೇಲಿರಿಸಿಕೊಂಡು, ದುರಾಶಾಪಾಶಮಂ – ಕೆಟ್ಟ ಆಸೆಯೆಂಬ ಹಗ್ಗವನ್ನು, ನೀಳ್ಕರಿಸಿ – ಸಡುಲಿಸಿ, ನಿಜಭುಜದ್ವಂದ್ವಮಂ – ತನ್ನ ಎರಡು ತೋಳುಗಳನ್ನು, ಮೇಗಣ್ಗೆ – ಮೇಲಕ್ಕೆ, ನೀಡಿ – ಚಾಚಿ, ಸೂರ್ಯಂಗೆ – ಸೂರ್ಯನಿಗೆ, ಇದಿರೋಳ್ ನಿಂತು, ಭವಸನ್ಮಂತ್ರಮಂ – ಶಿವನ ಸತ್ತಾಶ್ರಯವಾದ ಮಂತ್ರವನ್ನು, ಉಚ್ಚರಿಸುತ – ಜಪಿಸುತ್ತ, ಅಗ್ಗದ – ಅತಿಶಯವಾದ, ಭಾಸ್ವತ್ – ಸ್ವಯಂಪ್ರಕಾಶವಾದ, ಭರ್ಗ – ರುದ್ರನ, ಪಾದಾಂಬುಜಮಂ – ಅಡಿದಾವರೆಯನ್ನು, ಜಾನಿಸುತ್ತ – ಧ್ಯಾನಿಸುತ್ತ, ಅಚಲಯೋಗಾನ್ವಿತರ್ – ನಿಶ್ಚಲಾನುಸಂಧಾನದಿಂದ ಕೂಡಿದವರು, ಕಣ್ಗೆ ವಂದರ್ – ಕಾಣಿಸಿದರು.

**ತಾ ॥** ಶಿವಯೋಗಿಗಳಲ್ಲಿ ಹಠಾಭ್ಯಾಸಿಗಳು, ವರ್ಣಿಸಲ್ಪಟ್ಟಿರುವರು (ಸ್ವಭಾವೋಕ್ತ್ಯಲಂಕಾರವು) ॥ ೭೧ ॥

ಮ ॥ ಚಮರೀರಾಜಿರಜಂಗಳಂ ಕಳೆಗುಮುದ್ಯದಂತಿ ನೀರಿಟ್ಟು ಸಂ।
ಭ್ರಮದಿಂ ಸಾರಣೆಗೆಯ್ಯುವದಲ್ಲಿ ಪವನಂ ಪೂಧೂಳಿಯಿಂ ರಂಗಮಂ ॥
ಕ್ರಮದಿಂ ಮಾಳ್ಪದು ಕೇಕಿ ಬರ್ಹದಲರಿಂ ಹೋಮಾಗ್ನಿಯಂ ವರ್ಧಿ ಕುಂ।
ಸುಮನಸ್ತೋಮ ಲಸತ್ಫಲಪ್ರಸರಮಂ ಶಾಖಾಚರಂ ಸಾರ್ಚುಗುಂ ॥ ೭೨ ॥

**ಟೀಕೆ ॥** ಚಮರೀರಾಜಿ – ಚೌರಿಗಳ ಸಾಲು, ರಜಂಗಳಂ – ಧೂಳನ್ನು, ಕಳೆಗುಂ – ಗುಡಿಸುವದು, ಉದ್ಯದಂತಿ – ದೊಡ್ಡ ಆನೆಯು, ನೀರಿಟ್ಟ – ನೀರಿನಲ್ಲಿ, ಸಂಭ್ರಮದಿ – ಉತ್ಸವದಿಂದ, ಸಾರಣೆಗೈಯ್ವುದು – ಸಾರಿಸುವದು, ಅಲ್ಲಿ, ಆ ಋಷ್ಯಾಶ್ರಮದೊಳಗೆ, ಪವನಂ – ಗಾಳಿಯು, ಪೂಧೂಳಿಯಿಂ – ಪುಪ್ಪುಡಿಯಿಂದ, ರಂಗಮಂ – ರಂಗವಲ್ಲಿಯನ್ನು, ಕ್ರಮದಿಂ – ಮಾಳ್ಪುದು, ಕೇಕಿ – ನವಿಲು, ಬರ್ಹದ – ಪಿಂಛದ, ಎಲರಿಂ – ಗಾಳಿಯಿಂದ, ಹೋಮಾಗ್ನಿಯಂ – ಅಗ್ನಿಹೋತ್ರವನ್ನು, ವರ್ಧಿಕುಂ – ರಗಳಿಸುವದು, ಶಾಖಾಚರಂ – ಮಂಗವು, ಸುಮನಸ್ತೋಮ – ಪುಷ್ಪಪುಂಜವನ್ನು, ಲಸತ್ಫಲಪ್ರಸರಮಂ – ಶೋಭಿಸುವ ಹಣ್ಣುಗಳ ಗುಡ್ಡೆಯನ್ನು, ಸಾರ್ಚುಗುಂ – ಅಡಿಮಾಡುವದು ॥

**ತಾ॥** ಋಷ್ಯಾಶ್ರಮದಲ್ಲಿ ಎಲ್ಲರೂ ತಪೋನಿಷ್ಠರಾಗಿರಲು ಬೇರೆ ಪರಿಚಾರಕರಿಲ್ಲದ್ದರಿಂದ ಅಲ್ಲಿರುವ ಮೃಗಾದಿಗಳು ಮಾಡುವ ಕೆಲಸಗಳೆಲ್ಲವೂ ದೈವಪ್ರೇರಣೆಯಿಂದ ಋಷಿಗಳಿಗೆ ಅನುಕೂಲವಾಗಿ ಪರಿಣಮಿಸಿ ಸೇವಕರಿದ್ದು ಕೆಲಸ ಮಾಡಿದಂತೆ ಆಗುವದು. ಹೇಗೆಂದರೆ – ಚೌರಿಯ ಮೃಗಂಗಳು, ಉದ್ದವಾದ ಬಾಲದ ಕೂದಲನ್ನು ಎಳಕೊಂಡು ತಿರುಗಾಡುವದರಿಂದ ಕಸಬರಲಿನಿಂದ ಗುಡಿಸಿದ ಹಾಗೆ ನೆಲವು ಚೊಕ್ಕಟವಾಗುವದು, ಆನೆಗಳು ಸುಂಡಲಿನಲ್ಲಿ ನೀರು ತುಂಬಿಕೊಂಡು ಬಂದು ಅಲ್ಲಲ್ಲಿ ಫೂತ್ಕರಿಸಿ ತಿರುಗುವದರಿಂದ ನೀರು ಚಲ್ಲಿ ಸಾರಿಸಲ್ಪಟ್ಟಂತಾಗುವದು, ಗಾಳಿಯಿಂದ ಹಲವು ಬಣ್ಣದ ಪುಪ್ಪುಡಿಗಳು ಬಂದು ವರಸೆಯಾಗಿ ಉದುರಿಯಿದ್ದರೆ ಚಿತ್ರದ ರಂಗವಲ್ಲಿಯಿಂದ ಅಲಂಕರಿಸಲ್ಪಟ್ಟಂಥಾಗುವದು. ಮರಗಳ ಮೇಲೆ ಕಪಿಗಳು ಹಾರಾಡುವಾಗ ಹಣ್ಣುಗಳೂ ಹೂವುಗಳೂ ಉದುರಿದ್ದರೆ ಶಿವಪೂಜೆಗೆ ಸಾಮಗ್ರಿಗಳನ್ನು ಅಣಿಮಾಡಿದ ಹಾಗಿರುವದು. ನವಿಲುಗಳು ಸೂಲದ ಗರಿಗಳನ್ನು ಬಿಚ್ಚಿಕೊಂಡು ಸುಳಿದಾಡುವಲ್ಲಿ ಅದರ ಗಾಳಿಯಿಂದ ಅಗ್ನಿಹೋತ್ರಗಳು ಪ್ರಜ್ವಲಿಸಲಾಗಿ ಹೊಗೆಯಿಲ್ಲದೆ ಋಷಿಗಳಿಗೆ ಊದುವ ಆಯಾಸ ತಪ್ಪುವದು ಈ ಮೇರೆ ದೈವಭಜಕರಾದ ತಪಸ್ವಿಗಳಿಗೆ ದೈವಸಹಾಯದಿಂದ ಅಲ್ಲಿ ಸರ್ವವು ತಾನಾಗಿ ಅನುಕೂಲಿಸುತ್ತಿರುವದೆಂದು ಭಾವವು. ಇಲ್ಲಿ ಸಹಜವ್ಯಾಪಾರಕ್ಕೆ ಫಲವನ್ನು ಕಲ್ಪಿಸಿ ಅತಿಶಯವಾಗಿ ವರ್ಣಿಸಿದ್ದರಿಂದ ಫಲಾತಿಶಯೋಕ್ತ್ಯಲಂಕಾರವು ॥ ೭೨ ॥

(ಮುಂದುವರಿಯುವುದು)

# ಭಾಷಾ ಏಕತೆಯ ಸೇತುವಾಗಿ 'ಸಂಸ್ಕೃತ'

**ಪ್ರೊ. ವಿ. ಗಿರೀಶ್‌ಚಂದ್ರ**

ಉತ್ಸವ ಅಂದರೆ 'ಉತ್' (ಏರಿಕೆ) ಮತ್ತು 'ಸವ' (ಪಾವಿತ್ರ್ಯ) ಅಂದರೆ ಮನಸ್ಸನ್ನು ಮೇಲಕ್ಕೆತ್ತುವ, ಪುಣ್ಯಭಾವವನ್ನು ಜೀವಂತಗೊಳಿಸುವ ಒಂದು ಪ್ರಯತ್ನ. ಸಂಸ್ಕೃತವೇ ಅದರ ಪ್ರತೀಕ. ಇದು ಕೇವಲ ಒಂದು ಭಾಷೆ ಅಲ್ಲ, ಅದು ಚಿಂತನೆಯ ಶಕ್ತಿ, ಮೌಲ್ಯದ ದಿಕ್ಕು ಮತ್ತು ವಾಕ್ಯಸೌಂದರ್ಯದ ಉಗಮ.

ಸಂಸ್ಕೃತದ ಕುರಿತು ಮಾತನಾಡುವುದು ಎಂದರೆ ಕೇವಲ ಪುರಾತನವಾದುದರ ಸ್ಮರಣೆ ಅಲ್ಲ; ಅದು ಜೀವಂತ ಪರಂಪರೆಯ ಪ್ರಮಾಣ. ಇಂದಿನ ಸಂದರ್ಭದಲ್ಲಿ ಸಂಸ್ಕೃತದ ಮಹತ್ವ, ಅದರ ಪರಂಪರೆ, ಪ್ರಸ್ತುತತೆ, ಆಧುನಿಕ ಅನ್ವಯಗಳು ಮತ್ತು ಪ್ರಗತಿಯನ್ನು ಕುರಿತು ಚಿಂತನೆ ನಡೆಸುವುದು ತುಂಬ ಮುಖ್ಯವಾಗಿದೆ.

## 1. ಸಂಸ್ಕೃತದ ಮಹತ್ವ

ಸಂಸ್ಕೃತ ಭಾಷೆಯ ಮಹತ್ವವು ಬಹುಮುಖವಾದುದು. ಈ ಭಾಷೆಯು ವಾಕ್ಯ ಸೌಂದರ್ಯದ ಮತ್ತು ಅರ್ಥಗೌರವದ ಒಂದು ಪರಿಪೂರ್ಣ ಮಾಧ್ಯಮವಾಗಿದೆ. "ಸಂಸ್ಕೃತ" – ಅಂದರೆ ಚೆನ್ನಾಗಿ ರೂಪುಗೊಂಡದ್ದು ಎಂಬ ಅರ್ಥ ನೀಡುತ್ತದೆ. ಪಾಣಿನಿಯ ಅಷ್ಟಾಧ್ಯಾಯಿ ವ್ಯಾಕರಣವು ವಿಶ್ವದ ಮೊದಲ ಜನರೇಟಿವ್ ಗ್ರಾಮರ್, ಅದು ನಿಖರತೆ, ಸಂಕ್ಷಿಪ್ತತೆ ಮತ್ತು ತಾರ್ಕಿಕತೆಗಾಗಿಯೇ ಮಾದರಿ. ಧ್ವನಿವ್ಯವಸ್ಥೆ, ವರ್ಣಮಾಲೆಯ ವೈಜ್ಞಾನಿಕ ಕ್ರಮ, ಸಂಧಿ–ಸಮಾಸಗಳ ವಿನ್ಯಾಸ – ಇವೆಲ್ಲವೂ ಸೇರಿ ಸಂಸ್ಕೃತವನ್ನು ವೈಜ್ಞಾನಿಕತೆ ಮತ್ತು ಭಾಷಾಸೌಂದರ್ಯಲೋಕದ ವಿಸ್ಮಯ ಎನಿಸುವಂತೆ ಮಾಡಿವೆ.

ಸಂಸ್ಕೃತವನ್ನು ನಾಗರಿಕತೆಯ ಸಂಗ್ರಹಾಲಯ ಎನ್ನುತ್ತಾರೆ. ಭಾರತೀಯ ಸಂಸ್ಕೃತಿಯು ವಿಶ್ವದ ಪ್ರಾಚೀನ ಸಂಸ್ಕೃತಿಗಳಲ್ಲಿ ಇಂದಿಗೂ ಜೀವಂತವಾಗಿ ಉಳಿದಿರುವ ಏಕೈಕ ಸಂಸ್ಕೃತಿಯಾಗಿದೆ. ಸಂಸ್ಕೃತ ಭಾಷೆಯು ಈ ಸಂಸ್ಕೃತಿಯ ವಾಹಿನಿಯಾಗಿದೆ. ವೇದ, ಉಪನಿಷತ್ತು, ಶಾಸ್ತ್ರ, ಕಾವ್ಯ, ಕಾವ್ಯಶಾಸ್ತ್ರ, ನಾಟಕ, ವೈದ್ಯಶಾಸ್ತ್ರ, ಗಣಿತ, ಖಗೋಳಶಾಸ್ತ್ರ,

---

* 17 ಅಕ್ಟೋಬರ್ 2025ರಂದು ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ನಡೆದ 'ಸಂಸ್ಕೃತೋತ್ಸವ' ಕಾರ್ಯಕ್ರಮದ ಅಧ್ಯಕ್ಷ ಭಾಷಣ.

ರಾಜತಂತ್ರ – ಎಲ್ಲವೂ ಈ ಭಾಷೆಯ ಮೂಲಕ ಇಂದಿಗೂ ಸಂರಕ್ಷಿಸಲ್ಪಟ್ಟಿವೆ. ಸಂಸ್ಕೃತವು ಲೌಕಿಕವಿಜ್ಞಾನದಿಂದ ಹಿಡಿದು ಆಧ್ಯಾತ್ಮಿಕ ತತ್ತ್ವದವರೆಗಿನ ಸಂಪೂರ್ಣ ಮಾನವ ಬುದ್ಧಿಯ ದಾಖಲೆಯಾಗಿದೆ.

ಸಂಸ್ಕೃತಾಭ್ಯಾಸ ಅಂದರೆ ಕೇವಲ ಪಾಠವಲ್ಲ; ಅದು ಮನಸ್ಸಿನ ತರಬೇತಿ, ಅಂತರಂಗದ ಸಂಸ್ಕಾರ. ಶ್ರವಣ–ಮನನ–ನಿದಿಧ್ಯಾಸನ ಎಂಬ ಕ್ರಮದಿಂದ ಒಂದು ವಿಷಯವನ್ನು ಕೇಳುವ, ಗ್ರಹಿಸುವ, ವಿಶ್ಲೇಷಿಸುವ ಹಾಗೂ ಆತ್ಮಸಾತ್ ಮಾಡಿಕೊಳ್ಳುವ ಶಕ್ತಿ. ತರ್ಕದಿಂದ ತಾರ್ಕಿಕತೆ, ವ್ಯಾಕರಣದಿಂದ ನಿಖರತೆ, ಛಂದಸ್ಸಿನಿಂದ ರಚನಾ ಶಿಸ್ತಿನ ಅಭ್ಯಾಸ ದೊರೆಯುತ್ತದೆ.

**2. ಸಂಸ್ಕೃತದ ಪರಂಪರೆ**

ವೇದೋಪನಿಷತ್ತುಗಳ ತಾತ್ವಿಕ ಜ್ಯೋತಿ ಭಾರತೀಯರ ಧಾರ್ಮಿಕ, ಸಾಂಸ್ಕೃತಿಕ ವಿಕಾಸದ ಪಥದಲ್ಲಿ ನಂದಾದೀಪಗಳಾಗಿವೆ. ವೇದಗಳು ಋಷಿಗಳ ತಪಸ್ಸಿನ ಫಲ, ಉಪನಿಷತ್ತುಗಳು ಮನಸ್ಸಿನ ವಿಜ್ಞಾನ. ತತ್ತ್ವಮಸಿ, ಅಹಂ ಬ್ರಹ್ಮಾಸ್ಮಿ ಎಂಬ ವಾಕ್ಯಗಳು ಮಾನವ ಚಿಂತನೆಯ ಉನ್ನತ ಶಿಖರ.

ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ, ಅದ್ವೈತವೇದಾಂತ, ವಿಶಿಷ್ಟಾದ್ವೈತ, ದ್ವೈತ, ಶಕ್ತಿವಿಶಿಷ್ಟಾದ್ವೈತ, ಜೈನ, ಬೌದ್ಧ ಮೊದಲಾದವುಗಳೆಲ್ಲ ಪ್ರಜ್ಞಾವರ್ಧಕ ಚರ್ಚೆಗಳ ಶ್ರೇಣಿ. ಗಹನ ಚಿಂತನೆಯ ನಿಶ್ರೇಣಿ (ನಿಚ್ಚಣಿಕೆ). ಈ ವಾದ ಸಂಪ್ರದಾಯವು ಸಂವಾದ ಸಂಸ್ಕೃತಿಯನ್ನು ರೂಪಿಸಿತು.

ಇತಿಹಾಸ ಮತ್ತು ಪುರಾಣಗಳು ನೀತಿಯ ಕಥನಪರಂಪರೆಯನ್ನು ರೂಪಿಸಿವೆ. ಮಾನವ ಸಮುದಾಯದ ಏಳುಬೀಳುಗಳನ್ನು ಮನೋಜ್ಞವಾಗಿ ದಾಖಲಿಸಿವೆ. ಮಹಾಭಾರತ ಮತ್ತು ರಾಮಾಯಣಗಳು ಮನುಷ್ಯ ಸ್ವಭಾವಗಳ ವೈವಿಧ್ಯ, ವೈರುಧ್ಯ, ವೈಷಮ್ಯಗಳ ನಿರ್ಲಿಪ್ತ ಚಿತ್ರಣ, ಮಾನವ ಮನಸ್ಸಿನ ನೈತಿಕ ಗೊಂದಲಗಳ ವಿಶ್ಲೇಷಣೆ. ಪುರಾಣಗಳು ಭೂಗೋಳ, ವಿಶ್ವವಿಜ್ಞಾನ, ಸಂಸ್ಕೃತಿ ಮತ್ತು ಸ್ಮೃತಿಯ ಅದ್ಭುತ ಸಂಗ್ರಹವಾಗಿವೆ.

ಭಾಸ, ಕಾಳಿದಾಸ, ಶೂದ್ರಕ, ವಿಶಾಖದತ್ತ, ಭಾರವಿ, ಬಾಣ ಮೊದಲಾದ ಪ್ರಾಚೀನ ಕವಿಗಳು, ಭೋಜ, ಜಯದೇವ, ಗಂಗಾದೇವಿ, ಜಗನ್ನಾಥ ಮುಂತಾದ ಮಧ್ಯಯುಗೀನ ಕವಿಗಳಿಂದ ಹಿಡಿದು ವೆಂಕಾಮಾತ್ಯ, ಮಂಡಿಕಲ್ ರಾಮಶಾಸ್ತ್ರಿ, ಜಗ್ಗು ವಕುಲಭೂಷಣ, ಆರ್. ಶಂಕರ್ ಮೊದಲಾದ ಆಧುನಿಕ ಕವಿಗಳವರೆಗೆ ರಚಿತವಾಗಿರುವ, ಸಮೃದ್ಧ ಕಾವ್ಯರಾಶಿಯು ಭಾರತೀಯರ ಜೀವನೋಲ್ಲಾಸ, ಸಹೃದಯತೆ, ಸ್ವೋಪಜ್ಞತೆಗಳ ಉಚ್ಛ್ರಾಯವನ್ನು ಸಾರಿ ತೋರಿಸುತ್ತವೆ. ರಸಸಿದ್ಧಾಂತವು ಕಾವ್ಯ, ನಾಟಕ, ಚಲನಚಿತ್ರವೂ ಸೇರಿದಂತೆ ಎಲ್ಲ ಬಗೆಯ ಕಲೆಗಳಿಗೆ ಇಂದಿಗೂ ಎಂದಿಗೂ ಮೂಲವಾಗಿದೆ.

ಅರ್ಥಶಾಸ್ತ್ರ, ನಾಟ್ಯಶಾಸ್ತ್ರ, ಮಯಮತ, ಚರಕ, ಸುಶ್ರುತ, ಆರ್ಯಭಟೀಯ – ಇವುಗಳೆಲ್ಲವೂ ಸಂಸ್ಕೃತದ ವೈಜ್ಞಾನಿಕ ಮನೋಭಾವದ ಸಾಕ್ಷಿಗಳು.

**3. ಇಂದಿನ ಪ್ರಸ್ತುತತೆ**

ಇಂದಿನ ಅಸ್ಪಷ್ಟತೆಯ ಯುಗದಲ್ಲಿ ಸ್ಪಷ್ಟತೆಯ ಪಾಠವನ್ನು ಸಂಸ್ಕೃತವು ನೀಡಬಲ್ಲುದು. ಪದ–ವಾಕ್ಯ–ಪ್ರಮಾಣ–ಶಾಸ್ತ್ರಗಳೆನಿಸಿದ ವ್ಯಾಕರಣ, ತರ್ಕ ಹಾಗೂ ಮೀಮಾಂಸಾ ಶಾಸ್ತ್ರಗಳು ಇಂದಿನ ಮಾಹಿತಿಯುಗದಲ್ಲೂ ಮಾರ್ಗದರ್ಶಕವಾಗಬಲ್ಲವು. ಇಂದು ನ್ಯಾಯಾಲಯಗಳಲ್ಲಿ, ವಾದ್ಯಗೋಷ್ಠಿಗಳಲ್ಲಿ, ಚರ್ಚಾಸಭೆಗಳಲ್ಲಿ ತಮ್ಮ ವಾದಗಳನ್ನು ಮಂಡಿಸುವವರು ಈ ಶಾಸ್ತ್ರಗಳ ಪ್ರಣಾಲಿಯನ್ನು ತಿಳಿದುಕೊಂಡರೆ ತಮ್ಮ ವಾದಕೌಶಲವನ್ನು ಹೆಚ್ಚಿಸಿಕೊಳ್ಳಬಹುದು. ವಾದಮಂಡನೆಯಲ್ಲಿ ನಿಖರತೆ, ನಿರ್ದುಷ್ಟತೆಗಳನ್ನು ಇದರಿಂದ ಸಾಧಿಸಿಕೊಳ್ಳಬಹುದು.

ಸಂಸ್ಕೃತವು ಮೌಲ್ಯಗಳ ಮಹಾನಿಧಿಯಂತಿದೆ. ಧರ್ಮ ಎನ್ನುವುದು ಇಲ್ಲಿ ಶುಷ್ಕ ಉಪದೇಶವಲ್ಲ ಅಥವಾ ವಿವೇಚನಾರಹಿತವಾದ ಕುರುಡು ಆದೇಶಗಳಲ್ಲ. ಅದು ಸಮಸ್ಯೆಯ ಪರಿಹಾರದ ಮಾರ್ಗ ತೋರುವ ಮಹಾದೀಪ. ಭಗವದ್ಗೀತೆಯು ಆಧ್ಯಾತ್ಮಿಕ ಮೌಲ್ಯಗಳನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವ ವಿಧಾನವನ್ನು ಕಲಿಸುತ್ತದೆ. ನ್ಯಾಯಶಾಸ್ತ್ರವು ಬೌದ್ಧಿಕ ಪ್ರಾಮಾಣಿಕತೆಯನ್ನು, ಸುಭಾಷಿತಗಳು ಬದುಕಿನಲ್ಲಿ ಯಶಸ್ಸಿಗೆ ಬೇಕಾದ ಸರಳ ಸೂತ್ರಗಳನ್ನು ಕಲಿಸಿಕೊಡುತ್ತವೆ.

ಸಮಗ್ರ ಭಾರತವನ್ನು ಸಾಂಸ್ಕೃತಿಕವಾಗಿ, ಭಾಷಿಕವಾಗಿ, ಆಧ್ಯಾತ್ಮಿಕವಾಗಿ ಏಕಸೂತ್ರತೆಯಲ್ಲಿ ಬೆಸೆಯಬಲ್ಲ ಶಕ್ತಿ ಯಾವುದಾದರೂ ಭಾಷೆಗಿದ್ದರೆ ಅದು ಸಂಸ್ಕೃತಕ್ಕೆ ಮಾತ್ರ. ಆದ್ದರಿಂದಲೇ ಹರಿಶ್ಚಂದ್ರ ರೇಣಾಪುರಕರ ಎಂಬ ಆಧುನಿಕ ಸಂಸ್ಕೃತ ಕವಿಗಳೊಬ್ಬರು –

ಆಸೇತು–ಹೈಮಾಚಲ–ವರ್ಷದೇಶಂ
ಆಬದ್ಧುಮಿಚ್ಛಾ ಯದಿ ಚೈಕ್ಯಸೂತ್ರ
ಸಾ ದೇವವಾಣೀ ಖಲು ಸೇವನೀಯಾ

ಎಂದು ಕೊಂಡಾಡಿದ್ದಾರೆ.

ಸಂಸ್ಕೃತವು ಬಹುತೇಕ ಎಲ್ಲ ಭಾರತೀಯ ಭಾಷೆಗಳ ಮೂಲಮಾತೃಕೆ. ಇನ್ನು ಕನ್ನಡ, ತೆಲುಗು, ತಮಿಳು ಮೊದಲಾದ ದಕ್ಷಿಣ ಭಾರತದ ಭಾಷೆಗಳು ಸಂಸ್ಕೃತದಿಂದ ಪೋಷಣೆಯನ್ನು ಪಡೆದು ಶ್ರೀಮಂತವಾದ ಸಾಹಿತ್ಯಭಂಡಾರವನ್ನು ಸೃಜಿಸಿವೆ. ಹೀಗಾಗಿ ಸಂಸ್ಕೃತವು ಭಾರತದ ಭಾಷಾ ಏಕತೆಯ ಸೇತುವೆಯಾಗಿದೆ ಎನ್ನಬಹುದು.

ಇಂದು ಯಾವುದೇ ಭಾರತೀಯ ಅಧ್ಯಯನವನ್ನು ಅತ್ಯಂತ ಪ್ರಮಾಣನಿಷ್ಠವಾಗಿ, ಪರಿಪೂರ್ಣವಾಗಿ ಮಾಡಬೇಕೆಂದರೆ ಸಂಸ್ಕೃತದ ಜ್ಞಾನವು ಅತ್ಯವಶ್ಯಕ. (IKS-Indian Knowledge System) ಭಾರತೀಯ ಜ್ಞಾನಪರಂಪರೆಯ ಅಧ್ಯಯನ, ಅನುಸಂಧಾನಗಳಿಗೆ ಸಂಸ್ಕೃತವು ಪ್ರವೇಶದ್ವಾರ. ಇಂಡಾಲಜಿ, ತತ್ತ್ವಶಾಸ್ತ್ರ, ಭಾಷಾಶಾಸ್ತ್ರ, ಕಂಪ್ಯೂಟೇಷನಲ್ ಲಿಂಗ್ವಿಸ್ಟಿಕ್ಸ್, ಕಲಾಶಾಸ್ತ್ರ, ಪ್ರಾಚೀನ ಭಾರತೀಯ ವಿಜ್ಞಾನಶಾಖೆಗಳು,

ಯಾವುದೇ ಬಗೆಯ ಅಂತಶ್ಶಾಸ್ತ್ರೀಯ (Interdisciplinary) ಅಥವಾ ಬಹುಶಾಸ್ತ್ರೀಯ (Multidisciplinary) ಸಂಶೋಧನೆಗಳಿಗೆ ಸಂಸ್ಕೃತವು ಒಂದು ಅನಿವಾರ್ಯವಾದ ಸಾಧನಾ ಘಟಕವಾಗುತ್ತದೆ.

**4. ಆಧುನಿಕ ಅನ್ವಯಗಳು**

ಇಂದು ಸಂಸ್ಕೃತವು ತುಂಬ ವಿಶಿಷ್ಟವಾದ ಮತ್ತು ಮಹತ್ವಪೂರ್ಣವಾದ ಆಧುನಿಕ ಅನ್ವಯಗಳನ್ನು (Modern Applications) ಹೊಂದಿದೆ. ಸಂಸ್ಕೃತ ಅಧ್ಯಯನ ಮಾಡಿದವರಿಗೆ, ಕಾಲೇಜು, ವಿಶ್ವವಿದ್ಯಾಲಯಗಳಿಗೆ, ಸಂಶೋಧನ ಕೇಂದ್ರಗಳಿಗೆ ಇಂದು ಡಿಜಿಟಲ್ ಹ್ಯುಮ್ಯಾನಿಟೀಸ್‌ನಲ್ಲಿ ವಿಪುಲವಾದ ಅವಕಾಶಗಳು ಇವೆ. ಇ-ಟೆಕ್ಸ್ಟ್ ಗ್ರಂಥಾಲಯಗಳು, OCR, ಪಠ್ಯವಿಶ್ಲೇಷಣಾ ಸಾಧನಗಳು ಸಂಶೋಧನೆಗೆ ಹೊಸ ದಾರಿಗಳಾಗಿವೆ.

ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೇಸಿಂಗ್ ಸಂಸ್ಕೃತ ವಲಯದಲ್ಲಿ ಮತ್ತೊಂದು ಮಹತ್ವಪೂರ್ಣ ಸಂಶೋಧನ ಕ್ಷೇತ್ರವನ್ನು ರೂಪಿಸಿದೆ. ಪಾಣಿನಿಯ ನಿಯಮಾಧಾರಿತ ವ್ಯಾಕರಣ ಮಾದರಿ ಕಂಪ್ಯೂಟರ್ ಭಾಷಾವಿಜ್ಞಾನಕ್ಕೆ ಪ್ರೇರಣೆಯಾಗಿದೆ. ಸಂಸ್ಕೃತ ವ್ಯಾಕರಣದಿಂದ Explainable AIಗೆ ಮಾದರಿ ದೊರೆಯುತ್ತಿದೆ.

ಇನ್ನು ಹಲವು ಶಾಸ್ತ್ರಗಳನ್ನು ಆಧರಿಸಿದ ಅನೇಕ ಪ್ರಾಯೋಗಿಕವಾದ ಮತ್ತು ವಸ್ತುನಿಷ್ಠವಾದ ಪ್ರಯೋಜನಗಳು ಆಧುನಿಕ ಸಮಾಜಕ್ಕೆ ಇವೆ. ಆಗಮಶಾಸ್ತ್ರ, ವಾಸ್ತುಶಾಸ್ತ್ರ, ನಾಟ್ಯಶಾಸ್ತ್ರ, ಚತುಃಷಷ್ಟಿ ಕಲೆಗಳು, ಸಂಗೀತಶಾಸ್ತ್ರ ಮೊದಲಾದವುಗಳು ಭಾರತದ ಸಾಂಸ್ಕೃತಿಕ ವೈಭವ ಹಾಗೂ ಸೃಜನಶೀಲತೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವಲ್ಲಿ ತುಂಬ ಆವಶ್ಯಕವಾಗಿವೆ.

ಇಂದು ದೇಶದ ಆರ್ಥಿಕ ನೀತಿ, ವಿದೇಶಾಂಗ ನೀತಿ, ರಕ್ಷಣಾ ನೀತಿ, ವ್ಯಾಪಾರ ನೀತಿ, ಆಡಳಿತ ನೀತಿ, ಪರಿಸರ ನೀತಿ ಮುಂತಾದವುಗಳನ್ನು ಭಾರತೀಯತೆಯ ನೆಲೆಗಟ್ಟಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ರೂಪಿಸುವಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಂತಹ ಗ್ರಂಥಗಳು ಅತ್ಯಂತ ಉಪಯುಕ್ತವಾಗಿವೆ.

ಯೋಗ, ಆಯುರ್ವೇದದ ಸಂಸ್ಕೃತ ಗ್ರಂಥಗಳು ಆರೋಗ್ಯದ ಸಮಗ್ರ ದೃಷ್ಟಿಯನ್ನು ನೀಡುತ್ತವೆ. ಈ ಕ್ಷೇತ್ರದಲ್ಲಿ ಇನ್ನೂ ಅಪ್ರಕಾಶಿತವಾಗಿಯೇ ಉಳಿದಿರುವ ಸಾವಿರಾರು ಹಸ್ತಪ್ರತಿಗಳ ಸಂಪಾದನೆ, ಪ್ರಕಾಶನ, ಅಧ್ಯಯನ ಭಾರತೀಯ ಆರೋಗ್ಯವಿಜ್ಞಾನದಲ್ಲಿ ಮಹತ್ತರ ಸಾಧನೆಗಳನ್ನು ಹುಟ್ಟುಹಾಕಬಲ್ಲ ಸಂಭವನೀಯತೆಗಳನ್ನು ತಮ್ಮೊಳಗೆ ಅಡಗಿಸಿಟ್ಟು ಕೊಂಡಿವೆ. ಪ್ರಕಟಿತವಾಗಿರುವ ಅನೇಕ ಗ್ರಂಥಗಳ ಮರುಓದು ಕೂಡ ಆವಶ್ಯಕವಾಗಿದೆ.

**5. ಸಂಸ್ಕೃತ ಕ್ಷೇತ್ರದಲ್ಲಿ ಇತ್ತೀಚಿನ ಬೆಳವಣಿಗೆಗಳು**

ಇತ್ತೀಚೆಗೆ ಈಜಿಪ್ಟ್ ಮತ್ತು ಅಜರ್‌ಬೈಜಾನ್ ದೇಶಗಳಲ್ಲಿ ಅತ್ಯಂತ ಪ್ರಾಚೀನ ಸಂಸ್ಕೃತ ಶಾಸನಗಳು ದೊರೆತಿದ್ದು ಸಂಸ್ಕೃತ, ಭಾರತೀಯ ಸಂಸ್ಕೃತಿ ಮತ್ತು ಪ್ರಾಚೀನ ಭಾರತೀಯರ

ವ್ಯಾಪಾರದ ವ್ಯಾಪ್ತಿ–ವಿಸ್ತಾರ ಎಷ್ಟು ವಿಶಾಲವಾದದ್ದು ಎಂಬುದನ್ನು ತಿಳಿಯಪಡಿಸುತ್ತವೆ.

ಇತ್ತೀಚೆಗೆ ಮತ್ತೊಂದು ಜ್ಞಾನಪೀಠ ಪ್ರಶಸ್ತಿಯ ಗರಿ ಸಂಸ್ಕೃತದ ಕಿರೀಟವನ್ನು ಅಲಂಕರಿಸಿದೆ.

2010 ರಲ್ಲಿ ಉತ್ತರಾಖಂಡ ರಾಜ್ಯವು ಸಂಸ್ಕೃತವನ್ನು ರಾಜ್ಯದ ಎರಡನೆಯ ಅಧಿಕೃತ ಭಾಷೆಯಾಗಿ ಅಂಗೀಕರಿಸಿ ಹಾಗೆ ಮಾಡಿದ ಭಾರತದ ಮೊದಲ ರಾಜ್ಯವೆನಿಸಿದೆ. 2019 ರಲ್ಲಿ ಹಿಮಾಚಲ ಪ್ರದೇಶವೂ ಸಂಸ್ಕೃತವನ್ನು ರಾಜ್ಯದ ಎರಡನೆಯ ಅಧಿಕೃತ ಭಾಷೆಯಾಗಿ ಅಂಗೀಕರಿಸಿದೆ.

ಇನ್ನು ಸಂಸ್ಕೃತದ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಕೂಡ ಹಲವು ವಿನೂತನವಾದ ಮತ್ತು ವೈವಿಧ್ಯಮಯವಾದ ಕಾರ್ಯಚಟುವಟಿಕೆಗಳು ನಡೆಯುತ್ತಿವೆ:

1. ಹೊಸ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳ ಸ್ಥಾಪನೆ
2. IKS ವಿಭಾಗಗಳ ಸ್ಥಾಪನೆ, IKS ಕಾರ್ಯಾಗಾರಗಳು, ವಿಚಾರಗೋಷ್ಠಿಗಳು
3. ಓಪನ್ ಆಕ್ಸೆಸ್ ಪೋರ್ಟಲ್‌ಗಳು.
4. ಸಂವಾದಾತ್ಮಕ ಪಾಠಕ್ರಮಗಳು ಮತ್ತು ಆನ್‌ಲೈನ್ ಕೋರ್ಸ್‌ಗಳು.
5. Unicode, OCR, ಸಂಧಿ–ವಿಚ್ಛೇದ ಸಾಧನಗಳ ಅಭಿವೃದ್ಧಿ.
6. ಹಸ್ತಪ್ರತಿ ಮತ್ತು ಶಿಲಾಲೇಖಗಳ ಡಿಜಿಟಲೀಕರಣ.
7. ಯುವಜನರಿಗಾಗಿ ಶ್ಲೋಕೋತ್ಸವ, ನಾಟಕೋತ್ಸವ, ಕವಿಗೋಷ್ಠಿಗಳು, ಅಷ್ಟಾವಧಾನಗಳು ಇತ್ಯಾದಿ
8. ಮಹಿಳಾ ಅಷ್ಟಾವಧಾನಗಳು, ಮಹಿಳಾ ವಾಕ್ಯಾರ್ಥ ಸಭೆಗಳು ಇತ್ಯಾದಿ
9. ಸಂಸ್ಕೃತ ವಾಚನ, ವ್ಯಾಖ್ಯಾನ ಕಾರ್ಯಕ್ರಮಗಳು
10. ವಿವಿಧ ಭಾರತೀಯ ಭಾಷೆಗಳ ಮಹತ್ವದ ಕೃತಿಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡುವುದು ಇತ್ಯಾದಿ ಇತ್ಯಾದಿ.

### ಉಪಸಂಹಾರ

ಸಂಸ್ಕೃತವು ಬೇರು: ಅದರ ಮೇಲೆ ಆಧುನಿಕ ಕಲ್ಪನೆಗಳ ಶಾಖೆ ಬೆಳೆಯಬೇಕು. ಶಾಸ್ತ್ರವೂ ಇರಲಿ, ಕಾವ್ಯವೂ ಇರಲಿ, ತಂತ್ರಜ್ಞಾನವೂ ಇರಲಿ. ಸಂಸ್ಕೃತವು ವಿಕಸಿತ ಭಾರತದ ಒಂದು ಮಹತ್ತ್ವದ ಸೋಪಾನಪಂಕ್ತಿ.

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ।**
**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್‌ದುಃಖಭಾಗ್ಭವೇತ್ ॥**

□

# ಶೂನ್ಯಸಂಪಾದನೆಗಳು : ಮರುಚಿಂತನೆ ಮತ್ತು ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು

**ಡಾ. ಬಿ. ನಂಜುಂಡಸ್ವಾಮಿ**

(ಮುಂದುವರಿದಿದೆ)

ಎರಡು ಮೂರು ಮತ್ತು ನಾಲ್ಕನೆಯ ಶೂನ್ಯಸಂಪಾದನೆಗಳನ್ನು ಗಮನಿಸಿದರೆ ಒಂದಾದ ಮೇಲೆ ಮತ್ತೊಂದು ಶರಣ ಪ್ರಸಂಗಗಳು ಮೂಲ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯೊಳಗೆ ಸೇರಿಕೊಳ್ಳುತ್ತ ಪ್ರಭುದೇವರ ಶೂನ್ಯಸಂಪಾದನೆಯೆಂಬ ಅಭಿದಾನದಿಂದ ಆರಂಭವಾದ ಶೂನ್ಯಸಂಪಾದನೆ ಅಲ್ಲಮಪ್ರಭು ಕೇಂದ್ರದಿಂದ ಸ್ವಲ್ಪ ಸ್ವಲ್ಪವೇ ವಾಲುತ್ತ, ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಮತ್ತು ಲಕ್ಕಮ್ಮ, ಮೋಳಿಗೆ ಮಾರಯ್ಯ ಮತ್ತು ಮಹಾದೇವಿ, ಘಟ್ಟಿವಾಳಯ್ಯ, ಗೋರಕ್ಷ, ಗೊಗ್ಗಯ್ಯ, ನೀಲಲೋಚನೆಯಾದಿ ಪ್ರಸಂಗಗಳಿಂದ ತುಂಬಿಕೊಂಡು ಬಸವನ ವ್ಯಕ್ತಿತ್ವದತ್ತ ಹೊರಳುವುದನ್ನು ಗಮನಿಸಬಹುದು. ಎಲ್ಲಕ್ಕಿಂತ ಮುಖ್ಯವಾದದ್ದು ಪ್ರತಿ ಪರಿಷ್ಕರಣವೂ ಒಂದೊಂದು ಅಥವಾ ಎರಡು ಪ್ರಸಂಗಗಳನ್ನು ಹೆಚ್ಚಿಗೆ ಒಳಗೊಳ್ಳುತ್ತ ಹೋಗಿದೆ. ಹಲಗೆಯಾರ್ಯನಲ್ಲಿ ಪೂರ್ವವೃತ್ತಾಂತ, ನುಲಿಯ ಚಂದಯ್ಯನ ಪ್ರಸಂಗಗಳು ಸೇರಿಕೊಂಡರೆ, ಗುಮ್ಮಳಾಪುರದ ಸಿದ್ಧಲಿಂಗಯತಿಯಲ್ಲಿ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮನ ಪ್ರಸಂಗ, ಅನಂತರ ಸೂಚನೆ ಮಾತ್ರವಾಗಿದ್ದ ಗೋರಕ್ಷಕ ಪ್ರಸಂಗ ಸೇರಿಕೊಳ್ಳುತ್ತದೆ.

ಗೂಳೂರು ಸಿದ್ಧವೀರಣ್ಣನಲ್ಲಿ ಮೋಳಿಗೆ ಮಾರಯ್ಯ, ಮಹಾದೇವಿಯರ ಪ್ರಸಂಗ ಘಟ್ಟಿವಾಳಯ್ಯಗಳ ಪ್ರಸಂಗ, ನೀಲಮ್ಮಗಳ ಪ್ರಸಂಗ, ಹಾಗೂ ಗೊಗ್ಗಯ್ಯಗಳ ಪ್ರಸಂಗಗಳೂ ಸೇರಿಕೊಳ್ಳುತ್ತವೆ. ಈ ಎಲ್ಲ ಪ್ರಸಂಗಗಳಿಗೆ 'ದೀಕ್ಷೆ' ಕಾರಣವೆಂದು ಹೇಳುವುದು ಅತಿವ್ಯಾಪ್ತಿ ದೋಷಕ್ಕೆಡೆಗೊಡುತ್ತದೆ.

**ಮೂಲಸಂಪಾದನೆ ಮತ್ತು ಪರಿಷ್ಕರಗಳಿರುವ ಸಂಬಂಧ :** ಶೂನ್ಯಸಂಪಾದನೆ ಗಳಿಗೆ ಇರುವ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳದಿದ್ದರೆ ಆ ಪ್ರತಿಭಾವಂತ ದಾರ್ಶನಿಕರಿಗೆ ಅವಮಾನ ಮಾಡಿದಂತೆಯೇ ಸರಿ. ಉದಾಹರಣೆಗಾಗಿ ಮರುಳಶಂಕರ ದೇವರ ಪ್ರಸಂಗ ಹಾಗೂ ನುಲಿಯ ಚಂದಯ್ಯನ ಪ್ರಸಂಗಗಳನ್ನು ಪರಿಶೀಲಿಸಬಹುದು. ನುಲಿಯ ಚಂದಯ್ಯನ ಪ್ರಸಂಗ ಮೊದಲು ಕಾಣಿಸಿಕೊಳ್ಳುವುದು ಹಲಗೆಯಾರ್ಯನಲ್ಲಿ.

ಗುಮ್ಮಳಾಪುರದ ಸಿದ್ಧಲಿಂಗ ಯತಿ ಹಾಗೂ ಗೂಳೂರು ಸಿದ್ಧವೀರಣ್ಣರಲ್ಲಿ ಈ ಪ್ರಸಂಗ ಮುಂದುವರಿದಿದ್ದು, ಇದನ್ನು ಕಣ್ಣಿಟ್ಟು ನೋಡಿದರೆ ಹಲಗೆಯಾರ್ಯನ ಶೂನ್ಯಸಂಪಾದನೆಗೂ ಮುಂದಿನ ಇಬ್ಬರ ಶೂನ್ಯಸಂಪಾದನೆಗಳಿಗೂ ಇರುವ ಸಂಬಂಧ ವಿಶದವಾಗುತ್ತದೆ. ಮರುಳಶಂಕರದೇವರ ಪ್ರಸಂಗ ನಾಲ್ಕು ಶೂನ್ಯಸಂಪಾದನೆಗಳಲ್ಲಿಯೂ ಇದ್ದು, ನಾಲ್ಕೂ ಜನ ಶೂನ್ಯಸಂಪಾದನಕಾರರ ಸೃಜನಾತ್ಮಕ ಪ್ರತಿಭೆ ಹೇಗೆ ಒಂದೇ ದರ್ಶನಕ್ಕಾಗಿ ತುಡಿಯುವ ಸಂಕಲ್ಪದಿಂದ ನಿಯಂತ್ರಣಗೊಳ್ಳುತ್ತ ಹೋಗುತ್ತದೆಂಬುದು ಕುತೂಹಲಕರವಾದ ಅಭ್ಯಾಸವಾಗಿದೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಈ ನಾಲ್ಕನೇ ವಿಭಾಗದಲ್ಲಿ ಮರುಳಶಂಕರ ದೇವರ ಪ್ರಸಂಗವನ್ನು ಶಿವಗಣಪ್ರಸಾದಿಯ ಶೂನ್ಯಸಂಪಾದನೆಯಲ್ಲಿ ಹಲಗೆಯಾರ್ಯನ ಶೂನ್ಯಸಂಪಾದನೆ, ಗುಮ್ಮಳಾಪುರದ ಸಿದ್ಧಲಿಂಗಯತಿಯ ಶೂನ್ಯಸಂಪಾದನೆಯಲ್ಲಿ, ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯಲ್ಲಿ ಬಂದಿರುವ ಪ್ರಸಂಗವನ್ನು ವಿವರವಾಗಿ ಪರಿಶೀಲಿಸಿ ನಮ್ಮ ಮುಂದೆ ತೆಗೆದಿಟ್ಟಿದ್ದಾರೆ. ಲೇಖನವಿಸ್ತಾರ ಭಯದಿಂದ ಅದರ ವಿವರಣೆಯನ್ನು ಇಲ್ಲಿ ಕೊಡಲು ಹೋಗುತ್ತಾ ಇಲ್ಲ. ಆಸಕ್ತರು ದಯಮಾಡಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ "ಶೂನ್ಯಸಂಪಾದನೆಗಳು : ಮರುಚಿಂತನೆ" ಕೃತಿಯನ್ನು ಓದಬೇಕು. ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ನಾಲ್ಕನೇ ವಿಭಾಗದಲ್ಲಿ ನುಲಿಯ ಚಂದಯ್ಯ, ಗೋರಕ್ಷನ ಪ್ರಸಂಗವನ್ನು ವಿವರವಾಗಿ ಚರ್ಚಿಸಿದ್ದಾರೆ.

ಶಿವಗಣಪ್ರಸಾದಿ ಮಹಾದೇವಯ್ಯ ಹೇಳುವಂತೆ ಶೂನ್ಯಸಂಪಾದನೆಯ ಭವ್ಯಸೌಧ ನಿಂತಿರುವುದೇ ವಚನಗಳಿಂದ; ವಚನಗಳ ಮೇಲೆ ಶಿವಗಣಪ್ರಸಾದಿ ಮಹಾದೇವಯ್ಯ ತನ್ನ ಕೃತಿಯ ಆರಂಭದಲ್ಲೇ ಇದನ್ನು ಮುಕ್ತವಾಗಿರ್ದ 'ಶಿವಾದ್ವೈತ ವಚನಗಳಿಂ' ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ 'ಮಹಾನುಭಾವ ಪ್ರಸಂಗಮಂ ಮಾಡಿದ ಸರ್ವಕರಣ ಶೂನ್ಯಸಂಪಾದನೆಯ ಸದ್ಗೋಷ್ಠಿ ಕಥಾಪ್ರಸಂಗಮಂ' ಸಮರ್ಪಿಸಿದ್ದಾಗಿ ಹೇಳುತ್ತಾನೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ನಾಲ್ಕು ಶೂನ್ಯಸಂಪಾದನೆಗಳ ತಲಸ್ಪರ್ಶಿ ಅಧ್ಯಯನದಿಂದ ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಈ ರೀತಿ ನೀಡಿದ್ದಾರೆ. "ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸುವಾಗ ವಚನಗಳನ್ನು ಇದ್ದ ಹಾಗೆಯೇ ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸುವುದು ಒಂದು ಹಂತ. ಒಂದು ಪಕ್ಷ ಇರುವ ವಚನಗಳನ್ನು ಸೇರಿಸುವಾಗ ತೊಡಕಾಗುವುದಾದರೆ, ಎರಡು ವಚನಗಳ ನಡುವೆ ಗದ್ಯವನ್ನು ಸಂಬಂಧಕ್ಕಾಗಿ ಸೇರಿಸುವುದು ಇನ್ನೊಂದು ಹಂತ. ಇದೂ ಸಾಲದಾದಾಗ ಮೂಲವಚನದ ಆದಿ ಹಾಗೂ ಅಂತ್ಯ ಭಾಗಗಳನ್ನು ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಬದಲಿಸುವುದು ಮತ್ತೊಂದು ವಿಧಾನ. ಆ ರೀತಿಯ ಬದಲಾವಣೆ ಕೂಡ ಸಾಧ್ಯವಾಗದು ಅನ್ನಿಸಿದಾಗ ರೂಢಿಯಲ್ಲಿರುವ ವಚನದ ಮಾದರಿಯಲ್ಲಿ ಮತ್ತೊಂದು ವಚನವನ್ನು ತಾನೇ ರಚಿಸುವುದು ಇನ್ನೊಂದು ಬಗೆ. ಅದೂ

ಸರಿಯಾಗದಾದಾಗ ಮೂಲವಚನದ ಆಶಯವನ್ನು ಗ್ರಹಿಸಿ ನಿರೂಪಿಸಬೇಕಾದ ಪ್ರಸಂಗಕ್ಕಾಗಿ ಮತ್ತೊಂದು ವಚನವನ್ನು ಸ್ವಯಂ ರಚಿಸುವುದು, ಕೆಲವೊಮ್ಮೆ ಸಂಧರ್ಭಕ್ಕೆ ಅಗತ್ಯವಾದ ಒಬ್ಬರ ವಚನವನ್ನು ಕನಿಷ್ಠ ಪ್ರಮಾಣದಲ್ಲಿ ಅಗತ್ಯಕ್ಕೆ ತಕ್ಕಂತೆ ವ್ಯತ್ಯಯ ಮಾಡಿ ಅಂಕಿತ ಬದಲಿಸುವುದು. ಮಗದೊಮ್ಮೆ ಒಬ್ಬ ವಚನಕಾರನ ವಚನದರ್ಥವನ್ನು ಇನ್ನೊಬ್ಬ ವಚನಕಾರನ ವಚನವೆಂಬಂತೆ ಬಳಸಿಕೊಳ್ಳುವುದು, ಇಲ್ಲವೆ ಅದ್ಭುತವಾಗಿ ಗದ್ಯದಲ್ಲಿ ವಚನವೊಂದರ ಅಭಿವ್ಯಕ್ತಿ ಶಕ್ತಿಯನ್ನು ಬಳಸಿಕೊಳ್ಳುವುದು. ಹೀಗೆ ವಚನಗಳನ್ನು ಆಯ್ದುಕೊಳ್ಳುವಲ್ಲಿ ಶೂನ್ಯಸಂಪಾದನಕಾರರು ಬಳಸಿಕೊಂಡಿರುವ ವಿಧಾನಗಳು ಬಹುಮುಖವಾದುವು.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಮೇಲಿನ ಅಭಿಪ್ರಾಯವನ್ನು ಪುಷ್ಟಿಗೊಳಿಸಲು ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. ಈ ಭಾಗವನ್ನು ನಾವು ಮೂಲಪಠ್ಯವನ್ನು ಇಟ್ಟುಕೊಂಡು ಪರಿಶೀಲಿಸಬೇಕು. ಲೇಖನವಿಸ್ತಾರ ಭಯದಿಂದ ಉದಾಹರಣೆಗಳನ್ನು ಉಲ್ಲೇಖಿಸುವುದಿಲ್ಲ.

ಶೂನ್ಯಸಂಪಾದನೆಯ ಶಿಲ್ಪ ಅಧ್ಯಯನಯೋಗ್ಯವಾದದ್ದು, ಇದನ್ನು 'ವೀರಶೈವ ಧರ್ಮದ ಪಠ್ಯಗ್ರಂಥ' ಎಂದು ಕರೆಯಬೇಕೆನ್ನುವವರಿಗೆ ಸವಾಲನ್ನೊಡ್ಡುವ ರೀತಿಯಲ್ಲಿದೆ ಇದರ ಶಿಲ್ಪ. ಆರಂಭದಲ್ಲಿ ಅಲ್ಲಮಪ್ರಭುವಿನ ಸಂಗತಿಯನ್ನೆತ್ತಿಕೊಂಡು ಅನಿಮಿಷ ದರ್ಶನದಿಂದ ದೀಪ್ತವಾಗಿ ಬೆಳೆದುನಿಂತ ಧೀಶಕ್ತಿಯಾಗಿ ಆತನ ವ್ಯಕ್ತಿತ್ವವನ್ನು ಶೂನ್ಯಸಂಪಾದನಕಾರ ರೂಪಿಸಿದ್ದಾನೆ. ಬೆಳಕಾದ ಅಲ್ಲಮ ವ್ಯಕ್ತಿತ್ವ ಒಂದೊಂದೇ ದೀಪವನ್ನು ಮುಟ್ಟಿ ಬೆಳಕಾಗಿಸುವಂತೆ ಮಾಡಿ ಎಲ್ಲ ಬೆಳಕುಗಳೂ ಬೆಳಕಿನಲ್ಲಿಯೇ ಕೂಡಿಕೊಂಡು ಮಹಾಬೆಳಗಾಗುವಂತೆ ಕೃತಿಯನ್ನು ಸಂಯೋಜಿಸಿದ್ದಾನೆ. ಮುಂದೆ ಮುಕ್ತಾಯಕ್ಕಗಳ ಪ್ರಸಂಗ ಎದುರಾಗಿ ಶೂನ್ಯಸಂಪಾದನೆ ಧ್ವನಿರಮ್ಯತೆಯಿಂದ ಮೆರೆಯುತ್ತದೆ. ಇಲ್ಲಿ ಮೊದಲು ಎದುರಾಗುವುದು ಸಾವು. 'ಮರಣವೇ ಮಹಾನವಮಿ' ಎಂದವರಲ್ಲವೆ ಶರಣರು! ಅಂಥ ಒಬ್ಬ ಅಜಗಣ್ಣನ ಸಾವಿನ ಹಿನ್ನೆಲೆಯಲ್ಲಿ ಮುಕ್ತಾಯಿ ಮತ್ತು ಪ್ರಭುಗಳ ಸಂವಾದ ಎರಡೂ ವ್ಯಕ್ತಿತ್ವಗಳ ಎತ್ತರದ ನೆಲೆಯಲ್ಲೆ ನಡೆಯುವುದು ಈ ಕೃತಿಯ ಅರ್ಥಪೂರ್ಣತೆಗೆ ಪೋಷಕ ವಾದಂತೆಯೆ 'ಮಾತು–ಮೌನ'ಗಳ ಸಂಕರ್ಷದ ಚಿತ್ರವನ್ನು ಸಂಕೀರ್ಣಗೊಳಿಸುತ್ತದೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಶೂನ್ಯಸಂಪಾದನೆಯ ಶೈಲಿಯನ್ನು ಕುರಿತು ಇದುವರೆಗೂ ನಡೆದ ಚರ್ಚೆಯ ಜೊತೆಗೆ ತಮ್ಮ ಅಭಿಪ್ರಾಯವನ್ನು ಈ ರೀತಿ ನೀಡಿದ್ದಾರೆ. "ಶೈಲಿಯನ್ನು ಕುರಿತು ವಿವಿಧ ಅಭಿಪ್ರಾಯಗಳು ಹುಟ್ಟಿಕೊಂಡಿದ್ದು ಡಾ. ಎಲ್. ಬಸವರಾಜು ಅವರು ಇದನ್ನು ಚಂಪೂ ಶೈಲಿಯೆಂದು ನಿರ್ದೇಶಿಸಿದರೆ, ಡಾ. ಎಂ. ಚಿದಾನಂದಮೂರ್ತಿ ಯವರು ಇದನ್ನು ಗಮನದಲ್ಲಿಟ್ಟುಕೊಂಡೇ ಯಕ್ಷಗಾನೀಯ ಶೈಲಿ ಎಂದು ನಿರ್ದೇಶಿಸಿದರು. ಈ ಎರಡೂ ವಾದಗಳನ್ನು ಗಮನಿಸಿದ ಡಾ. ಎಂ.ಎಂ. ಕಲಬುರ್ಗಿಯವರು ಜನಪದ ಸಾಹಿತ್ಯ ಪ್ರಕಾರವಾದ ಪ್ರಸಂಗವು ಮಹಾಪ್ರಸಂಗ ಪ್ರಕಾರವಾಗಿ ಉದಾತ್ತೀಕರಣ ಗೊಂಡಿದೆಯೆಂದೇ ಹೇಳಬೇಕು. ಸಾಮಾನ್ಯ ಪ್ರಕಾರವಾದ ಸಾಂಗತ್ಯ ರತ್ನಾಕರವರ್ಣಿಯಿಂದ

ಉದಾತ್ತಗೊಂಡಂತೆ – ಎಂದು ಅಭಿಪ್ರಾಯಪಟ್ಟರು. ಶೂನ್ಯಸಂಪಾದನೆಯು ವಿಶಿಷ್ಟವೂ ಅಪೂರ್ವವೂ ಆದ ಕಾವ್ಯವಾಗಿಯೇ ಮಹತ್ವದ್ದಾಗಿರುವುದರಿಂದಲೆ ಈ ರೀತಿಯ ಅಭಿಪ್ರಾಯಗಳು ಹುಟ್ಟಿಕೊಂಡಿರುವುದು. ವಚನಗಳೂ ಶಾಸ್ತ್ರವಾದರೂ ಸಾಹಿತ್ಯಕವಾಗಿಯೂ ಭಾಷಿಕವಾಗಿಯೂ ಹೇಗೆ ಮಹತ್ತ್ವದ್ದಾಗಿವೆಯೋ ಶೂನ್ಯಸಂಪಾದನೆ ಕೂಡ ಹಾಗೆಯೇ ಮಹತ್ತ್ವದ್ದೆನಿಸಿದೆ. ಈ ಕೃತಿಯ ಕಾವ್ಯಮಯತೆಯನ್ನು ಒಂದೊಂದು ಪ್ರಸಂಗವನ್ನು ಎತ್ತಿಕೊಂಡು ಪರಿಶೀಲಿಸಬೇಕಾದ ಅಗತ್ಯವಿದೆ. ಅಷ್ಟೇ ಏಕೆ, ಈ ದಿಕ್ಕಿನಲ್ಲಿ ಈ ಕೃತಿಯ ಆಮೂಲಾಗ್ರ ಅಧ್ಯಯನ ಇನ್ನೂ ನಡೆಯಬೇಕಾಗಿದೆ.

"ಶೂನ್ಯಸಂಪಾದನೆಯ ಕೊರತೆ" ಬಗ್ಗೆ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ: "ಈ ಕೃತಿಯ ಶಿಲ್ಪವನ್ನು ಶಿಥಿಲಗೊಳಿಸುವ ಒಂದು ಪ್ರಮುಖ ಅಂಶವೆಂದು ಶರಣರು ಸಮಾವೇಶಗೊಂಡಾಗ ಅವರು ಪಾರಸ್ಪರಿಕವಾಗಿ ಮಾಡುವ ಸ್ತೋತ್ರ ವಚನಗಳ ಒಂದು ವ್ಯವಸ್ಥಿತ ಕ್ರಮವೇ ಈ ಕೃತಿಯಲ್ಲಿದ್ದು, ಬಸವಣ್ಣ ಚೆನ್ನಬಸವಣ್ಣನಿಗೆ ಉಪದೇಶ ಮಾಡಿದ ಪ್ರಸಂಗದಿಂದ ಆರಂಭವಾಗಿ ಮತ್ತೆ ಮತ್ತೆ ಬರುವ ಪಾರಸ್ಪರಿಕವಾದ ಶರಣರ ಸ್ತೋತ್ರ (ಅಭಿನಂದನೆಯ) ವಚನಗಳು ಕೇವಲ ಧಾರ್ಮಿಕ ವಿಧಿಯೆಂಬಂತೆ ಶೂನ್ಯಸಂಪಾದನೆಯಲ್ಲಿ ಬಂದು ಇದರ ಹೊರೆಯನ್ನು ಹೆಚ್ಚಿಸುತ್ತವೆ" ಎಂದಿದ್ದಾರೆ. ಇದಕ್ಕೆ ಹಲವು ಉದಾಹರಣೆಗಳನ್ನೂ ನೀಡಿದ್ದಾರೆ.

**ಧರ್ಮಗ್ರಂಥವೊ? ಸಾಹಿತ್ಯಗ್ರಂಥವೊ? :** ಶಿವಗಣಪ್ರಸಾದಿ ಮಹಾದೇವಯ್ಯನು ತನ್ನ ಶೂನ್ಯಸಂಪಾದನೆಯ ಕೊನೆಯಲ್ಲಿ ಬಹಳ ಸ್ಪಷ್ಟವಾಗಿ 'ಇದು ಪರಮಗುರು ಪರಮ ವೀರಶೈವ ಸಿದ್ಧಾಂತ ತತ್ವಜ್ಞಾನ' ಎಂದು ಘೋಷಿಸಿದ್ದಾನೆ. ಈ ಮಾತನ್ನು ಉಳಿದ ಮೂವರು ಪರಿಷ್ಕರಣಕಾರರಾದ ಹಲಗೆಯಾರ್ಯ, ಸಿದ್ಧಲಿಂಗ ಯತಿ, ಹಾಗೂ ಸಿದ್ಧವೀರಣ್ಣ ಕೂಡ ಉಲ್ಲೇಖಿಸಿದ್ದಾರೆ. ಅಂದರೆ ಎಲ್ಲರ ದೃಷ್ಟಿಯಲ್ಲಿಯೂ ಇದು ವೀರಶೈವ ಸಿದ್ಧಾಂತ ಗ್ರಂಥವಾಗಿಯೂ ಇರುವಂತಿದೆ ಎಂದು ಹೇಳಿಬಿಡಬಹುದು.

ನಾಲ್ವರೂ 'ಶೂನ್ಯಸಂಪಾದನೆಯ ಮಹಾಪ್ರಸಂಗ', 'ಅಸಂಖ್ಯಾತ ಮಹಾಗಣಂಗಳ ವಚನಗಳಿಂದ ಕಥಾಸಾಂಗತ್ಯವಾಗಿ', 'ಶಿವಾನುಭಾವನುಭಾವ ಶ್ರೋತದ್ವಾರ ಮುಖಕ್ಕೆ ಸಮರ್ಪಿಸಿದ್ದೆ'ನ್ನುವ ಮಾತೂ ಮುಖ್ಯ. ಇದು ಸಚ್ಚಿದಾನಂದ ನಿತ್ಯಪರಿಪೂರ್ಣ ರಸಾಮೃತ ಪ್ರಸನ್ನ ಪ್ರಸಾದವೂ ಆಗಿದೆಯೆಂಬುದೂ ಮುಖ್ಯ.

ನಾಲ್ಕೂ ಶೂನ್ಯಸಂಪಾದನೆಗಳು ವೀರಶೈವ ಧಾರ್ಮಿಕಾಸಕ್ತಿಯಿಂದ ಕೂಡಿವೆ ಎಂಬುದು ಎಷ್ಟು ಮುಖ್ಯವೋ, ಕಥಾಸಾಂಗತ್ಯವಾಗಿರುವ ಪ್ರಸಂಗಗಳಿಂದ ಕೂಡಿದ 'ಮಹಾಪ್ರಸಂಗ'ವಾಗಿವೆ ಎಂಬುದೂ ಅಷ್ಟೇ ಮುಖ್ಯ. ಸಾಲದುದಕ್ಕೆ ವಿರಕ್ತ ಪಟ್ಟ ಸ್ವೀಕರಿಸುವಾಗ ಗುರೂಪದೇಶಾನಂತರ ಪಡೆಯುವ ಶಾಸ್ತ್ರದ ಕಟ್ಟಿನಲ್ಲಿ ಅಡಕವಾದ ಗ್ರಂಥಗಳ ಪಟ್ಟಿ ಹೀಗಿದೆ.... "ಚೆನ್ನಬಸವರಾಜೇಂದ್ರರು ಶಿವಮೂರ್ತಿಯಾದ ಸೊನ್ನಲಿಗೆ ಸಿದ್ಧರಾಮೇಶಂಗೆ ನಿರೂಪಿಸಿದ ಗೊಹೇಶ್ವರನ ವಚನ, ಕರಣ ಹಸಿಗೆ, ಮಿಶ್ರಾರ್ಪಣ,

ಸಿದ್ಧರಾಮೇಶ್ವರ ಮಂತ್ರಗೋಪ್ಯ, ಅಕ್ಕಗಳ ಸೃಷ್ಟಿಯ ವಚನ, ಪ್ರಭುದೇವರ ಸೃಷ್ಟಿಯ ವಚನ, ಸಿದ್ಧೇಶ್ವರ ವಚನ, ಹಿರಿಯ ಮಂತ್ರಗೋಪ್ಯ, ಶೂನ್ಯಸಂಪಾದನೆ ಮುಂತಾದವುಗಳ ಸಂಗ್ರಹಿಸಿದ ಪುಸ್ತಕ. ಈ ವಾಕ್ಯಗಳು ನಿರಂಜನ ವಂಶರತ್ನಾಕರದಲ್ಲಿ ಉಲ್ಲೇಖಿತವಾಗಿರುವಂತಹದು. ಈ ಮಾತುಗಳನ್ನು ಗಮನಿಸಿದರೆ ವಿರಕ್ತರು ಪಡೆಯಬೇಕಾದ ಅತ್ಯಗತ್ಯ ಸಾಹಿತ್ಯರಾಶಿಯಲ್ಲಿ ಶೂನ್ಯಸಂಪಾದನೆಯೂ ಒಂದೆಂಬುದು ತಿಳಿಯುತ್ತದೆ.

ಈ ಶೂನ್ಯಸಂಪಾದನೆಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಮಹಾದೇವಯ್ಯನಿಗೆ ಆಗಲಿ, ಇತರ ಮೂವರು ಪರಿಷ್ಕರಣಕಾರರಿಗೆ ಆಗಲಿ, ವೀರಶೈವಾಚಾರವನ್ನು ಹೇಳುವ ಸಂಕಲ್ಪವಿದ್ದರೂ ಅದನ್ನು ನಿರೂಪಿಸುವ ಕ್ರಮ ಮಾತ್ರ ಧರ್ಮಗ್ರಂಥ ಅಥವಾ ಶಾಸ್ತ್ರಗ್ರಂಥದ ರೀತಿಯಲ್ಲಿ. ಅಂದರೆ ಬಸವಣ್ಣ, ಚೆನ್ನಬಸವಣ್ಣ, ಮಡಿವಾಳಯ್ಯಗಳ ಸಂಪಾದನೆಯ ಸಂದರ್ಭಗಳಲ್ಲಿ ಪ್ರಸಾದ, ಪಾದೋದಕ, ಷಟ್ಸ್ಥಲಗಳ ವಿವರಗಳು ಮಠ–ಮಾನ್ಯಗಳಲ್ಲಿ ವಿರಕ್ತರು ಸಂಧಿಸಿದಾಗ ಪರಸ್ಪರ ವಂದಿಸಿ ಗೌರವಿಸುವ ಧಾರ್ಮಿಕ ವಿಧಿಗಳು ಸಾಕಷ್ಟು ವಿವರವಾಗಿದ್ದರೂ 'ವೀರಶೈವವನ್ನು ಸೈದ್ಧಾಂತಿಕವಾಗಿ ಈ ಗ್ರಂಥದಲ್ಲಿ ಹೇಳಿಲ್ಲ. ಘಟನಾತ್ಮಕವಾಗಿ ನಿರೂಪಿಸಲಾಗಿದೆ. ಅಷ್ಟೇ ಅಲ್ಲ, ಕರಣಹಸುಗೆ, ಮಿಶ್ರಾರ್ಪಣಗಳು ಇಲ್ಲಿಲ್ಲದೇ ಇಲ್ಲ. ವಚನಶಾಸ್ತ್ರದಲ್ಲಿ ನಿರೂಪಿತವಾಗಿರುವ ಸೃಷ್ಟಿಯ ವಚನಗಳು, ಕಾಲಜ್ಞಾನ ವಚನಗಳು ಇಲ್ಲಿಲ್ಲ. ಅದಕ್ಕಿಂತಲೂ ಮುಖ್ಯವಾಗಿ 'ವೀರಶೈವ'ದ ನೆಲೆಯಾದ 'ಶಕ್ತಿ' ವಿಶಿಷ್ಟದ ಅರ್ಥಪೂರ್ಣತೆ ಹಾಗೂ ಇಹದ ಬದುಕಿನ ಮಹತ್ವಗಳು ಎಷ್ಟು ಮಹತ್ವಗೊಳ್ಳಬೇಕೊ ಅಷ್ಟು ಮೈತಳೆಯಲಿಲ್ಲ. ಶೂನ್ಯಸಂಪಾದನೆಕಾರರು ಹೊರಟಿದ್ದೇ ಶೂನ್ಯಸಂಪಾದನೆಗೆ, ಯಾವುದು ಶಿವವೊ, ಮಂಗಳವೊ; ಪರಿಪೂರ್ಣವೊ ಅದನ್ನು ಸಂಪಾದಿಸುವ ಕಡೆಗೆ. ಅದನ್ನು ಈ ಲೋಕದಲ್ಲಿಯೇ ಸಂಪಾದಿಸಲು ಸಾಧ್ಯ ಎಂದು ಕಾಣಹೊರಟ ಶರಣದರ್ಶನ ಇಲ್ಲಿ ಮುಕ್ಕಾಗಿದೆ.... ಇಂಥ ಗ್ರಂಥವನ್ನು ವೀರಶೈವದ ಪಠ್ಯಪುಸ್ತಕವೆಂದು ಕರೆಯುವುದು ಅವ್ಯಾಪ್ತಿದೋಷಕ್ಕೆ ಎಡೆ ಮಾಡುತ್ತದೆ. ಏಕೆಂದರೆ ಶೂನ್ಯಸಂಪಾದನೆಗಳು ಇಂದಿಗೂ ವೀರಶೈವ ಸಿದ್ಧಾಂತವನ್ನು ಪ್ರಸಂಗ ರೂಪದಲ್ಲಿ ಹೇಳುವ ತಂತ್ರದಿಂದಾಗಿ ಬೇರೆ ನೆಲೆಯಲ್ಲಿ ನಿಂತುಬಿಟ್ಟಿವೆ. ಆ ತಂತ್ರ ಶೂನ್ಯದಾಚೆಯ ಹನ್ನೆರಡನೆಯ ಶತಮಾನದ ಶರಣ ಬಾಳಿನ ಬೆಳಕುಗಳಿಗೆ ಬೆಳಕಿಂಡಿಗಳನ್ನು ತೆರೆದುಬಿಡುತ್ತದೆ. ಧರ್ಮ ವಿಚಾರಕ್ಕಿಂತ ಪ್ರಧಾನವಾಗುವಂತೆ ಬದುಕಿನ ಮೌಲ್ಯಗಳ ಕಡೆಗೆ ಇಂಥ ದರ್ಶನವನ್ನೊಳಗೊಂಡ ಸಾಹಿತ್ಯ ಹಾಗೂ ಅನುಭಾವ ಮಹತ್ವವನ್ನೊಳಗೊಂಡ ಕೃತಿಯನ್ನು 'ಮತೀಯ ಗ್ರಂಥ'ವೆಂದು ಪ್ರೊ. ತೀ.ನಂ.ಶ್ರೀ.ಯವರು ಕರೆದಿರುವುದು ಸೂಕ್ತವೆ ಎಂಬ ಪ್ರಶ್ನೆಯೂ ಏಳುತ್ತದೆ. ಹನ್ನೆರಡನೆಯ ಶತಮಾನದ ಶರಣರ ದರ್ಶನಗಳಿಗೆ ಹೋಲಿಸಿದರೆ ಶೂನ್ಯಸಂಪಾದನೆಯ ದರ್ಶನ 'ಸೀಮಿತ'ವಾದದ್ದೆಂಬ ಅರ್ಥದಲ್ಲಿ ಇದನ್ನು ಹೇಳಿದ್ದಾರೆಂದು ತಿಳಿಯಲಾಗುವುದಿಲ್ಲ. ಅಂಥ ಹೋಲಿಕೆಯನ್ನು ಅವರು ಮಾಡಿಯೇ ಇಲ್ಲ. ಸಾಲದ್ದಕ್ಕೆ ಶೂನ್ಯಸಂಪಾದನೆಯನ್ನು 'ಪ್ರಭುಲಿಂಗಲೀಲೆಯ ಗದ್ಯಾವತಾರ'ವೆಂದೇ ಅವರು ತೀರ್ಮಾನಿಸಿರುವುದು ಅವರ ಗ್ರಹಿಕೆಯ ಹಿನ್ನೆಲೆಯನ್ನು ವಿಶದಪಡಿಸುವಂತಿದೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಇದೇ ಕೃತಿಯ ಅನುಬಂಧದಲ್ಲಿ ಶೂನ್ಯಸಂಪಾದನೆಯ ಬಗ್ಗೆ ಉಂಟಾದ ಕೆಲವು ತಪ್ಪು ಗ್ರಹಿಕೆಗಳನ್ನು ತಮ್ಮ ಅಧ್ಯಯನದ ಬಲದಿಂದ ಇದು ಹಾಗಲ್ಲ ಹೀಗೆ ಎಂದು ಕರಾರುವಾಕ್ಕಾಗಿ ದಾಖಲಿಸಿದ್ದಾರೆ. ಪ್ರೊ. ಭೂಸನೂರಮಠ ಅವರ "ಶೂನ್ಯಸಂಪಾದನೆಯ ಪರಾಮರ್ಶೆ" ಬಗ್ಗೆ ಹಲವು ತಿದ್ದುಪಡಿಗಳನ್ನು ತಿಳಿಸಿದ್ದಾರೆ. ಆ ಎಲ್ಲಾ ತಿದ್ದುಪಡಿಗಳು 'ಶೂನ್ಯಸಂಪಾದನೆ ಪರಾಮರ್ಶೆ'ಯಲ್ಲಿ ಮರುಮುದ್ರಣದ ಸಮಯದಲ್ಲಿ ಅಡಿ ಟಿಪ್ಪಣಿಯಲ್ಲಿಯಾದರೂ ನಾವು ಸೇರಿಸಬೇಕು. 'ಕವಿಚರಿತೆ', 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿನ ಅಂಶಗಳಿಗೆ ತಿದ್ದುಪಡಿಗಳನ್ನು ಸೂಚಿಸಿದ್ದಾರೆ.

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಶೂನ್ಯಸಂಪಾದನೆಗಳನ್ನು ಅಂಗೈಯಲ್ಲಿನ ನೆಲ್ಲಿಯಂತೆ ಬಹಳ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಅದರ ಫಲರೂಪವಾಗಿ ಬಂದಿರುವ ಅಪೂರ್ವ ಗ್ರಂಥ "ಶೂನ್ಯಸಂಪಾದನೆಗಳು : ಮರುಚಿಂತನೆ".

**ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು :** ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರ ನೇತೃತ್ವದಲ್ಲಿ ಮೈಸೂರಿನ ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು 2009ರಲ್ಲಿ ಪ್ರಕಟವಾದ ಗ್ರಂಥಗಳು ಬಸವಾದಿ ಪ್ರಮಥರ ವಚನ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವ ವಿದ್ವಾಂಸರ ಕಡೆಯಿಂದ 105 ಪುಸ್ತಕಗಳನ್ನು ಬರೆಸಿ ಪ್ರಕಟಿಸಲಾಗಿದೆ. ಪ್ರತಿಯೊಂದು ಪುಸ್ತಕದಲ್ಲಿಯೂ 105 ಪುಸ್ತಕಗಳ ಶೀರ್ಷಿಕೆ ಇದೆ, ಆದರೆ ಲೇಖಕರ ಹೆಸರನ್ನು ಪುಸ್ತಕಗಳ ಜೊತೆ ಮುದ್ರಿಸಬೇಕಾಗಿತ್ತು. ನಾಡಿನ ಯಾವ ಮೂಲೆಯಲ್ಲೂ ಪುಸ್ತಕದಲ್ಲಿ ಇರುವ ಶೀರ್ಷಿಕೆ ಓದಿದ ಆಸಕ್ತನಿಗೆ ಪುಸ್ತಕದ ಕರ್ತೃ ಯಾರು ಎಂಬುದೂ ಸಹ ತಿಳಿಯಬೇಕಾಗಿತ್ತು. ಒಂದು ಸದೃಢ ವಚನ ಅಧ್ಯಯನ ಸಂಸ್ಥೆ ಹೊರತರುವಂತಹ ಗ್ರಂಥಗಳನ್ನು ಹೊರತಂದ ವಿದ್ವಾನ್ ಎಂ. ಶಿವಕುಮಾರಸ್ವಾಮಿಯವರ ಸಾಧನೆ ನಿಜವಾಗಿಯೂ ಮೆಚ್ಚುವಂತಹದು.

ಲೇಖಕರ ನುಡಿಯಲ್ಲಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ಈ ರೀತಿ ಬರೆದಿದ್ದಾರೆ: "ವಚನ ವಾಙ್ಮಯವನ್ನು ಕುರಿತು ಸಂಶೋಧನೆ ಮತ್ತು ಪ್ರಸಾರಕ್ಕಾಗಿ ಸ್ಥಾಪನೆಗೊಂಡಿರುವ ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಮೈಸೂರಿನಲ್ಲಿ ರಾಜ್ಯಮಟ್ಟದಲ್ಲಿ ಸಾಹಿತ್ಯ ಸಮ್ಮೇಳನ ಮತ್ತು ವಿಚಾರಸಂಕಿರಣಗಳನ್ನು, ಸಂಶೋಧನಾತ್ಮಕ ಪುಸ್ತಕಗಳನ್ನು ಬರೆಸುವ ಯೋಜನೆಯನ್ನು ಹಮ್ಮಿಕೊಂಡಿರುವುದು, ವಚನ ಸಾಹಿತ್ಯ ಪ್ರಿಯರೆಲ್ಲರಿಗೂ ಸಂತಸದ ಸಂಗತಿ. ಪ್ರಥಮ ಬಾರಿಗೆ ರಾಜ್ಯಮಟ್ಟದ ವಚನ ಸಾಹಿತ್ಯ ಸಮ್ಮೇಳನದಲ್ಲಿ ನಾನಾ ವಿದ್ವಾಂಸರು ಬರೆದ ನೂರೊಂದು ಕೃತಿಗಳನ್ನು ಲೋಕಾರ್ಪಣೆ ಮಾಡುವ ಮಹಾಸಾಧನೆಯ ಮಹತ್ವದ ಕೆಲಸವನ್ನು ಮಾಡುತ್ತಿರುವ ಪರಿಷತ್ತಿನ ಅಧ್ಯಕ್ಷರಾದ ವಿದ್ವಾನ್ ಎಂ. ಶಿವಕುಮಾರಸ್ವಾಮಿಯವರು ಅಭಿನಂದನಾರ್ಹರು.

ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು ಕೃತಿ ರಚಿಸಿಕೊಡಲು ಹೇಳುವ ಮೂಲಕ ನನಗೆ ಅಧ್ಯಯನದ ಅವಕಾಶ ಮತ್ತು ರಚನೆಗೆ ಪ್ರೇರಣೆ ನೀಡಿ ಪ್ರಕಟಿಸಿ ಬಿಡುಗಡೆ

ಮಾಡಿರುವುದಕ್ಕಾಗಿ ಪರಿಷತ್ತಿನ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಕೃತಜ್ಞತೆಗಳು" ಎಂದಿದ್ದಾರೆ.

"ಶೂನ್ಯಸಂಪಾದನೆ ಮತ್ತು ಪರಿಷ್ಕಾರಗಳು" ಕೃತಿಯ ಶೀರ್ಷಿಕೆ ಎರಡು ಮಹತ್ವದ ಅಂಶಗಳತ್ತ ನಮ್ಮ ಗಮನ ಹರಿಯುವಂತೆ ಮಾಡುತ್ತದೆ. ಮೊದಲನೆಯದು ಶೂನ್ಯಸಂಪಾದನೆಗಳು ಎಂಬ ವಿಚಾರ. ಎರಡನೆಯದು ಅದಕ್ಕೆ ಸಂಬಂಧಿಸಿದ ಪರಿಷ್ಕರಣಗಳು ಎಂಬುದು. ಶೂನ್ಯಸಂಪಾದನೆ ಎಂಬುದು ಒಂದು ವಿಶಿಷ್ಟ ಸಮಾಸಪದ – ಇದರ ಅರ್ಥ ಸೊನ್ನೆಯನ್ನು ಸಂಪಾದಿಸುವುದು ಎಂದಲ್ಲ; ಶೂನ್ಯವನ್ನು ಅಂದರೆ ಸೃಷ್ಟಿಯ ಮೂಲವಾದ ಬಯಲನ್ನು, ಅಂದರೆ ಸೃಷ್ಟಿಕಾರಣವಾದ ದೇವರನ್ನು ಸಂಪಾದಿಸುವುದು ಎಂದರ್ಥ. ಶೂನ್ಯಸಂಪಾದನೆ ಅಂದರೆ ದೇವರ ಸಂಪಾದನೆ ಅಥವಾ ಶರಣರ ಮಾತಿನಲ್ಲಿ ಶಿವಸಂಪಾದನೆ ಎಂದಾಗುತ್ತದೆ. ಶೂನ್ಯವೆಂಬುದಕ್ಕೆ ಬಯಲು ಎಂಬ ಅರ್ಥವನ್ನು ಶರಣರು ನೀಡಿದರು. ಅದರೆ ಈ ಬಯಲು ಏನೇನೂ ಇಲ್ಲದುದಲ್ಲ; ಎಲ್ಲವನ್ನೂ ಒಳಗೊಂಡದ್ದು. ಆದ್ದರಿಂದಲೇ ಶೂನ್ಯಸಂಪಾದನೆ ಎಂದರೆ (ಬಯಲ ಗಳಿಕೆ) ಶಿವಸಂಪಾದನೆ ಎಂದು ಅರ್ಥವಾಗುತ್ತದೆ. ಆಶ್ಚರ್ಯವೆಂದರೆ, ಈ ಶೂನ್ಯಸಂಪಾದನೆ ಎಂಬ ಸಮಾಸಪದ ಇಂದು ಒಂದು ವಿಶಿಷ್ಟ ರೀತಿಯ ಗ್ರಂಥವೆಂಬ ಸೂಚನೆ ನೀಡುತ್ತದೆ. ಅಂಥ ಗ್ರಂಥವನ್ನು ಪ್ರಥಮವಾಗಿ ರೂಪಿಸಿದ ಮಹಾನ್ ಪ್ರತಿಭಾವಂತ ಶಿವಗಣಪ್ರಸಾದಿ ಮಹಾದೇವಯ್ಯ.

ಈತ ಈ ಗ್ರಂಥವನ್ನು ರೂಪಿಸುವಾಗ ತನ್ನದೇ ಆದ ವಿವರಣೆ ನೀಡಿದ್ದಾನೆ. ಆರಂಭದಲ್ಲಿ, ಆತನ ಹೇಳಿಕೆಯನ್ನು ಗಮನಿಸಿದರೆ ನಮಗೆ ವೇದ್ಯವಾಗುವ ಮುಖ್ಯ ಸಂಗತಿಗಳು ಇವು:

1. ಒಂದನೆಯದು ಜಗದಾಚಾರ್ಯರೆನಿಸಿದ ಅಲ್ಲಮ ಪ್ರಭುದೇವರು, ಬಸವಣ್ಣ ಚೆನ್ನಬಸವಣ್ಣ ಮೊದಲಾದ ಅಸಂಖ್ಯಾತ ಶರಣರೊಂದಿಗೆ ಸದ್ಗೋಷ್ಠಿ ನಡೆಸಿದರು.
2. ಸದ್ಗೋಷ್ಠಿಯು ಅನೇಕ ಕಥಾಪ್ರಸಂಗಗಳನ್ನು ಒಳಗೊಂಡಿತ್ತು.
3. ಅಂಥ ಕಥಾಪ್ರಸಂಗಗಳನ್ನು ಒಳಗೊಂಡ ಒಂದು ಮಹಾಪ್ರಸಂಗವಾಗಿ ಶೂನ್ಯಸಂಪಾದನೆ ರಚಿತವಾಯಿತು.
4. ಈ ಶೂನ್ಯಸಂಪಾದನೆಯ ರಚನೆಗೆ ಮೂಲದ್ರವ್ಯವಾದದ್ದು ಮುಕ್ತಕಗಳಾಗಿದ್ದ ಶಿವಾದ್ವೈತ ವಚನಗಳು.
5. ಇವುಗಳನ್ನು ಉತ್ತರ–ಪ್ರತ್ಯುತ್ತರ ರೂಪವಾಗಿ ನಾನು ನಿರೂಪಿಸಿದ್ದೇನೆ ಎಂದು ವಿಶದೀಕರಿಸುತ್ತಾನೆ.

ಅಂದರೆ, ಶಿವಗಣಪ್ರಸಾದಿ ಮಹಾದೇವಯ್ಯನ ದೃಷ್ಟಿಯಲ್ಲಿ ಇದು ಹನ್ನೆರಡನೇ

ಶತಮಾನದಲ್ಲಿ ಅಲ್ಲಮಪ್ರಭುವಿನ ನೇತೃತ್ವದಲ್ಲಿ ನಡೆದ ಶರಣರ ಮಹಾಂದೋಲನದ ಒಂದು ಸಂಗತಿಯಾಗಿದೆ. ಇದರಿಂದಾಗಿ ಆತ ಪ್ರಭುವಿನ ನೇತೃತ್ವದಲ್ಲಿ ಶರಣರು ಭೂಲೋಕದಲ್ಲವತರಿಸಿ ಇಲ್ಲಿನ ಕರ್ತವ್ಯಗಳನ್ನು ನಿರ್ವಹಿಸಿ ಅನಂತರ ತಮ್ಮ ತಮ್ಮ ನೆಲೆಗಳಿಗೆ ಹೋದರು ಎಂಬ ಕಥಾನಕವಾಗಿ ಇದನ್ನು ಕಲ್ಪಿಸಿದ್ದಾನೆ. ಇಂಥ ಶರಣರು ಇಲ್ಲಿ ಬಂದು ಮಾಡಿದ ಕಾರ್ಯವೆಂದರೆ ಶೂನ್ಯವನ್ನು ಸಂಪಾದಿಸುವುದು ಎಂಬುದು ಅವನ ಇಂಗಿತವಿದ್ದಂತಿದೆ. ಇಂಥ ಒಂದು ಗ್ರಂಥವನ್ನು ಶೂನ್ಯಸಂಪಾದನೆ ಎಂದು ನಾವು ಗುರುತಿಸುತ್ತೇವೆ. ಆಶ್ಚರ್ಯವೆಂದರೆ ಮಹಾದೇವಯ್ಯನ ಶೂನ್ಯಸಂಪಾದನೆ ಯಾದ ಮೇಲೆ (ಕ್ರಿ.ಶ. 1400) ಹಲಗೆಯಾರ್ಯರ (ಕ್ರಿ.ಶ. 1500) ಶೂನ್ಯಸಂಪಾದನೆ, ಅನಂತರ ಗುಮ್ಮಳಾಪುರದ ಸಿದ್ಧಲಿಂಗ ಯತಿಗಳ ಶೂನ್ಯಸಂಪಾದನೆ (ಕ್ರಿ.ಶ. 1540), ಮತ್ತೆ ಗೂಳೂರು ಸಿದ್ಧವೀರಣ್ಣನ ಶೂನ್ಯಸಂಪಾದನೆ (ಕ್ರಿ.ಶ. 1580) ಬಂದವು. ಅಂದರೆ ಮಹಾದೇವಯ್ಯನ ಶೂನ್ಯಸಂಪಾದನೆ ಬಂದಾದ ಮೇಲೆ ಮತ್ತೆ ಮೂರು ಶೂನ್ಯಸಂಪಾದನೆಗಳು ಬಂದವು. ಒಟ್ಟಾರೆ ಈಗ ನಮ್ಮೆದುರು ನಾಲ್ಕು ಶೂನ್ಯಸಂಪಾದನೆಗಳಿವೆ. ಇವುಗಳಲ್ಲಿ ಮಹಾದೇವಯ್ಯನ ಶೂನ್ಯಸಂಪಾದನೆಯ ಬಳಿಕ ಶೂನ್ಯಸಂಪಾದನೆ ಎಂದು ಉಳಿದವುಗಳನ್ನು ಈ ಶೂನ್ಯಸಂಪಾದನೆಯ ಪರಿಷ್ಕರಣಗಳು ಎಂದು ಹೇಳಲಾಗುತ್ತಿದೆ ಎಂದಿದ್ದಾರೆ. ಇಲ್ಲಿಂದ ಮುಂದೆ ಪುಸ್ತಕದ ವಿಷಯ ಹೆಚ್ಚು ಕಡಿಮೆ "ಶೂನ್ಯಸಂಪಾದನೆಗಳು : ಮರುಚಿಂತನೆ" (2003) ಪುಸ್ತಕದಲ್ಲಿ ಚರ್ಚಿತವಾದ ವಿಷಯಗಳೇ ಇಲ್ಲಿಯೂ ವಿಸ್ತೃತವಾಗಿ ಚರ್ಚಿತವಾಗಿದೆ. ಆಸಕ್ತರು ಎರಡೂ ಪುಸ್ತಕಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಬೇಕು.

ಈ ಪುಸ್ತಕದಲ್ಲಿ ಮಹಾದೇವಿಯಕ್ಕನ ಪ್ರಸಂಗವನ್ನು ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ವಿವರವಾಗಿ ಪರಿಶೀಲಿಸಿದ್ದಾರೆ. "ಮಹಾದೇವಿಯಕ್ಕನ ಪ್ರಸಂಗ ಮಹಾದೇವಯ್ಯನಲ್ಲಿ ಆಕೆ ಕಲ್ಯಾಣವನ್ನು ಬಿಟ್ಟುಹೊರಡುವವರಗೆ ಮಾತ್ರ ಚಿತ್ರಿತವಾಗಿದ್ದರೆ, ಹಲಗೆಯಾರ್ಯ ಆಕೆ ಶ್ರೀಶೈಲದ ಮಲ್ಲಿಕಾರ್ಜುನನಿಗಾಗಿ ಹಾತೊರೆಯುವುದು ಮತ್ತು ಅವನಲ್ಲಿ ಒಂದಾಗುವ ಈ ಘಟನೆಯವರೆಗೂ ಮುಂದುವರೆದಿದೆ. ಗುಮ್ಮಳಾಪುರದ ಸಿದ್ಧಲಿಂಗಯತಿಯೂ ಇದನ್ನು ಅನುಸರಿಸಿದ್ದಾನೆ. ಅಲ್ಲಿ ಇಲ್ಲಿ ಒಂದಿಷ್ಟು ಬದಲಾವಣೆ ಹಾಗೂ ಪರಿಷ್ಕರಣ ಮಾಡಿದ್ದಾನೆ, ಅಷ್ಟೆ. ಗೂಳೂರು ಸಿದ್ಧವೀರಣ್ಣ ಕೂಡ ಹಲಗೆಯಾರ್ಯನ (ಸಿದ್ಧಲಿಂಗ ಯತಿ ಬಳಸಿಕೊಳ್ಳದೆ ಬಿಟ್ಟಿರುವ) ವಚನಗಳನ್ನು ಬಳಸಿಕೊಂಡಿರುವುದು ಗಮನಾರ್ಹ.

(ಮುಂದುವರಿಯುವುದು)

# ಪುರಂದರದಾಸರ ಉಗಾಭೋಗ ಮತ್ತು ಶರಣರ ವಚನಗಳ ತೌಲನಿಕ ಅಧ್ಯಯನ

**ಪ್ರೊ. ಎಚ್.ಎಸ್. ಉಮಾದೇವಿ**

"ಉಗಾಭೋಗ" ಎಂದರೆ ಛಂದಸ್ಸಿನ ಕಟ್ಟುಪಾಡಿಲ್ಲದ, ರಾಗದಿಂದ ಕೂಡಿದ ಸಣ್ಣ ಕವಿತೆ. ಇದರಲ್ಲಿ ರಾಗ ಮಾತ್ರ ಇರುತ್ತದೆ, ತಾಳ ಇರುವುದಿಲ್ಲ. ಇದು ಶಿವಶರಣರ "ವಚನ" ಅಥವಾ ಸಂಸ್ಕೃತ ಶ್ಲೋಕವಿದ್ದಂತೆ. ಕನ್ನಡದಲ್ಲಿ ಅದರಲ್ಲೂ ಹರಿದಾಸ ಸಾಹಿತ್ಯದಲ್ಲಿ ಮಾತ್ರ "ಉಗಾಭೋಗ" ಎಂಬ ಮಾತು ಬರುತ್ತದೆ. ಅಲ್ಲಿ ನೇರವಾದ ಮಾತು, ಸರಳ ನಿರೂಪಣೆ, ಪದ ಜೋಡಣೆಗಳ ಸೊಗಸು ಇರುತ್ತದೆ. ಉಗಾಭೋಗ ಸ್ವರಪ್ರಧಾನವಾಗಿದ್ದು, ಇದನ್ನು ವಿಳಂಬಕಾಲದಲ್ಲೇ ಹಾಡುವುದು ರೂಢಿ. ಸಾಮಾನ್ಯವಾಗಿ ದೇವರನಾಮವನ್ನು ಹಾಡುವ ಮೊದಲು, ಆ ದೇವರನಾಮದ ಸಾಹಿತ್ಯಾರ್ಥಕ್ಕೆ ಅನುಗುಣವಾಗಿ ಒಂದು ಉಗಾಭೋಗವನ್ನು ಹಾಡಿ, ಅನಂತರ ದೇವರನಾಮವನ್ನು ಹಾಡುವುದು ವಾಡಿಕೆ. ಅಂತಹ ನೂರಾರು ಉಗಾಭೋಗಗಳನ್ನು ರಚಿಸಿದ್ದಾರೆ, ಹರಿದಾಸ ಸಾಹಿತ್ಯ ಸಾರ್ವಭೌಮ ಶ್ರೀ ಪುರಂದರದಾಸರ ಕಾಲ ಕ್ರಿ.ಶ. 1485–1565. "ಕರ್ನಾಟಕ ಸಂಗೀತ ಪಿತಾಮಹ" "ದಾಸರೆಂದರೆ ಪುರಂದರದಾಸರಯ್ಯಾ" ಮುಂತಾದ ಗೌರವಗಳಿಗೆ ಪಾತ್ರರಾದವರು. ಹಂಪೆಯಲ್ಲಿ ಗುರು ವ್ಯಾಸರಾಜರಿಂದ ಮಂತ್ರೋಪದೇಶವನ್ನು ಪಡೆದು "ಪುರಂದರವಿಠಲ" ಎಂಬ ಅಂಕಿತವನ್ನು ಹೊಂದಿ ದಾಸರಾಗಿ, ವೈರಾಗ್ಯ ಭಾಗ್ಯಶಾಲಿಗಳಾಗಿ, ಸಮಾಜಸುಧಾರಕರಾಗಿ, ಧರ್ಮಪ್ರವರ್ತಕರಾಗಿ ಎಲ್ಲಕ್ಕೂ ಮಿಗಿಲಾಗಿ ಕನ್ನಡ ಸಾಹಿತ್ಯವನ್ನು ಅದ್ಭುತವಾಗಿ ಬೆಳೆಸಿದ ಧೀಮಂತ ಚೇತನ ಪುರಂದರದಾಸರು 4,25,000 ಕೀರ್ತನೆ ಸುಳಾದಿ, ಉಗಾಭೋಗಗಳನ್ನು ರಚಿಸಿದರೆಂದು ಪ್ರತೀತಿ. ಆದರೆ ಈಗ ಲಭ್ಯವಿರುವುದು ಸುಮಾರು 800ರಷ್ಟು ಮಾತ್ರ. ಅವರ ಕೃತಿಗಳಲ್ಲಿ ಒಂದೊಂದರಲ್ಲೂ ಅಮೋಘ ಲೋಕನೀತಿ ಮತ್ತು ತತ್ವಪ್ರತಿಪಾದನೆಗಳಿವೆ. ಆತ್ಮಶೋಧದ ಸೊಗಡಿವೆ, ಉಪನಿಷತ್ತುಗಳ ಸಾರವಿದೆ. ಅವರು ಲೋಕನೀತಿಯನ್ನು ಹೇಳುವುದಕ್ಕೆ ಮುಂಚೆ, ತಾವು ಸ್ವತಃ ನಡೆದು ತೋರಿಸಿದರು. ಅನುಭವದ ಮೂಸೆಯಲ್ಲಿ ಪರಿಪಾಕವಾಗಿ ಬಂದದ್ದು ಅವರ ಕೃತಿಗಳು. ಆದ್ದರಿಂದಲೇ ಪುರಂದರದಾಸರು ಇಂದಿಗೂ ಎಂದೆಂದಿಗೂ ಪ್ರಸ್ತುತ. ಏಕಕಾಲದಲ್ಲಿ ಆತ್ಮೋನ್ನತಿ ಮತ್ತು ಸಮಾಜಸುಧಾರಣೆ ಎರಡನ್ನೂ ಗಾನಕಲೆಯಿಂದ ಸಾಧಿಸಿದವರು. ಗೃಹಸ್ಥಾಶ್ರಮದ ಹಿರಿಮೆಯನ್ನು ಅರಿತಿದ್ದವರು. ಭಕ್ತಿ ಮತ್ತು ಸಂಗೀತ ಉಪಾಸನೆಯಿಂದ ತಮ್ಮ

ಆರಾಧ್ಯದೈವದ ದಾಸರಾಗಿ ಸಾಕ್ಷಾತ್ಕಾರ ಪಡೆದುಕೊಂಡಿದ್ದ ಜೀವನ್ಮುಕ್ತರು. ಸಂಪ್ರದಾಯದಲ್ಲಿ ಅವರನ್ನು "ನಾರದನ ಅವತಾರ" ಎನ್ನುತ್ತಾರೆ.

"ಪುರಂದರವಿಠಲ" ಅಂಕಿತವಿರುವ ಎಲ್ಲಾ ಉಗಾಭೋಗಗಳಲ್ಲೂ ಭಕ್ತಿ, ತತ್ವ ಸಾರಾರ್ಥ, ಸಂಗೀತ, ದೈವಿಕ ಗುಣಗಳು ರಾರಾಜಿಸುತ್ತಿವೆ. ಮನಮುಟ್ಟುವಂತಿರುವ ಉಗಾಭೋಗದ ಪದಗಳು ಆತ್ಮದ ಅವಲೋಕನಕ್ಕೆ "ದಾರಿದೀಪ" ಎನ್ನಬಹುದು. ಇಂತಹ ಒಂದು ಉಗಾಭೋಗವನ್ನು ಈಗ ನೋಡೋಣ :

ಹರಿಯೆಂಬೋದೇ ಲಗ್ನಬಲವು
ಹರಿಯೆಂಬೋದೇ ಸುದಿನಬಲವು
ಹರಿಯೆಂಬೋದೇ ತಾರಾಬಲವು
ಹರಿಯೆಂಬೋದೇ ಚಂದ್ರಬಲವು
ಹರಿಯೆಂಬೋದೇ ವಿದ್ಯಾಬಲವು
ಹರಿಯೆಂಬೋದೇ ದ್ರವ್ಯಬಲವು
ಹರಿ ಲಕ್ಷ್ಮೀಪತಿ ಪುರಂದರ ವಿಠಲನೇ
ಬಲವಯ್ಯಾ ಸರ್ವಸುಜನರಿಗೆ

ಈ ಉಗಾಭೋಗದ ಜೀವನದಲ್ಲಿ "ಹರಿ"ಯ ಪಾತ್ರ ಎಷ್ಟು ಮುಖ್ಯ ಎಂಬುದು ವೇದ್ಯವಾಗುತ್ತದೆ. "ಹರಿ" ಎಂಟು ಕಂಬದಲ್ಲಿ ಇದ್ದಾನೆ. ಅಷ್ಟ ದಿಕ್ಕುಗಳಲ್ಲೂ ಇದ್ದಾನೆ. ಅವನೇ ಎಲ್ಲಾ ಎಂಬುದು ಅರ್ಥ. ಶರೀರದ ಪೋಷಣೆಗೆ ಆಹಾರ ಅತ್ಯವಶ್ಯಕವಾಗಿ ಬೇಕಾಗಿರುವಂತೆ, ಆತ್ಮಪೋಷಣೆಗೆ ಪ್ರಾರ್ಥನೆಯೂ ಅಷ್ಟೇ ಅವಶ್ಯಕ. ಪ್ರಾರ್ಥನೆ ಭಾರತೀಯ ಸಂಸ್ಕೃತಿಯ ಕೆನೆ; ಭಕ್ತಿ ಬಿತ್ತನೆಗಳ ತೆನೆ. ಅದು ನಾಲಗೆಯ ನುಡಿಯಲ್ಲ, ಅಂತಃಕರಣದ ಮಹಾಪೂರ ಹೃದಯಸಂಗೀತ. "ದೇವಾ, ನಮಗೆ ಉತ್ತಮವಾದ ಧನ, ಸನ್ಮತಿ, ಸಮೃದ್ಧಿ, ಶಾಶ್ವತ ಆರೋಗ್ಯ, ಶುಭದಿನ ಇವುಗಳನ್ನು ಅನುಗ್ರಹಿಸು" ಎಂದು ಪ್ರಾರ್ಥನೆಯ ಬಗೆಗೆ ಋಗ್ವೇದದಲ್ಲಿ ಉಲ್ಲೇಖವಿದೆ. ಅದರಂತೆಯೇ ಪುರಂದರದಾಸರು ಈ ಉಗಾಭೋಗದಲ್ಲಿ ಹರಿಯೇ ಎಲ್ಲ ಬಲವು ಎಂದಿದ್ದಾರೆ. ವಿದ್ಯೆ, ಸುದಿನ, ಲಗ್ನ, ದ್ರವ್ಯ ಎಲ್ಲವೂ ಲಭಿಸುವುದು "ಹರಿನಾಮಸಂಕೀರ್ತನೆ"ಯಿಂದ ಎಂದು ಸ್ಪಷ್ಟಪಡಿಸಿದ್ದಾರೆ. ದೈವದ (ಹರಿಯ) ಅನುಗ್ರಹ ಬಲವೇ ನಿಜವಾದ ಬಲವು ಎಂದು ತಿಳಿಸಿರುವುದು ಮನನೀಯ. ಮನುಷ್ಯನಿಗೆ ಶಾಶ್ವತ ಅರಿವು ಮೂಡಿಸುವತ್ತ ಗಮನ ಸೆಳೆದಿದ್ದಾರೆ.

ಇದೇ ರೀತಿ 12ನೆಯ ಶತಮಾನದಲ್ಲಿ ಶರಣರು ತಮ್ಮ ವಚನಗಳ ಮೂಲಕವೂ ಸಮಾಜ ಸುಧಾರಣೆ, ಆತ್ಮಶುದ್ಧಿ, ಕಾಯಕದ ಮಹತ್ವ, ದಾಸೋಹ ಮುಂತಾದ ತತ್ವಗಳ ಮೂಲಕವೂ ಮೌಲ್ಯಗಳನ್ನು ಸಾರಿದರು. ಅಲ್ಲಮಪ್ರಭುದೇವ, ಬಸವಣ್ಣನವರು, ಅಕ್ಕಮಹಾದೇವಿ, ಚೆನ್ನಬಸವಣ್ಣ ಮುಂತಾದ ಶರಣರ ವಚನಗಳನ್ನು ಗಮನಿಸಿದಾಗ, ದಾಸರ ಉಗಾಭೋಗಗಳಿಗೂ, ಶರಣರ ವಚನಗಳಿಗೂ ಸಾಮ್ಯತೆಯನ್ನು ಕಾಣಬಹುದು.

ಶಿವಶರಣರು ಒಂದು ವ್ಯವಸ್ಥಿತ ಭದ್ರ ಬುನಾದಿಯುಳ್ಳ, ಎಲ್ಲಾ ರೀತಿಯಲ್ಲೂ ಪರಿಪೂರ್ಣವಾದ ಸ್ವಾವಲಂಬಿ ಸಮಾಜವನ್ನು ಕಟ್ಟಿದರು. ಹೊಸಹೊಸ ಮೌಲ್ಯಗಳನ್ನು ವಚನಗಳ ಮೂಲಕ ಸಾರುತ್ತಾ ನಡೆನುಡಿಯಲ್ಲಿ ಏಕತೆಯಿಂದ "ಅರಿತು" ಬಾಳಿದವರು.

ಶರಣರು ಸಾಮಾನ್ಯವಾಗಿ, ವ್ಯಾವಹಾರಿಕ ಮತ್ತು ಸಾಮಾಜಿಕ ದೃಷ್ಟಿಯಿಂದಲೂ ವಿವೇಚನೆಯನ್ನು ಮಾಡಿ, ಸಾಮಾನ್ಯ ವ್ಯವಹಾರಗಳಲ್ಲಿ ಪ್ರತಿನಿತ್ಯದ ಜೀವನದಲ್ಲಿ "ಸಾಮಾನ್ಯ ನೀತಿ" ಅಳವಡಿಸಿಕೊಳ್ಳಬೇಕು ಎಂದು ಅರಿತಿದ್ದರು. ಎಲ್ಲಾ ಕಡೆಗಳಲ್ಲೂ "ನೀತಿ" ನೆಲೆಗೊಂಡರೆ ಅಲ್ಲಿ "ಪರಬ್ರಹ್ಮ" ದೈವದ ಸ್ವರೂಪದಲ್ಲಿರುತ್ತದೆ ಎಂದು ಎಲ್ಲಾ ವಚನಕಾರರು ಅಭಿಪ್ರಾಯಪಡುತ್ತಾರೆ.

ಚನ್ನಬಸವಣ್ಣನವರ ಒಂದು ವಚನ ಹೀಗಿದೆ :

ಕಾಮವೆಂಬುದೊಂದು ಪಾಪಿ
ಮದವೆಂಬುದೊಂದು ದ್ರೋಹಿ
ಮತ್ಸರವೆಂಬುದೊಂದು ಕೈ ಸೂನೆಗರ
ಇಂತಿವನರಿದು ಮರೆದು ಹರವಸಂಭೋಗಿ
ಹೊಯಿ ಹೊಡೆದಂತಿರ್ದೊಡೆ
ಕೂಡಲಚೆನ್ನಸಂಗನಲ್ಲಿ ಅವರ ಲಿಂಗವಂತರೆಂಬೆ.

ಚನ್ನಬಸವಣ್ಣನವರು ಕಾಮ, ಕ್ರೋಧಗಳನ್ನು ಬಿಡುವುದೇ ಶೀಲ ಎಂದಿದ್ದಾರೆ. ಅವರ ಪ್ರಕಾರ ಕಾಮ, ಕ್ರೋಧ, ಮತ್ಸರ ಇವೆಲ್ಲವೂ ಅನೈತಿಕತೆ ಮನುಷ್ಯನ ಆರೋಗ್ಯಕರ ಬೆಳವಣಿಗೆಗೆ ಮಾರಕವಾದ ಇವುಗಳಿಂದ ಬಿಡುಗಡೆ ಪಡೆದಾಗ ಮಾತ್ರ ಜನರು ಆದರ್ಶ ವ್ಯಕ್ತಿಗಳಾಗುತ್ತಾರೆ.

ದಾಸರು "ಹರಿ" ಎಂಬುದು ಲಗ್ನ, ಸುದಿನ, ತಾರಾ, ಚಂದ್ರ, ವಿದ್ಯಾ, ದ್ರವ್ಯ ಬಲವೆಂದರೆ, ಶರಣರ ಕಲ್ಪನೆಯಲ್ಲಿ "ಕಾಲ" ಎಂಬುದು ಪಾಪಿ, "ಮರೆಹು" ಎಂಬುದು ದ್ರೋಹಿ, "ಮತ್ಸರ" ಎಂಬುದು "ಕೈಸೂನೆಗಾರ" ಎಂದು ಮಾರ್ಮಿಕವಾಗಿ ಟೀಕಿಸಿದ್ದಾರೆ. ಎಷ್ಟೇ ಗ್ರಹಬಲವಿದ್ದರೂ, "ದೈವಬಲ" ಇಲ್ಲದೊಡೆ, ಮಾನವನ ಜೀವನ ಅಧಃಪತನದೆಡೆಗೆ ಸಾಗುತ್ತದೆ ಎಂದಿದ್ದಾರೆ.

ಆದ್ದರಿಂದ ಇದೆಲ್ಲವನ್ನೂ ಅರಿತು, ದೈವದೆಡೆಗೆ ಮುಖ ಮಾಡಿದರೆ ಸಿಗುವುದೇ "ಆತ್ಮಾನಂದ". ಅದು ಮುಕ್ತಿಪಥಕ್ಕೆ ದಾರಿ, ಎಲ್ಲ ಜನರಿಗೂ ಸುಖದ ದಾರಿ ಎಂದಿದ್ದಾರೆ. ಶರಣರಾಗಲಿ, ದಾಸರಾಗಲಿ ಅವರ ಮುಖ್ಯ ಉದ್ದೇಶ. ಆಧ್ಯಾತ್ಮಿಕತೆಯ ದಾರಿಯಲ್ಲಿ ಬೆಳಕನ್ನು ಚೆಲ್ಲಿ, ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವಂತೆ ಕರೆ ನೀಡಿ, ಸಮಾಜವನ್ನು ತಿದ್ದಿ ತೀಡಿ, ಬೆಳೆಸುವುದು.

□

# ಅಪವಾದ ನಿವಾರಣೆ

**ಬೇಲೂರು ರಾಮಮೂರ್ತಿ**

ಮನುಷ್ಯ ಅಂದ ಮೇಲೆ ಅವರು ಎಲ್ಲೇ ಇರಲಿ, ಹೇಗೇ ಇರಲಿ, ಒಂದಲ್ಲ ಒಂದು ಸಮಯದಲ್ಲಿ ಒಂದಲ್ಲ ಒಂದು ರೀತಿ ಅಪವಾದಗಳು ಬರುತ್ತಲೇ ಇರುತ್ತವೆ. ಆದರೆ ಮನುಷ್ಯ ಪ್ರಾಮಾಣಿಕನಾಗಿದ್ದಾಗ ಮಾತ್ರ ಅಂಥಾ ಅಪವಾದಗಳು ಹೇಗೆ ಬಂದವೋ ಹಾಗೆ ಕರಗಿ ಹೋಗುತ್ತವೆ. ಪ್ರಾಮಾಣಿಕನಲ್ಲದಿದ್ದರೆ ಅವರನ್ನು ಕಾಡಿ ಅದುವರೆಗೂ ಅವನು ಗಳಿಸಿದ ಮರ್ಯಾದೆ, ಗೌರವ, ಪ್ರತಿಷ್ಠೆ ಇವುಗಳನ್ನು ಮೂಲೆಗುಂಪು ಮಾಡಿ, ಸಮಾಜ ಅವರನ್ನು ತಮಗೆ ಬಂದ ರೀತಿ ನಿಂದಿಸುವಂತೆ ಮಾಡುತ್ತವೆ. ನಮ್ಮ ಪ್ರಾಚೀನ ಕಾಲದವರು ಒಂದು ಗಾದೆ ಮಾತು ಹೇಳೋರು, ಏನಂದ್ರೆ, ಒಂದು ಬೀದೀಲಿ ಮರ್ಯಾದೆ ಹೋದರೆ, ಇನ್ನೊಂದು ಬೀದೀಲಿ ಅವನು ಗೌರವಸ್ಥ ಅಂತ.

ಹಾಗಾದರೆ ಅಪವಾದಗಳು ನಮಗೆ ಬಾರದಿರುವಂತೆ ಮಾಡಲು ಏನಾದರೂ ಉಪಾಯ ಇದೆಯೇ? ಎಂದರೆ ಅದಕ್ಕೆ ಉತ್ತರ 'ಇಲ್ಲ' ಅಂತ. ಏಕೆಂದರೆ ನಮ್ಮಲ್ಲಿ ಇರುವ ಇನ್ನೂ ಒಂದು ಗಾದೆ ಮಾತಿನಂತೆ ಜೇನಿಗೆ ಕೈಹಾಕಿದವನು ನೆಕ್ಕದೆ ಬಿಡುತ್ತಾನೆಯೇ ಅಂತ. ಹಾಗೆಯೇ, ಈಚಲುಮರದ ಕೆಳಗೆ ಕುಳಿತು ಮಜ್ಜಿಗೆ ಕುಡಿದರೂ ಅವನು ಹೆಂಡ ಕುಡಿಯುತ್ತಿದ್ದ ಎನ್ನುವ ಅಪವಾದ ಬರುತ್ತದೆ. ಕೆಲವು ಅಪವಾದಗಳನ್ನು ಸಮಾಜದ ಮುಂದೆ ನನ್ನ ತಪ್ಪಲ್ಲ ಎಂದು ತೋರಿಸಲು ಅವಕಾಶ ಇರುತ್ತದೆ. ಕೆಲವನ್ನು ದಾಖಲೆಸಮೇತ ರುಜುವಾತು ಮಾಡಬಹುದು. ಇವೆಲ್ಲಾ ವೈಯಕ್ತಿಕ ವಿಷಯಗಳು ಆಯಿತು. ಇನ್ನು ಸಾರ್ವಜನಿಕ ಸೇವೆಗೆ ಇರುವ ವ್ಯಕ್ತಿಗಳಲ್ಲಿ ಇಂಥ ಅಪವಾದಗಳು ಬರುವುದು ಸರ್ವೇಸಾಮಾನ್ಯ ಒಬ್ಬ ಒಂದು ಅಪವಾದ ಮಾಡಿದರೆ ಮತ್ತೊಬ್ಬ ಇನ್ನೊಂದು ಮಾಡುತ್ತಾನೆ.

ಇವುಗಳಿಗೆ ದಾಖಲೆ ಬೇಕಿಲ್ಲ, ಅವುಗಳನ್ನು ಯಾರೂ ಎಲ್ಲೂ ಸಮರ್ಥಿಸಬೇಕಾಗಿಲ್ಲ. ಆದರೆ, ಸಾರ್ವಜನಿಕ ರಂಗದಲ್ಲಿದ್ದೂ, ಉನ್ನತ ಹುದ್ದೆಯಲ್ಲಿದ್ದೂ ಅಪವಾದಗಳು ಬರದೇ ಇರುವಂತೆ ನೋಡಿಕೊಳ್ಳುವುದು ಸಾಧ್ಯವೇ ಅಂದರೆ ಖಂಡಿತಾ ಸಾಧ್ಯ. ಅದಕ್ಕೆ ಅಬ್ದುಲ್ ಕಲಾಂ ಆಗಬೇಕು, ಡಾ. ರಾಧಾಕೃಷ್ಣನ್ ಆಗಬೇಕು, ಅಂಥ ಮಹಾತ್ಮರೆಲ್ಲ ಯಾವುದನ್ನು ನಂಬಿದ್ದರೆಂದರೆ ಈ ಬದುಕಿನಲ್ಲಿ ಯಾವುದು ನಮಗೆ ಲಭ್ಯವಿದೆಯೋ ಅದನ್ನು ಯಾರೂ ತಪ್ಪಿಸಲಾರರು, ಯಾವುದು ನಮಗೆ ಲಭ್ಯವಿಲ್ಲವೋ ಅದನ್ನು ಯಾರೂ ನಮಗೆ ಕೊಡಿಸಲಾರರು. ಇದು ಒಂದು ರೀತಿಯ ಅಧ್ಯಾತ್ಮಿಕ ಸ್ಪರ್ಶ. ನನ್ನದು ನನಗೆ, ನಿನ್ನದು

ನಿನಗೆ, ಸಮಾಜದ್ದು ಸಮಾಜಕ್ಕೆ ಎನ್ನುವ ಮಂತ್ರ.

ನಮ್ಮಲ್ಲಿ ಇನ್ನೂ ಒಂದು ಮಾತಿದೆ. ಏನೆಂದರೆ ಮರ್ಯಾದೆಗಿಂತ ಯಾವುದೂ ದೊಡ್ಡದಲ್ಲ. ಮರ್ಯಾದೆ ಹೋಗುವಂಥ ಪ್ರಸಂಗ ಬಂದರೆ ಜನರು ತಮ್ಮ ಹಣವನ್ನು ಬಿಟ್ಟುಕೊಡಲು, ತಮ್ಮ ಆಸ್ತಿಯನ್ನು ಬಿಟ್ಟುಕೊಡಲು, ತಮ್ಮ ಹುದ್ದೆಯನ್ನು ಬಿಟ್ಟುಕೊಡಲು ಸಿದ್ಧರಿದ್ದ ಒಂದು ಕಾಲವಿತ್ತು. ಮರ್ಯಾದೆಗೆ ಅಂಜಿ ನಡೆಯುತ್ತಿದ್ದರು. ಆದರೆ ಕಾಲ ಎಲ್ಲವನ್ನೂ ನುಂಗಿಹಾಕುತ್ತದೆ ಎನ್ನುವ ಹಾಗೆ ಜನ ಮರ್ಯಾದೆ ಕಳೆದುಕೊಂಡರೆ ಅದೊಂದು ಹೆಗ್ಗಳಿಕೆ, ಅದು ನಮಗೆ ಪ್ರಚಾರವನ್ನು ತಂದುಕೊಡುತ್ತದೆ ಎಂದು ನಂಬಿರುವ ಕಾಲ ಇದು. ಅಣ್ಣತಮ್ಮಂದಿರಲ್ಲಿ, ತಂದೆಯ ಆಸ್ತಿಗೆ ಜಗಳ ಬರುವಂಥ ಸಂದರ್ಭದಲ್ಲಿ ದೊಡ್ಡವರು ತಮ್ಮಂದಿರಿಗೆ 'ನೋಡ್ರಪ್ಪಾ, ನಿಮಗೆ ಯಾವುದು ಸರಿಯೋ ಅದನ್ನು ಮಾಡಿ; ನನಗೆ ಏನು ಕೊಡಬೇಕು ಎನ್ನುವುದನ್ನೂ ನೀವೇ ತೀರ್ಮಾನ ಮಾಡಿ. ಆದರೆ ನಮ್ಮಲ್ಲಿ ಜಗಳ ಆಗುವುದು ಬೇಡ, ನಾವೆಲ್ಲಾ ಒಟ್ಟಿಗೇ ವಿಶ್ವಾಸದಿಂದ ಇರೋಣ. ಆಸ್ತಿ ಇವತ್ತು ಇರುತ್ತೆ ನಾಳೆ ಹೋಗುತ್ತೆ. ಶಾಶ್ವತವಾಗಿ ಇರಬೇಕಾದುದು ಪರಸ್ಪರ ವಿಶ್ವಾಸ' ಎಂದು ಹೇಳುತ್ತಿದ್ದರು. ಆದರೆ ಇಂದು ಏನಾಗಿದೆ? ಆಸ್ತಿಯೇ ಮುಖ್ಯ, ಸಂಬಂಧವಲ್ಲ ಎಂದು ಅಣ್ಣತಮ್ಮಂದಿರು ಪರಸ್ಪರ ಹೊಡೆದಾಡಿಕೊಂಡು ಒಬ್ಬರು ಇನ್ನೊಬ್ಬರನ್ನು ಮುಗಿಸುವ ಹಂತಕ್ಕೆ ಬಂದಿದ್ದಾರೆ. ಹಾಗಾದರೆ ವಿವಾದ ಬಂದಾಗ ಏನು ಮಾಡಬೇಕು ಎನ್ನುವುದು ಒಂದು ಪ್ರಶ್ನೆ. ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆ ಇರಲಿ ಎನ್ನುವಂತೆ, ನದಿ ದಾಟುವ ಸಂದರ್ಭ ಬಂದಾಗ ಮಾತ್ರ ಪಂಚೆಯನ್ನು ತುಸು ಮೇಲೆತ್ತಿಕೊಳ್ಳೋಣ ಎನ್ನುವಂತೆ ಜನ ತಟಸ್ಥಭಾವದಲ್ಲಿರುತ್ತಾರೆ. ಒಬ್ಬ ವ್ಯಕ್ತಿ ದೊಡ್ಡ ಹುದ್ದೆಗೆ ಹೋಗಿದ್ದಾನೆ ಎಂದರೆ ಅವನಿಗೆ ಜವಾಬ್ದಾರಿ ಜಾಸ್ತಿ. ತನ್ನ ಜೊತೆ ಕೆಲಸ ಮಾಡುವ ಎಲ್ಲರನ್ನೂ ಸಂತಸಪಡಿಸೋಕೆ ಆಗಲ್ಲ. ಹಾಗೆಯೇ ಎಲ್ಲರ ವೈರವನ್ನೂ ಕಟ್ಟಿಕೊಳ್ಳಲು ಆಗಲ್ಲ? ಕೆಲವರ ಸಿಟ್ಟನ್ನು ಎದುರಿಸಲೇಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಎಲ್ಲರಿಗೂ ಸಹಾಯಕ್ಕೆ ಬರುವುದು ಎಂದರೆ ಅದು ಅವರ ಆತ್ಮಸಾಕ್ಷಿ. ನಾನು ಈ ಸ್ಥಾನದಲ್ಲಿ ಕೂತು, ಈ ಸ್ಥಾನಕ್ಕೆ ಒಂದು ಚೂರೂ ಅಗೌರವ ಬಾರದ ಹಾಗೆ ನಡೆದುಕೊಂಡಿದ್ದೇನೆ ಎಂದು ಅವನ ಆತ್ಮಸಾಕ್ಷಿಗೆ ಅರಿವಾದರೆ ಸಾಕು. ವಿವಾದಗಳು ಅವನ ಮೇಲೆ ಬಂದರೆ ಅವನ ಆತ್ಮಸಾಕ್ಷಿಯೇ ಅವನಿಗೆ ಸಹಾಯ ಮಾಡುತ್ತದೆ. ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯೇ ಆಗಲಿ, ಸಾಧಾರಣ ವ್ಯಕ್ತಿಯೇ ಆಗಲಿ, ರಾಜಕೀಯ ವ್ಯಕ್ತಿಯೇ ಆಗಲಿ ಸದಾ ವಿಚಾರಮಂಥನ ನಡೆಸಬೇಕು. ಕೆಲವು ಹುದ್ದೆಗಳಲ್ಲಿರುವವರಿಗೆ ಕೆಲವು ಅನಿವಾರ್ಯತೆಗಳು ಇರುತ್ತವೆ. ಅವರಿಗೆ ತಿಳಿದಿದ್ದರೂ ಅವರು ಅಪ್ರಾಮಾಣಿಕರಾಗಿ ನಡೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರ ಹುದ್ದೆಗೇ ಸಂಚಕಾರ ಬರುತ್ತದೆ. ಆದರೆ, ಯಾವುದೇ ಸಂದರ್ಭದಲ್ಲಿ ಅವರ ವೈಯಕ್ತಿಕ ಗೌರವಕ್ಕೆ ಧಕ್ಕೆ ಬಂತು ಎನ್ನುವಾಗ, ಎಲ್ಲವನ್ನೂ ಬಿಟ್ಟುಕೊಟ್ಟು ಶುದ್ಧಹಸ್ತರಾಗುವುದು

ಮುಖ್ಯ. ಏಕೆಂದರೆ, ಸಾಮಾನ್ಯ ನಾಗರಿಕರೇ ಆಗಲಿ, ಸಾರ್ವಜನಿಕ ಹುದ್ದೆಯಲ್ಲಿರುವವರೇ ಆಗಲಿ, ರಾಜಕಾರಣದಲ್ಲಿ ಇರುವವರೇ ಆಗಲಿ ಮರ್ಯಾದೆ ಹೋಯಿತು ಎಂದರೆ ಅದು ಅವರ ವ್ಯಕ್ತಿತ್ವಕ್ಕೇ ಹೊರತು ಹುದ್ದೆಗಲ್ಲ, ಇಂಥವನು ಇಂಥಾ ಕೆಲಸ ಮಾಡಿದ ಅಂತ ಜನ ದೂಷಿಸುತ್ತಾರೆಯೇ ಹೊರತು, ಅವರ ಹುದ್ದೆಯನ್ನು ಉದಾಹರಿಸಿ ಅಲ್ಲ. ಯಾವುದೇ ವ್ಯಕ್ತಿ ಯಾವುದೇ ಹುದ್ದೆಯಲ್ಲಿ; ಯಾವುದೇ ಸ್ಥಾನದಲ್ಲಿ ಕುಳಿತರೂ ಆ ಸ್ಥಾನದ ಗೌರವ ಹೆಚ್ಚುತ್ತಲೇ ಇರಬೇಕು. ಇತರರೂ ಸಹ ಅಂಥ ಸ್ಥಾನದಲ್ಲಿ ಕುಳಿತುಕೊಳ್ಳಲು ಹಾತೊರೆಯುವಂತಿರಬೇಕು.

ಇವತ್ತಿಗೂ ಜನ ಅಂಥ ಸ್ಥಾನದಲ್ಲಿ ಕುಳಿತಿರಬೇಕು ಅಂತ ಹಾತೊರೆಯುತ್ತಿದ್ದಾರೆ. ಏಕೆಂದರೆ ತಮ್ಮ ಗೌರವ, ಪ್ರತಿಷ್ಠೆ ಹೆಚ್ಚಿಸಿಕೊಳ್ಳಲೇ ಹೊರತು ಅನ್ಯಥಾ ಅಲ್ಲ. ನ್ಯಾಯಾಲಯಕ್ಕೆ ಹೋಗಿ ಅಲ್ಲಿ ತಮ್ಮ ಪರವಾಗಿ ತೀರ್ಪು ಬಂದು ತಾವು ಪ್ರಾಮಾಣಿಕರು ಎಂದು ತೋರಿಸಿಕೊಳ್ಳುವುದೇ ಅನೇಕರಿಗೆ ಇರುವ ಚಾಳಿ. ಆದರೆ ಅದರ ಹೊರತಾಗಿಯೂ ತಾವು ಪ್ರಾಮಾಣಿಕರು ಎಂದು ತೋರಿಸಿಕೊಳ್ಳುವ ಅನೇಕ ಅವಕಾಶಗಳು ಅವರಿಗೆ ಇರುತ್ತವೆ. ರಾಜಕಾರಣದ ಉದಾಹರಣೆ ಕೊಡಬೇಕು ಎಂದರೆ ಈ ಹಿಂದೆ ತಮ್ಮ ಮೇಲೆ ಕಿಂಚಿತ್ ಅಪವಾದ ಬಂದಾಗ, ಯಾರಿಂದಲೂ ಹೇಳಿಸಿಕೊಳ್ಳದೆ, ಯಾರ ಬಲವಂತಕ್ಕೂ ಮಣಿಯದೆ, ಕೇವಲ ತಮ್ಮ ಆತ್ಮಸಾಕ್ಷಿಯಂತೆ ತಮ್ಮ ಹುದ್ದೆಯನ್ನು ತ್ಯಜಿಸಿದ ಅನೇಕ ಜನರಿದ್ದಾರೆ. ಅವರು ಮುಂದಿನ ಪೀಳಿಗೆಗೆ ಮಾದರಿಯಾಗಿ ಇದ್ದರೂ ಅಂಥವರನ್ನು ಮಾದರಿಯಾಗಿ ತೆಗೆದುಕೊಳ್ಳಲು ಇಂದಿನ ಪೀಳಿಗೆ ತಯಾರಿಲ್ಲ.

ಹಣ, ಅಂತಸ್ತು, ಅಧಿಕಾರ, ಹೆಣ್ಣು ಇವುಗಳ ಕುರಿತು ಯಾರಿಗೆ ಆಸೆ ಇರುವುದಿಲ್ಲ ಹೇಳಿ! ಆದರೆ ಆಸೆ ಪಡುವುದಕ್ಕೆ ಒಂದು ವಯಸ್ಸು ಇರುತ್ತದಲ್ಲವೆ? ಎಪ್ಪತ್ತು ಎಂಬತ್ತು ವಯಸ್ಸಾಗಿರುವ ವ್ಯಕ್ತಿಯೂ ಸಹ ಹಣಕ್ಕೆ, ಹೆಣ್ಣಿಗೆ, ಅಧಿಕಾರಕ್ಕೆ ಅಂತಸ್ತಿಗಾಗಿ ಮಾಡಬಾರದ್ದು ಮಾಡುತ್ತಿದ್ದಾನೆ ಎಂದರೆ ಅದಕ್ಕೇನಾದರೂ ಅರ್ಥ ಇರುತ್ತದೆಯೆ? ಅಂಥವರಿಗೆ ಬೇಕಾಗಿರುವುದು ಎರಡು ಹೊತ್ತಿನ ಊಟ ಕಣ್ಣು ತುಂಬಾ ನಿದ್ದೆ, ನೆಮ್ಮದಿ ಅಲ್ಲವೆ? ಇಳಿವಯಸ್ಸಿನಲ್ಲಿಯೂ ನೂರಾರು ಕೆಲಸಗಳಿಗೆ ಕೈಹಾಕಿ, ನೂರಾರು ವಸ್ತುಗಳಿಗೆ ಆಸೆ ಪಟ್ಟು ಆರೋಗ್ಯ ಕೆಡುತ್ತಿರುವ ಸಂದರ್ಭದಲ್ಲೂ ಮಾತ್ರೆಗೆ ಶರಣಾಗಿ, ಬದುಕು ಸಾಗಿಸುವುದು ಉಚಿತವೇ? ಬದುಕು ಎಂದರೆ ಅದೊಂದು ಸುಂದರ ಹೂದೋಟದ ವಿಹಾರದಂತಿರ ಬೇಕು. ಮುಳ್ಳಿನ ಮೇಲಿನ ನಡಿಗೆಯಂತಿರಬಾರದು.

ಎಲ್ಲರೂ ಬಹಳ ಮುಖ್ಯವಾಗಿ ತಿಳಿದುಕೊಳ್ಳಬೇಕಾದುದು ಮತ್ತು ತಿಳಿದುಕೊಳ್ಳದೇ ಇರುವುದು ಎಂದರೆ ಆಸ್ತಿ ಮಾಡುವ ವಿಚಾರ. ಯಾಕೆ ಆಸ್ತಿ ಮಾಡಬೇಕು ಎನ್ನುವುದು ಮೊದಲ ಪ್ರಶ್ನೆ. ಒಬ್ಬ ಇಳಿವಯಸ್ಸಿನ ವ್ಯಕ್ತಿ ಕೌಟುಂಬಿಕ ವಿಚಾರವಾಗಿಯೋ, ಸ್ನೇಹದ ವಿಚಾರವಾಗಿಯೋ ಆಸ್ತಿ ವಿಚಾರದಲ್ಲಿ ಅಪವಾದಕ್ಕೆ ಸಿಕ್ಕಿಕೊಳ್ಳುವುದು ಉಚಿತವೇ?

ಎಲ್ಲವನ್ನೂ ಎಲ್ಲ ಕಾಲಕ್ಕೂ ಅವಲೋಕನ ಮಾಡಿಕೊಂಡು ಇರುವುದು ಕಷ್ಟ. ಕೆಲವು ವೇಳೆ ಕೆಲವರನ್ನು ನಂಬಬೇಕಾಗುತ್ತದೆ. ನಂಬಿದವರು ನಮಗೆ ಕೈಕೊಡುತ್ತಾರೆ. ಆಗ ನಾವು ತೊಂದರೆಗೆ ಸಿಕ್ಕಿಕೊಳ್ಳುತ್ತೇವೆ. ಆಗ ಯಾರೋ ನಮ್ಮ ಪರವಾಗಿ ಮಾಡಿದ ತಪ್ಪಿಗೆ ನಾವು ಸಮರ್ಥನೆ ಕೊಡುವುದರ ಬದಲು ಅಂಥಾ ಆಸ್ತಿಯನ್ನೇ ಕೈಬಿಡಬಹುದಲ್ಲವೆ? ನೆಮ್ಮದಿಗಿಂತ ಹೆಚ್ಚಿನದು ಯಾವುದು? ಆಯಿತು, ಇಳಿವಯಸ್ಸಿನಲ್ಲಿ ಅಂಥಾ ಆಸ್ತಿ ಮಾಡಿದ್ದೇ ಆದರೆ ಅದರಿಂದ ಯಾರಿಗೆ ಲಾಭ, ಆ ವ್ಯಕ್ತಿಗಂತೂ ಅಲ್ಲ, ಏಕೆಂದರೆ ವಯಸ್ಸು ಮೀರುತ್ತಿದೆ. ಇನ್ನು ಮಕ್ಕಳೇ ಇರಬಹುದು, ಮೊಮ್ಮಕ್ಕಳೇ ಇರಬಹುದು. ಅಂಥವರಿಗೆ ಆಸ್ತಿ ಮಾಡುವುದು ಸರಿಯೆ? ಹೌದು, ನಮ್ಮ ಪೀಳಿಗೆಗೆ ಆಸ್ತಿ ಮಾಡುವುದು ಸರಿ. ಆದರೆ, ಯಾರು ಕಷ್ಟಪಟ್ಟು ಸಂಪಾದನೆ ಮಾಡಿ ಹಣ ಗಳಿಸಿ ಅದರಿಂದ ಬದುಕು ಸಾಗಿಸುತ್ತಾರೋ ಅವರೇ ನಿಜವಾದ ಸುಖಿಗಳು ಎಂದು ಹೇಳುತ್ತಾರೆ.

ಮಕ್ಕಳು ಕಷ್ಟಪಡದೆ ಆಸ್ತಿ ಬಂದರೆ, ಹಣ ಬಂದರೆ, ಅವರ ನಡವಳಿಕೆ ನೇರವಾಗಿ ಇರುತ್ತದೆಯೇ? ಖಂಡಿತಾ ಇಲ್ಲ. ಇನ್ನು ಯಾವಾಗ ಏನು ಸಂಪಾದನೆ ಮಾಡಬೇಕಾದರೂ, ಆಸ್ತಿಯೇ ಆಗಲಿ, ಹಣವೇ ಆಗಲಿ, ಮೊದಲು ನಮಗೆ ಇರುವುದರ ಕುರಿತು ಚಿಂತಿಸಬೇಕು. ಇದೊಂದು ರೀತಿ ಊಟಕ್ಕೆ ಕೂತ ಹಾಗೆ. ಊಟ ಪ್ರಾರಂಭ ಮಾಡುವ ಮೊದಲು ಎಲೆಯಲ್ಲಿ ಎಲ್ಲವೂ ಸಾಕಷ್ಟು ಇರಬೇಕು ಎಂದು ಬಯಸುತ್ತೇವೆ. ಆದರೆ ಊಟ ಮಾಡುತ್ತ ಹೋದ ಹಾಗೆ ಅದು ಸಾಕು, ಇದು ಸಾಕು, ಕಡೆಗೆ ಎಲ್ಲವೂ ಸಾಕು ಎನಿಸುತ್ತದೆ. ಬದುಕಿನ ಆಸೆಯೂ ಹೀಗೇ ಇರಬೇಕು. ಮೊದಮೊದಲು ನಾವು ಆಸ್ತಿ ಮಾಡಬೇಕು ಎನ್ನುವ ಆಸೆ ಸಹಜ. ಏಕೆಂದರೆ ಬದುಕು ಸುಂದರವಾಗಿರಬೇಕು ಅಂತ. ಆದರೆ ಅದಕ್ಕೊಂದು ಮಿತಿ ಹಾಕಿಕೊಳ್ಳಬೇಕು.

ಸಾರ್ವಜನಿಕ ಸೇವೆಯಲ್ಲಿರುವ ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುವಂಥಾ ಸಂದರ್ಭ ಏನಾದರೂ ಬಂದರೆ ಅಂಥಾ ವ್ಯಕ್ತಿ ಯಾವುದರಿಂದ ತನ್ನ ವರ್ಚಸ್ಸಿಗೆ ಧಕ್ಕೆ ಬರುತ್ತಿದೆಯೋ ಅಂಥದ್ದನ್ನು ದೂರಮಾಡುವುದು ಒಳ್ಳೆಯದು. ಅದು ಎಷ್ಟೇ ಬೆಲೆ ಬಾಳುವಂಥದ್ದಾದರೂ ಸರಿ ಬಿಟ್ಟುಬಿಡಬೇಕು. ಆದರೆ ಜನ ಬಿಡುತ್ತಾರೆಯೇ. ನಾನು ಈಗ ಇಷ್ಟು ವಯಸ್ಸಿನ ಅಂಚಿನಲ್ಲಿದ್ದೀನಿ, ಯಾವ ಸಮಯದಲ್ಲಾದರೂ ನನ್ನ ಬದುಕು ಮುಗಿಯಬಹುದು, ಈ ವಯಸ್ಸಿನಲ್ಲಿ ನನ್ನ ವರ್ಚಸ್ಸು ಹೆಚ್ಚುತ್ತಾ ಹೋಗಬೇಕೇ ಹೊರತು, ಕುಂದಬಾರದು ಎನ್ನುವ ಮನೋಭಾವ ಇದ್ದು ಯಾವುದೇ ವಸ್ತುವಿನಿಂದ ವರ್ಚಸ್ಸು ಹೋಗುತ್ತೆ ಎನ್ನುವ ಸಂದರ್ಭ ಬಂದಾಗ ಇದಕ್ಕೂ ನನಗೂ ಸಂಬಂಧವಿಲ್ಲ. ನಾನು ಇದರಿಂದ ದೂರ ಇದ್ದೇನೆ. ನನಗೆ ಇದರಲ್ಲಿ ಯಾವ ಭಾಗವೂ ಬೇಡ ಎಂದು ದೂರ ಹೋಗುವುದು ಸರಿ. ಆದರೆ ಯಾರಾದರೂ ಹಾಗೆ ದೂರ ಹೋಗುತ್ತಾರಾ? ಜಟ್ಟಿ ಜಾರಿಬಿದ್ದರೂ ಅದೂ ಒಂದು ವರಸೆ ಎನ್ನುವಂತೆ. "ಅದರಲ್ಲಿ ನನ್ನದೇನೂ ತಪ್ಪಿಲ್ಲ, ಸುಮ್ಮಸುಮ್ಮನೆ ಅಪವಾದ

ಮಾಡುತ್ತಿದ್ದಾರೆ. ತೀರ್ಮಾನ ಮಾಡುವುದಕ್ಕೆ ನ್ಯಾಯಾಲಯ ಇದೆಯಲ್ಲ" ಎಂದು ಉಡಾಫೆ ಮಾತಾಡಿಕೊಂಡು ಹೋಗುವುದು ಸರಿಯಲ್ಲ. ನ್ಯಾಯಾಲಯದ ತೀರ್ಮಾನಕ್ಕಿಂತ ಸಾರ್ವಜನಿಕ ತೀರ್ಮಾನ ಬಹಳ ಮುಖ್ಯ. ನಾಲ್ಕು ಜನರ ಕಣ್ಣಿನಲ್ಲಿ ಒಳ್ಳೆಯವನು ಎನಿಸಿಕೊಳ್ಳುವುದು ಬಹಳ ಕಷ್ಟ. ಒಂದು ಬೀದಿಯಲ್ಲಿ ಅಕ್ಕಪಕ್ಕದ ಮನೆಯವರಿಗೆ ಒತ್ತುವರಿಯ ವಿಚಾರಕ್ಕೆ ಜಗಳ ಬಂತು. ಆಗ ಒಬ್ಬರು ಹೇಳಿದರು "ನೋಡಿ ಸ್ವಾಮಿ ಇದರಲ್ಲಿ ನಾನೇನೂ ತಪ್ಪು ಮಾಡಿಲ್ಲ, ಆದರೆ ನಿಮಗೆ ಹಾಗನಿಸಿದರೆ ನೀವು ತೆಗೆದುಕೊಳ್ಳುವ ತೀರ್ಮಾನಕ್ಕೆ ನಾನು ಬದ್ಧ. ನಿಮಗೆ ಎಲ್ಲಿಯವರೆಗೆ ಜಾಗ ಬೇಕೋ ತಗೊಳ್ಳಿ. ಮಿಕ್ಕಿದ್ದು ನಾನು ಇಟ್ಕೋತೀನಿ. ಹಾಗೇ ನೀವು ಕಾಂಪೌಂಡು ಹಾಕಿಕೊಳ್ಳಿ" ಅಂದರಂತೆ. ಇಂಥವರದು ಇಟ್ಟುಕೊಳ್ಳುವ ಬದಲು ಬಿಟ್ಟುಕೊಡುವ ರೀತಿ.

ಆದರೆ ಎಲ್ಲರೂ ಹಾಗೆ ಮಾಡುವುದು ಕಷ್ಟ, ಹಾಗೆ ನಿರೀಕ್ಷೆ ಮಾಡುವುದೂ ತಪ್ಪು. ಆದರೆ ಹಾಗೆ ಮಾಡಿದರೆ ಒಳ್ಳೆಯದು. ಯಾರೂ ಹುಟ್ಟುತ್ತಲೇ ವಿವೇಕಾನಂದರಂತಾಗಲಿ, ರಾಮಕೃಷ್ಣ ಪರಮಹಂಸರಂತಾಗಲಿ, ಅಬ್ದುಲ್ ಕಲಾಂರಂತಾಗಲಿ ಹುಟ್ಟಿರಲಿಲ್ಲ. ಅವರೂ ಎಲ್ಲ ಮಕ್ಕಳಂತೆಯೇ ಮಗುವಾಗಿಯೇ ಹುಟ್ಟಿದರು, ಬೆಳೆದರು. ಆದರೆ, ಅವರ ಸಂಸ್ಕಾರದಿಂದ, ನಡವಳಿಕೆಯಿಂದ ಸಾರ್ವಜನಿಕ ಜೀವನದಲ್ಲಿ ಉತ್ತುಂಗಕ್ಕೇರಿದರು. ಹಾಗೇ ನಾವೂ ಏರಬಹುದು. ಪ್ರಯತ್ನ ಮುಖ್ಯ. ಹೇಗೆ ದೇಹಕ್ಕೆ ಮಿತವಾದ ಆಹಾರ ಕೊಟ್ಟು ಅದನ್ನು ಆರೋಗ್ಯವಂತವಾಗಿ ಮಾಡುತ್ತೇವೋ ಹಾಗೆ, ಮನಸಿಗೂ ಮಿತವಾದ ವಿಚಾರಗಳನ್ನೇ ತುಂಬಿ ಅದನ್ನೂ ಆರೋಗ್ಯಕರವಾಗಿಟ್ಟುಕೊಳ್ಳಬೇಕು.

□

ಸುಗಂಧದ ಅಂಗವಿದ್ದು ಕರಂಡದಲ್ಲಿ ಬಂಧಿಸಲಿಕ್ಕಾಗಿ
ಗಂಧ ನಿಂದಿತ್ತಲ್ಲದೆ, ವಾಯುವಿನ ಕೈಯ ಗಂಧವ
ಕರಂಡದಲ್ಲಿ ಕೂಡಿ ಮುಚ್ಚಲಿಕ್ಕೆ ನಿಂದುದುಂಟೆ ಆ ಸುವಾಸನೆ?
ಈ ಗುಣ ಲಿಂಗಾಂಗಿಯ ಸಂಗದ ಇರವು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು.

**– ದಾಸೋಹದ ಸಂಗಣ್ಣ**

ಧಾರ್ಮಿಕ ಕ್ಷೇತ್ರಗಳ ದರ್ಶನಮಾಲಿಕೆ

# ಮುಡುಕುತೊರೆ ಧಾರ್ಮಿಕ ಕ್ಷೇತ್ರ ದರ್ಶನ

**ಡಾ. ಎಸ್.ಜಿ. ರಾಮದಾಸ ರೆಡ್ಡಿ**

ಮುಡುಕುತೊರೆ (ಟಿ.ಬೆಟ್ಟಹಳ್ಳಿ/ತಿರುಮಕೂಡಲು ಬೆಟ್ಟಹಳ್ಳಿ) ಕಾವೇರಿ ನದಿಯ ದಡದಲ್ಲಿರುವ ಒಂದು ಪ್ರಸಿದ್ಧ ಯಾತ್ರಾ ಸ್ಥಳವಾಗಿದೆ. ಸರ್ಕಾರಿ ಕಂದಾಯ ದಾಖಲೆಗಳ ಪ್ರಕಾರ ಈ ಗ್ರಾಮವನ್ನು ಟಿ.ಬೆಟ್ಟಹಳ್ಳಿ ಎಂದು ಕರೆಯಲಾಗುತ್ತದೆ, ಮುಡುಕುತೊರೆ ಎಂಬುದು ಪೌರಾಣಿಕ ಹೆಸರು. ಟಿ.ಬೆಟ್ಟಹಳ್ಳಿಯು ಸೋಮಗಿರಿ ಎಂಬ ಗುಡ್ಡದ ಹಿನ್ನೆಲೆ ಹೊಂದಿರುವ ಪ್ರಶಾಂತ ಹಳ್ಳಿಯಾಗಿದೆ. ಮುಡುಕುತೊರೆಯನ್ನು ಸೋಮಶೈಲ ಕ್ಷೇತ್ರ, ದಕ್ಷಿಣ ಕಾಶಿ, ಬೆಟ್ಟಹಳ್ಳಿ, ವೆಟ್ಟನಪಲ್ಲಿ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ.

ಟಿ.ಬೆಟ್ಟಹಳ್ಳಿ/ಮುಡುಕುತೊರೆ ಮೈಸೂರಿನಿಂದ 48 ಕಿ.ಮೀ. ಸೋಮನಾಥಪುರ ದಿಂದ 25 ಕಿ.ಮೀ. ಟಿ. ನರಸೀಪುರದಿಂದ 18 ಕಿ.ಮೀ. ಹಾಗೂ ತಲಕಾಡಿನಿಂದ 5 ಕಿ.ಮೀ. ದೂರದಲ್ಲಿದೆ.

ಟಿ.ನರಸೀಪುರದ ಹತ್ತಿರ ಕಾವೇರಿ, ಕಪಿಲಾ ಮತ್ತು ಗುಪ್ತವಾಹಿನಿ ಸ್ಫಟಿಕನದಿ ಸಂಗಮವಾಗಿ ಮುಂದೆ ಕಾವೇರಿ ನದಿಯು ಪಶ್ಚಿಮದಿಂದ ಉತ್ತರ ದಿಕ್ಕಿನತ್ತ ಹರಿದು, ಈ ಪ್ರದೇಶದಲ್ಲಿ ಪೂರ್ವಕ್ಕೆ ತಿರುಗಿ ಮತ್ತೆ ದಕ್ಷಿಣದ ಕಡೆ ಹರಿಯುವ ಸ್ಥಳದಲ್ಲಿ ಇತಿಹಾಸ ಪ್ರಸಿದ್ಧ ಮುಡುಕುತೊರೆ ಭ್ರಮರಾಂಬಿಕಾಸಮೇತ ಮಲ್ಲಿಕಾರ್ಜುನಸ್ವಾಮಿ ದೇವಾಲಯ ಇದೆ. ದೇವಾಲಯ ಇರುವ ಸೋಮಗಿರಿ ಬೆಟ್ಟದ ಮೇಲೆ ನಿಂತು ನೋಡಿದರೆ ಬಹುದೂರದ ಕಾವೇರಿ ನದಿಯ ಸುಂದರ ವಿಹಂಗಮ ದೃಶ್ಯವನ್ನು ನೋಡಬಹುದು.

**ಗ್ರಾಮನಾಮದ ನಿಷ್ಪತ್ತಿ**

**ಮುಡುಕುತೊರೆ :** ಕಾವೇರಿ ನದಿಯು ತಿರುವು ಪಡೆದು ಮುಂದಕ್ಕೆ ಹರಿಯುವುದರಿಂದ ಈ ಗ್ರಾಮಕ್ಕೆ ಮುಡುಕುತೊರೆ ಎಂಬ ಹೆಸರು ಬಂದಿದೆ. ಮುಡುಕು ಎಂದರೆ 'ತಿರುವು' ಮತ್ತು ತೊರೆ ಎಂದರೆ 'ನದಿ'.

**1) ಮುಡುಕುತೊರೆ (ಗ್ರಾಮದ 80ನೇ ಶಾಸನ, 1513 ಅಕ್ಟೋಬರ್ 29)**: ಮುದುಕು–ಮುಡುಕು–ಎಂದರೆ ವಕ್ರ, ವಕ್ರವಾಗುವುದು, ಬಗ್ಗುವಂತೆ ಮಾಡುವುದು. ತೊರೆ–ವೇಗ, ಗವಿ, ಬಿಲ, ಪೊದರು, ಹೊಳೆ, ಹಳ್ಳ, ಸಣ್ಣ ಪ್ರವಾಹ ಎಂದರ್ಥ. ಮುಡುಕು+ತೊರೆ, ಮುಡುಕು–ಎಂದರೆ ದಿಕ್ಕಿನಲ್ಲಿ ಬದಲಾವಣೆ ಸಂಭವಿಸುವ ಸ್ಥಳ, ಒಂದು ವಕ್ರರೇಖೆ, ಒಂದು ತಿರುವು (ತಿರುಗುವಿಕೆ) ಎಂದರ್ಥ.

**2) ಮುಡುಕುದೊರೆ :** ಮುಡುಕು+ತೊರೆ = ಮುಡುಕುದೊರೆ. ಮುಡುಕುದೊರೆ ಎಂದು ಗ್ರಾಮದ 80ನೇ ಶಾಸನವು 1513 ಅಕ್ಟೋಬರ್ 29ರ ಕಾಲಾವಧಿಯದಾಗಿದೆ. ಆದಿದ್ರಾವಿಡ ಭಾಷೆಯಲ್ಲಿ (ತಮಿಳು) ದ ಕಾರವೂ ತ ಕಾರವಾಗಿ ಸ್ವಚ್ಚಂದ ಪರಿವರ್ತನೆ ಹೊಂದುವು ದರಿಂದ ನಾವು ಮುಡುಕುದೊರೆಯನ್ನು ಮುಡುಕುತೊರೆ ಎಂದು ಭಾವಿಸ ಬಹುದು.

**3) ಬೆಟ್ಟಹಳ್ಳಿ** (ಗ್ರಾಮದ 79ನೇ ಶಾಸನದಲ್ಲಿ–19ನೇ ಶತಮಾನ) ಬೆಟ್ಟ–ದೊಡ್ಡ ಗಿರಿ, ಪರ್ವತ, ಹಳ್ಳಿ– ಗ್ರಾಮ, ಗುಡ್ಡದ ಮೇಲಿರುವ ಗ್ರಾಮ ಎಂದು ಅರ್ಥೈಸಬಹುದು.

4) ವೆಟ್ಟನ್‌ಪಲ್ಲಿ (ಗ್ರಾಮದ 84, 86, 87 ನೇ ಶಾಸನಗಳಲ್ಲಿ ವೆಟ್ಟನ್‌ಪಲ್ಲಿ ಎಂದು ಗ್ರಾಮನಾಮದ ಬಗ್ಗೆ ಉಲ್ಲೇಖ ಇದೆ.)

ವೆಟ್ಟ+ನ+ಪಲ್ಲಿ

ವೆಟ್ಟ–ಬೆಟ್ಟ, ಪಲ್ಲಿ–ಹಳ್ಳಿ

ವೆಟ್ಟ–ಬೆಟ್ಟ–ಪಲ್ಲಿ–ಹಳ್ಳಿ=ವೆಟ್ಟಪಲ್ಲಿ–ಬೆಟ್ಟಹಳ್ಳಿ ಆಗಿದೆ.

ವೆಟ್ಟ–ವಕಾರಾದಿಯಾದ ಪೂರ್ವದ ಹಳಗನ್ನಡ ರೂಪವು ಬೆಟ್ಟ– ಬಕಾರಾದಿ ಯಾದ ಹೊಸಗನ್ನಡ ರೂಪ ಆಗುತ್ತದೆ.

**ಮಲ್ಲಿಕಾರ್ಜುನ ದೇವಾಲಯ :** ಹಿಂದೂ ಪುರಾಣದಲ್ಲಿ, ಮಹಾಭಾರತದ ಕಾಲದಲ್ಲಿ, ಪಾಂಡವರಲ್ಲಿ ಒಬ್ಬನಾದ ಅರ್ಜುನನು ಸೋಮಗಿರಿ ಬೆಟ್ಟದಲ್ಲಿ ತಂಗಿದ್ದನು. ಅಲ್ಲಿದ್ದ ಉದ್ಭವಲಿಂಗಕ್ಕೆ "ಮಲ್ಲಿಕಾಪುಷ್ಪ"ದಿಂದ (ಮಲ್ಲಿಗೆ ಹೂವು) ಪೂಜೆ ಮಾಡಿದನು, ಇದರಿಂದಾಗಿ ಇಲ್ಲಿಯ ಶಿವನಿಗೆ 'ಮಲ್ಲಿಕಾರ್ಜುನ' ಎಂಬ ಹೆಸರು ಬಂದಿತು ಎಂಬ ಪ್ರತೀತಿ ಇದೆ. ಈ ದೇವಸ್ಥಾನದ ಗರ್ಭಗುಡಿಯಲ್ಲಿ ಭ್ರಮರಾಂಬಿಕಾ ದೇವಿಯ ವಿಗ್ರಹ ಮತ್ತು ಉದ್ಭವಲಿಂಗವಿದೆ. ಹಾಗೂ ಈ ಶಿವಲಿಂಗದ ಮೇಲೆ ಕಾಮಧೇನುವಿನ ಪಾದದ ಗುರುತು ಇದೆ. ತಲಕಾಡಿನ ಪಂಚಲಿಂಗ ದರ್ಶನದ ಐದು ಲಿಂಗಗಳಲ್ಲಿ ಇದೂ ಕೂಡ ಒಂದಾಗಿದೆ. ಕಾಮಧೇನುವಿನಿಂದ ಪೂಜೆಗೊಳ್ಳುತ್ತಿದ್ದ ಶಿವಲಿಂಗವೇ ಶ್ರೀಮಲ್ಲಿಕಾರ್ಜುನಸ್ವಾಮಿ ಎಂಬ ಪ್ರತೀತಿ ಇದೆ.

ಈ ದೇವಾಲಯ ಗಂಗ ಅರಸರ ಕಾಲದಲ್ಲಿ ನಿರ್ಮಾಣಗೊಂಡಿದ್ದು ನಂತರ ವಿಜಯನಗರ ಅರಸರ ಕಾಲದ ವಾಸ್ತುಶೈಲಿಯಲ್ಲಿ ಜೀರ್ಣೋದ್ಧಾರಗೊಂಡಿದೆ. ವಿಜಯನಗರದ ಅರಸರ ನಂತರ ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದೇವಸ್ಥಾನದ ಪಶ್ಚಿಮ ದ್ವಾರವನ್ನು ನಿರ್ಮಿಸಲಾಗಿದೆ. ಹಾಗೂ ಗ್ರಾಮದ ಟಿ.ಬೆಟ್ಟಹಳ್ಳಿ ಮಾರಿಕಾಂಬಾ ದೇವಸ್ಥಾನವು ಆರುನೂರು ವರ್ಷಗಳಷ್ಟು ಹಳೆಯದಾದ ದೇವಾಲಯ. ಈ ದೇವಾಲಯವನ್ನು ಸಹ ಪುನರ್‌ನಿರ್ಮಿಸಲಾಗಿದೆ.

**ಪ್ರತೀತಿ :** ಪಕ್ಕದ ಗ್ರಾಮದ ಕಾಮಧೇನು ಸ್ವಇಚ್ಛೆಯಿಂದ ಉದ್ಭವಲಿಂಗಕ್ಕೆ

ದಿನಾಲೂ ಹಾಲು ಕೊಡುತ್ತಿತ್ತು. ಮನೆಯಲ್ಲಿ ಬಂದು ರಕ್ತವನ್ನು ಕರೆಯುತ್ತಿತ್ತು. ಹಸುವಿನ ಒಡೆಯ ಅನುಮಾನಗೊಂಡು ಒಂದು ದಿನ ಹಸುವನ್ನು ಹಿಂಬಾಲಿಸಿ ಬಂದನು. ಹಸು ಒಂದು ಸ್ಥಳದಲ್ಲಿ ನಿಂತು ಹಾಲನ್ನು ಉದ್ಭವಲಿಂಗಕ್ಕೆ ಕೊಡಲು ಆರಂಭಿಸಿತು. ಕೋಪಗೊಂಡ ಒಡೆಯ ಕೈಯಲ್ಲಿ ಇದ್ದ ಕೊಡಲಿಯಿಂದ ಹಸುವಿಗೆ ಹೊಡೆದನು. ಹಸು ತನ್ನ ಕಾಲನ್ನು ಲಿಂಗದ ಮೇಲೆ ಇಟ್ಟಿತು. ಅದೇ ಕಾಮಧೇನುವಿನ ಕಾಲಿನ ಹೆಜ್ಜೆಯ ಗುರುತು ಇಂದಿಗೂ ಸಹ ಲಿಂಗದ ಮೇಲೆ ಇದೆ ಎಂದು ಅರ್ಚಕ ಚಂದ್ರಶೇಖರ್ ದೀಕ್ಷಿತ್‌ರವರು ಮಾಹಿತಿ ನೀಡಿದರು.

ಸುಮಾರು 300 ಅಡಿ ಎತ್ತರದ ಸೋಮಗಿರಿಬೆಟ್ಟದ ಮೇಲೆ ನೆಲೆಸಿರುವ ಮಲ್ಲಿಕಾರ್ಜುನಸ್ವಾಮಿಯ ದರ್ಶನಕ್ಕೆ 101 ಹರಕೆ ಮೆಟ್ಟಿಲುಗಳನ್ನು ಹತ್ತಿ ನಡೆಯಬೇಕು. ಒಟ್ಟು 340 ಕ್ಕೂ ಹೆಚ್ಚು ಮೆಟ್ಟಿಲುಗಳು ಇಲ್ಲಿ ಇವೆ. ದೇವಾಲಯ ಪಶ್ಚಿಮಾಭಿಮುಖ ವಾಗಿದೆ. ಎರಡು ಗರ್ಭಗೃಹಗಳು, ಎರಡು ಗೋಪುರಗಳು, ಒಂದು ಮಹಾದ್ವಾರ, 2 ಸುಕನಾಸಿ, ನವರಂಗ ಮತ್ತು ದ್ವಾರಮಂಟಪಗಳನ್ನು ಹೊಂದಿದೆ. ನವರಂಗದಲ್ಲಿ ವರ್ತುಲಾಕೃತಿಯ ಸ್ತಂಭಗಳನ್ನು ಕಾಣಬಹುದಾಗಿದೆ. ಸುತ್ತಲೂ ವಿಶಾಲವಾಗಿರುವ ಪ್ರದಕ್ಷಿಣಾಪಥ ಇದೆ. ಪ್ರದಕ್ಷಿಣಾ ಪಥದ ಮುಂದೆ ದೊಡ್ಡ ದೀಪಸ್ತಂಭ ಇದೆ.

**ಮಲ್ಲಿಕಾರ್ಜುನ ದೇವಾಲಯ :** ಗರ್ಭಗೃಹದ ಒಳ ಆಯ – 11 ಅಡಿ ಉದ್ದ, 11 ಅಡಿ ಅಗಲ ಇದೆ. ಲಿಂಗದ ಎತ್ತರ–ಸುಮಾರು 6 ಇಂಚು ಇದೆ, ಲಿಂಗದ ಮೇಲೆ ಗೋವಿನ ಪಾದದ ಹೆಜ್ಜೆ ಗುರುತು ಇದೆ.

ಪಾಣಿಪೀಠ – ಪೂರ್ವ–ಪಶ್ಚಿಮ–1 ಅಡಿ ಅಗಲ, ಉತ್ತರ–ದಕ್ಷಿಣ ಒಂದೂವರೆ ಅಡಿ ಉದ್ದ, ದಪ್ಪ ಅರ್ಧ ಇಂಚು ಇದೆ.

ಸುಕನಾಸಿ – ಪೂರ್ವ ಪಶ್ಚಿಮ 7 ಅಡಿ, ಉತ್ತರ ದಕ್ಷಿಣ–5 ಅಡಿ ಇದೆ.

ನವರಂಗ – ಸುಮಾರು 21 ಅಡಿ ಉದ್ದ, 21 ಅಡಿ ಅಗಲ ಇದೆ. 6 ಕಂಬಗಳಿವೆ.

ಉಗ್ರಾಣ, ಮಹಾಮಂಟಪ ಮತ್ತು ರಂಗಮಂಟಪ – ಉತ್ತರ ದಕ್ಷಿಣ 11 ಅಡಿ, ಪೂರ್ವ ಪಶ್ಚಿಮ 80 ಅಡಿ ವಿಸ್ತೀರ್ಣ ಇದೆ. ಮಲ್ಲಿಕಾರ್ಜುನ ದೇವಾಲಯ ಗೋಪುರ ಮತ್ತು ಕಳಸ ಇದೆ. ಗೋಪುರದ ಮೇಲೆ ದಕ್ಷಿಣಾಮೂರ್ತಿ, ಬ್ರಹ್ಮ, ಸ್ಕಂದ, ಗಣಪತಿ, ಭೈರವ, ವೃಷಭ, ಲಿಂಗ ಹಾಗೂ ಶಿವಗಣಗಳ ವಿಗ್ರಹಗಳು ಇಲ್ಲಿವೆ.

ಭ್ರಮರಾಂಬ ದೇವಿಯ ಗರ್ಭಗೃಹ – ಒಳ ಆಯ–9 ಅಡಿ ಉದ್ದ, 9 ಅಡಿ ಅಗಲ ಇದೆ. ದೇವಿಯ ಮೂರ್ತಿಶಿಲ್ಪವು 3 ಅಡಿ ಎತ್ತರ, ಒಂದುವರೆ ಅಡಿ ಅಗಲ ಇದೆ. ಕಮಲ ಪೀಠ 1 ಅಡಿ, ಸಿಂಹ ಪೀಠ ಅರ್ಧ ಅಡಿ ಇದೆ. ದೇವಿಯು ಚತುರ್ಭುಜಧಾರಿಯಾಗಿದ್ದು, ಹಿಂದಿನ ಎರಡು ಕೈಗಳಲ್ಲಿ ಕಮಲ ಹಸ್ತ, ಮುಂದಿನ ಕೈಗಳು ಅಭಯ ಹಸ್ತ ಹಾಗೂ ವರದಾ ಹಸ್ತದಾರಿಯಾಗಿ ನಿಂತಿದ್ದಾಳೆ.

ಸುಕನಾಸಿ– ಪೂರ್ವ ಪಶ್ಚಿಮ 6 ಅಡಿ, ಉತ್ತರ ದಕ್ಷಿಣ–5 ಅಡಿ ಇದೆ.

ಮಹಾಮಂಟಪ ಮತ್ತು ರಂಗ ಮಂಟಪ – ಪೂರ್ವ ಪಶ್ಚಿಮ 13 ಅಡಿ, ಉತ್ತರ ದಕ್ಷಿಣ–13 ಅಡಿ ಇದೆ. 4 ಕಂಬಗಳಿವೆ.

ಭ್ರಮಾರಂಭದೇವಿಯ ಗೋಪುರ– ಎತ್ತರವಾದ ಗೋಪುರದ ಮೇಲೆ ಒಂದು ಕಳಸ ಇದೆ. ಹಂಸ, ವೃಷಭ, ಸಿಂಹ, ದುರ್ಗೆ, ಕಾಳಿ, ಭೈರವಿ, ಇತ್ಯಾದಿ ದೇವಿಗಣಗಳ ಶಿಲ್ಪಪಟ್ಟಿಕೆಗಳನ್ನು ಗೋಪುರದ ಮೇಲೆ ಕಾಣಬಹುದಾಗಿದೆ.

ಮಹಾದ್ವಾರದ ಮೇಲೆ ರಾಜಗೋಪುರ ಇದ್ದು ಎರಡು ಕಡೆ ಕೋಡುಗಳು, ಮಧ್ಯದಲ್ಲಿ 3 ಕಳಸಗಳು ಇವೆ.

ವರ್ಷದ 365 ದಿನಗಳು ಇಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತವೆ. ಪ್ರತಿ ವರ್ಷ ಮಾಘಮಾಸದ ಸಮಯದಲ್ಲಿ ಸುಮಾರು 17 ದಿನಗಳ ಕಾಲ ನಡೆಯುವ ಮುಡುಕುತೊರೆ ಜಾತ್ರೆ ಅತ್ಯಂತ ಪ್ರಸಿದ್ಧವಾಗಿದ್ದು, ಇದರಲ್ಲಿ ಪಾಲ್ಗೊಳ್ಳಲು ರಾಜ್ಯ, ಹೊರ ರಾಜ್ಯ ಮತ್ತು ವಿದೇಶಗಳಿಂದಲೂ ಸಹಸ್ರ ಸಹಸ್ರ ಭಕ್ತಾದಿಗಳು ಇಲ್ಲಿಗೆ ಬಂದು ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುತ್ತಾರೆ.

ಇನ್ನೊಂದು ವಿಶೇಷತೆಯೆಂದರೆ ಮಲ್ಲಿಕಾರ್ಜುನ ರಥೋತ್ಸವಕ್ಕೆ ಒಂದು ವಾರದ ಮುಂಚೆ ದನಗಳ ಪರಿಷೆ ನಡೆಯುತ್ತದೆ. ಈ ಸಮಯದಲ್ಲಿ ರೈತರು ಬಂದು ತಮಗೆ ಬೇಕಾದ ರಾಸುಗಳನ್ನು ಕೊಂಡುಕೊಳ್ಳುತ್ತಾರೆ. ಕೊಂಡ ರಾಸುಗಳಿಗೆ ಅಲಂಕಾರ ಮಾಡಿ ಅವುಗಳನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುವ ಸಂಪ್ರದಾಯವೂ ಇದೆ.

ಜಾತ್ರೆಯಲ್ಲಿ ಅಂಕುರಾರ್ಪಣೆ, ಧ್ವಜಾರೋಹಣ, ಚಂದ್ರಮಂಡಲಾರೋಹಣ, ಅನಂತಪೀಠಾರೋಹಣ, ಪುಷ್ಪಮಂಟಪಾರೋಹಣ, ವೃಷಭಾರೋಹಣ, ಗಿರಿಜಾಕಲ್ಯಾಣ, ಗಜಾರೋಹಣ, ಶ್ರೀಮತಾಬ್ರಹ್ಮರಥೋತ್ಸವ, ಚಿತ್ರರಥೋತ್ಸವ, ಶಯನೋತ್ಸವ, ಅವಭೃತ ತೀರ್ಥಸ್ನಾನ, ಪುಷ್ಪಪಲ್ಲಕ್ಕಿ ಉತ್ಸವ, ತೆಪ್ಪೋತ್ಸವ, ಮರಿತೆಪ್ಪೋತ್ಸವ, ಕೈಲಾಸ ವಾಹನೋತ್ಸವ, ಮಂಟಪೋತ್ಸವ, ಗಿರಿಪ್ರದಕ್ಷಿಣೆ, ಪರ್ವತಪರಿಷೆ, ಬಸವಮಾಲೆ, ಮಹಾಭೀಷೇಕ ಮತ್ತು ಶೆಟ್ಟರ ಸೇವೆಗಳು ಪ್ರಮುಖವಾಗಿ ಇಲ್ಲಿ ನಡೆಯುತ್ತವೆ. ಇಂದು ಈ ದೇವಾಲಯ ಜೀರ್ಣೋದ್ಧಾರಗೊಳ್ಳುತ್ತಿದೆ.

**ಶಾಸನಗಳು :** ಗ್ರಾಮದಲ್ಲಿ 13 ಶಾಸನಗಳು ಇವೆ. ಶಾಸನ 75 ರಿಂದ 87 ರವರೆಗಿನ ಶಾಸನಗಳು ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ 5ರಲ್ಲಿ ಇವೆ.

1) ಶಾಸನ 75ರಲ್ಲಿ ಮುಡುಕುತೊರೆ ಮಲ್ಲಿಕಾರ್ಜುನ ದೇವಾಲಯದ ಮುಂದಿರುವ ಹಿತ್ತಾಳೆ ಧ್ವಜಸ್ತಂಭದ ಮೇಲೆ 17 ನೇ ಶತಮಾನದ ಶಾಸನ ಇದ್ದು, ಕುದೇರು ಮಾಳಿಗೆಮನೆ ಬಶೆಟ್ಟಿ ಹಿತ್ತಾಳೆ ಧ್ವಜಸ್ತಂಭಕ್ಕೆ ಕೊಡುಗೆ ನೀಡಿದ ಬಗ್ಗೆ ಉಲ್ಲೇಖವಿದೆ.

2) 76ನೇ ಶಾಸನವು 13–14 ನೇ ಶತಮಾನದ್ದಾಗಿದ್ದು, ಇದು ಹೊಯ್ಸಳರ ಕಾಲಕ್ಕೆ ಸೇರಿದೆ. ಮಲ್ಲಿಕಾರ್ಜುನ ದೇವಾಲಯದ ಬಾಗಿಲ ಸಮೀಪದ ಕಲ್ಲಿನ ಮೇಲೆ ಈ ಶಾಸನ ಇದೆ.

3) 77ನೇ ಶಾಸನವು ಮಲ್ಲಿಕಾರ್ಜುನ ದೇವಾಲಯದ ದೇವೀ ಗುಡಿಯ ಉತ್ತರಕ್ಕಿರುವ ಗಾಣದ ಕಲ್ಲಿನ ಮೇಲೆ ಇದೆ. ಈ ದೇವಾಲಯಕ್ಕೆ ಅಪ್ಪಯ್ಯನ್‌ನ ಅಳಿಯ ವೈಸಣ್ಣ ಎಣ್ಣೆ ಗಾಣವನ್ನು ದಾನ ಕೊಟ್ಟ ಬಗ್ಗೆ ಉಲ್ಲೇಖವಿದೆ.

4) 78ನೇ ಶಾಸನವು ಗಾಣದ ಕಲ್ಲಿನ ಮೇಲೆ ಇದ್ದು, ಈ ಶಾಸನವು ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ  ಸಿಯನಾರ್ ಎಂಬಾತ ಮಲ್ಲಿಕಾರ್ಜುನ ದೇವಾಲಯದ ಎಣ್ಣೆಗಾಣಕ್ಕೆ ದತ್ತಿ ನೀಡಿದ ಬಗ್ಗೆ ಉಲ್ಲೇಖ ಇದೆ.

5) 79ನೇ ಶಾಸನವು ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದಲ್ಲಿರುವ ಚಿತ್ರಮಂಟಪದ ಗೋಡೆಯ ಮೇಲೆ ಇದೆ. ಇದು 19 ನೇ ಶತಮಾನದ ಕಾಲಾವಧಿಯಲ್ಲಿ ಬೆಟ್ಟಹಳ್ಳಿಯ ಮಲ್ಲಿಕಾರ್ಜುನ ದೇವಾಲಯದ ಗೋಡೆಯ ಮೇಲಿರುವ ಶೈವಪುರಾಣದ ಶಿಲ್ಪಪಟ್ಟಿಕೆಗಳ ಬಗ್ಗೆ ಉಲ್ಲೇಖ ಇದೆ.

6) 80ನೇ ಶಾಸನವು ಮಲ್ಲಿಕಾರ್ಜುನ ದೇವಾಲಯದ ಪ್ರಾಕಾರದ ಗೋಡೆಯ ಮೇಲ್ಭಾಗದಲ್ಲಿ ಹಾಸಿರುವ ಕಲ್ಲಿನ ಮೇಲೆ 1513 ಅಕ್ಟೋಬರ್ 29ರ ದಿನಾಂಕವನ್ನು ಹೊಂದಿದೆ.

ಈ ಶಾಸನದಲ್ಲಿ ಮಲ್ಲಿಕಾರ್ಜುನ ದೇವರಿಗೆ ಶ್ರೀಮುಖ ಸಂವತ್ಸರದ ಕಾರ್ತಿಕ ಶುದ್ಧದಿನ ಸೋಸಲೆಯ ಚಿಕ್ಕಣ್ಣನು ಮುಡುಕುತೊರೆಯ ಮಲ್ಲಿಕಾರ್ಜುನದೇವರ ನಂದಾದೀವಿಗೆಗೆ ಬೆಟ್ಟಹಳ್ಳಿಯ ಮಗ 29 ದೇವರ ನಂದಾದೀವಿಗೆಗೆ ಕೆರೆಯ ಕೆಳಗಿನ ನಂದನವನವನ್ನು (ತೋಟ) ಹಾಗೂ ಮಗ್ಗವನ್ನು ಕೊಡುಗೆಯಾಗಿ ನೀಡಿದ ಬಗ್ಗೆ ಉಲ್ಲೇಖವಿದೆ.

7) 81ನೇ ಶಾಸನವು ಮಲ್ಲಿಕಾರ್ಜುನ ದೇವಾಲಯದ ಕಲ್ಲಿನ ಮೇಲೆ ಇದೆ. ಇದು 1680 ಜೂನ್ 21ರ ಶಾಸನ. ಶಾಸನವು ಮಲ್ಲಿಕಾರ್ಜುನದೇವರ ಅಭಿಷೇಕಕ್ಕೆ, ನೈವೇದ್ಯಕ್ಕೆ ನದೀತೀರದ (ಆಘಣಿ ನದಿ ದಂಡೆ) ಭೂಮಿಯನ್ನು ತೆಳನೂರ ಗ್ರಾಮದ ವೀರಯ್ಯಗೌಡ ದಾನ ನೀಡಿದ ಬಗ್ಗೆ ಪ್ರಸ್ತಾಪವಿದೆ.

8) 82ನೇ ಶಾಸನವು ಮಲ್ಲಿಕಾರ್ಜುನ ದೇವರಿಗೆ 1435 ಜೂನ್ 23ರಂದು (ರಾಕ್ಷಸ ಸಂವತ್ಸರದ ದ್ವಿತೀಯ ಜ್ಯೇಷ್ಠ ಬ 12ರಂದು) ವಿರೂಪಣ್ಣ ಒಡೆಯ ಇತರರು ದೀಪಾರಾಧನೆಗಾಗಿ ದಾನ ನೀಡಿದ್ದನ್ನು ಹೇಳುತ್ತದೆ.

9) 83ನೇ ಶಾಸನವು ಮಲ್ಲಿಕಾರ್ಜುನ ದೇವರ ನೈವೇದ್ಯಕ್ಕೆ ಸುತ್ತೂರು ಮಠದ ಸಿಂಹಾಸನಾಧೀಶ್ವರರು ದಾನ ನೀಡಿದ್ದನ್ನು ಹೇಳುತ್ತದೆ. ಇದರ ಕಾಲ 16–17ನೇ ಶತಮಾನ.

10) 84ನೇ ಶಾಸನವು ಬೆಟ್ಟದ ಹಿಂಭಾಗದ ಹೊಲದಲ್ಲಿರುವ ಶಿಲಾಶಾಸನ. ಹೊಯ್ಸಳರ ರಾಜ ಎರಡನೇ ವೀರಬಲ್ಲಾಳನ ಕಾಲದಲ್ಲಿ ವೆಟ್ಟನ್‌ಪಲ್ಲಿಯ ಬೆಟ್ಟದ ಮೇಲಿನ ಮಲ್ಲಿಕಾರ್ಜುನ ದೇವರಿಗೆ ಕ್ರಿ.ಶ. 1179ರಲ್ಲಿ ಪೆರ್ಗ್ಗಡಿ ವೈಜ್ಜಪ್ಪ ಮತ್ತು ರಾಮೈಯ್ಯ ಎಂಬುವರು ದಾನ ನೀಡಿದ ಬಗ್ಗೆ ಉಲ್ಲೇಖವಿದೆ.

11) 85ನೇ ಶಾಸನವು ಮಲ್ಲಿಕಾರ್ಜುನ ದೇವರ ಹಿಂಭಾಗದಲ್ಲಿರುವ ಕುನ್ನೀರುಕಟ್ಟೆಗೆ ಪೂರ್ವ ತೋಪಿನಲ್ಲಿರುವ ಕಲ್ಲಿನ ಮೇಲೆ ಇದೆ. ಇಲ್ಲಿಯ ವಾಗೀಶ್ವರ ದೇವರಿಗೆ ವಾಗೀಶ್ವರ ಮಂಗಲಮ್‌ನ ಭೂಮಿಯನ್ನು ದಾನ ನೀಡಿದ ಬಗ್ಗೆ ಉಲ್ಲೇಖ ಇದೆ.

12) 86ನೇ ಶಾಸನವು ಹೊಯ್ಸಳ ರಾಜ ಒಂದನೇ ನರಸಿಂಹ (1150–60), ಮೂರನೇ ನರಸಿಂಹ (1279–80) ಇವರುಗಳ ಕಾಲದಲ್ಲಿ ವೆಟ್ಟನ್‌ಪಲ್ಲಿಯ ಅಪ್ಪಜಯ್ಯನ್ನನ ಸೋದರರು, ಮಕ್ಕಳು ಮತ್ತು ಮೊಮ್ಮಕ್ಕಳು ರಾಮನಾಥ ದೇವರಿಗೆ ಭೂಮಿಯನ್ನು ದಾನ ನೀಡಿದ ಬಗ್ಗೆ ಉಲ್ಲೇಖವಿದೆ.

13) 87ನೇ ಶಾಸನವು 13–14ನೇ ಶತಮಾನದಲ್ಲಿ ಹೊಯ್ಸಳ ರಾಜ ವೀರಬಲ್ಲಾಳದೇವ ಕಾಲದಲ್ಲಿ ವೆಟ್ಟನ್‌ಪಲ್ಲಿ ಗ್ರಾಮದ ನದಿಯ ಪಕ್ಕದಲ್ಲಿರುವ ನೀರಾವರಿ ಭೂಮಿಯನ್ನು ದಾನ ನೀಡಿದ ಬಗ್ಗೆ ಉಲ್ಲೇಖವಿದೆ.

(1) ವೆಟ್ಟನ್‌ಪಲ್ಲಿ ಗ್ರಾಮದ 84ನೇ ಶಾಸನ – ಕ್ರಿ.ಶ. 1179 ಹೊಯ್ಸಳರ ರಾಜ ಎರಡನೇ ವೀರಬಲ್ಲಾಳನ ಕಾಲದಲ್ಲಿ, 86ನೇ ಶಾಸನವು ಒಂದನೇ ನರಸಿಂಹ (1150–60) ಮೂರನೇ ನರಸಿಂಹರ (1279–80) ಕಾಲದಲ್ಲಿ, 87ನೇ ಶಾಸನವು 13–14ನೇ ಶತಮಾನದಲ್ಲಿ ಹೊಯ್ಸಳ ರಾಜ ಮೂರನೇ ವೀರಬಲ್ಲಾಳದೇವನ (1262–ಸ1342) ಕಾಲದಲ್ಲಿ ಎಂಬ ಉಲ್ಲೇಖವಿದೆ. (2) ಮುಡುಕುತೊರೆ (ಗ್ರಾಮದ 80ನೇ ಶಾಸನ– 1513 ಅಕ್ಟೋಬರ್ 29) ವಿಜಯನಗರ. (3) ಗ್ರಾಮದ 79ನೇ ಶಾಸನದಲ್ಲಿ–19ನೇ ಶತಮಾನ – ಮೈಸೂರು ಒಡೆಯರ ಕಾಲ.

ಒಟ್ಟಾರೆ ಗ್ರಾಮವನ್ನು ಶಾಸನಗಳಲ್ಲಿ ವೆಟ್ಟನಪಲ್ಲಿ, ಮುಡುಕುದೊರೆ, ಬೆಟ್ಟಹಳ್ಳಿ, ಎಂದು ಉಲ್ಲೇಖಿಸಿರುವುದನ್ನು ನೋಡಿದರೆ, ಭೌಗೋಳಿಕ ಹಿನ್ನೆಲೆಯಿಂದ ಈ ಗ್ರಾಮಕ್ಕೆ ಹೆಸರು ಬಂದಿದೆ ಎಂದು ಹೇಳಬಹುದು.

ಮಹಾಭಾರತದ ಕಾಲದಿಂದ ಹಿಡಿದು ಗಂಗರು, ಹೊಯ್ಸಳರು, ವಿಜಯನಗರ ಹಾಗೂ ಮೈಸೂರು ಒಡೆಯರ ಕಾಲದಲ್ಲಿ ಈ ಗ್ರಾಮವು ಪ್ರಮುಖ ಸ್ಥಳವಾಗಿ, ದೇವಾಲಯವಾಗಿ ಇಂದಿನವರೆಗೆ ಹಂತಹಂತವಾಗಿ ಬೆಳೆದು ಬಂದ ಬಗ್ಗೆ ಶಾಸನಗಳು, ಸ್ಥಳೀಯ ಐತಿಹ್ಯಗಳು ಮಾಹಿತಿ ನೀಡುತ್ತವೆ. ಇಲ್ಲಿನ ಇತಿಹಾಸ ಪ್ರಸಿದ್ಧ ದೇವಾಲಯನ್ನು ಜೀರ್ಣೋದ್ಧಾರ ಮಾಡುತ್ತಿರುವುದು ಸಂತಸದ ವಿಷಯ. ಇದೇ ತರಹ ಕರ್ನಾಟಕದಾದ್ಯಂತ ಇರುವ ಇತರ ಇತಿಹಾಸ ಪ್ರಸಿದ್ಧ ದೇವಾಲಯಗಳಿಗೂ ಇದೇ ರೀತಿ ಕಾಯಕಲ್ಪ ದೊರೆಯಲಿ ಎಂದು ಆಶಿಸೋಣ. □

# ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಚನಗಳು

ರಂಗನಾಥ್ ಮೈಸೂರು

ಇನಿ ಮಾತಾಡಿದರೆ ಕೊರಳು ನೊಂದೀತೆ
ಅನ್ಯರ ಕಷ್ಟಕ್ಕಾದರೆ ಆಪತ್ತು ಬಂದೀತೆ..
ಅವರಿವರೆನ್ನದೆ ಸರ್ವರನು ಕರುಣೆಯಲಿ
ಪೊರೆವ ನಿನ್ನ ಗುಣವ ಒಂದಿನಿತು
ಎನಗೆ ಕರುಣಿಸಯ್ಯಾ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ನೀವು ನಕ್ಕರೆ ಶಶಿಯುದಿಸಿ ಬಂದಂತೆ
ನುಡಿದರೆ ಅಕ್ಕರದ ಅರಸಿ ನಕ್ಕಂತೆ ; ನಕ್ಕರೆ ನಭವು ಬಿದ್ದೀತೇ
ನಡೆದರೆ ಹರನೇ ತಾನೊಲಿದು ಬಂದಂತೆ
ನಿಂತೊಡೆ  ನಂದಿ ದೃಢವಾಗಿ ನಿಂತಂತೆ
ಭಕ್ತಿಯಲಿ ಪೊಡಮಡುವೆ ಎನಗೆ
ನಿನ್ನ  ಅಭಯ ಹಸ್ತವ ನೀಡಿ ಸಲಹಯ್ಯ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಕಾವಿ ಧರಿಸಿದ ಭವ್ಯಕಾಯವ ಕಂಡಾಗಲೆಲ್ಲ
ಎನಗೆ ವೈರಾಗ್ಯನಿಧಿ ಅಲ್ಲಮನ ನೆನಪು
ಕಾರ್ಯ ವೈಖರಿಯ ಕಂಡಾಗಲೆಲ್ಲ ಕಾಯಕಯೋಗಿ
ಶರಣ ಬಸವಣ್ಣನ ನೆನಪು.
ಜಗದ ಬಂಧಗಳಿಗೆ ಅಂಟಿಯೂ ಅಂಟದ
ಕಂಡಾಗಲೆಲ್ಲ ಅಕ್ಕ ಮಹಾದೇವಿಯ ನೆನಪು
ಶಿಷ್ಯಪ್ರೀತಿ, ಕಾಯಕನಿಷ್ಠೆ, ಸಮಯಪ್ರಜ್ಞೆಗಳ
ಸಂಗಮ ನೀನಯ್ಯ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಶ್ರೀಗುರುವು ತೋರಿದ ಹಾದಿಯಲಿ  ಮುನ್ನಡೆದೆ
ಕಿರಿದ ಹಿರಿದಾಗಿಸಿದೆ. ಅಕ್ಷರ, ಅನ್ನ, ಆರೋಗ್ಯವನಿತ್ತು ಪೊರೆದೆ
ನಿನ್ನ ಮುಗುಳ್ನಗೆಯ ಬೆಳಕಿಗೆ ಮಾರು
ಹೋಗದವರಾರಯ್ಯ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಕಾವಿ ತೊಟ್ಟರೂ ನೀನು ಸನ್ಯಾಸಿಯಲ್ಲವಯ್ಯ
ಸಂಸಾರಿ ಬಹುದೊಡ್ಡ ಸಂಸಾರಿ ನೀನು
ನಿನಗೆ ಕಾಯಕವೇ ತಾಯಿ, ಶ್ರೀ ಗುರುವೇ ತಂದೆ
ಶಿಷ್ಯಕೋಟಿಯೇ ನಿನ್ನ ಮಕ್ಕಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲೆಂಬ
ಶರಣರ ಸೂಳ್ನುಡಿಯ ಸತ್ಯ ಸಾಕ್ಷಾತ್ಕಾರವಯ್ಯ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಅನಾಥ ಮಕ್ಕಳ ಅನುಗ್ರಹಿಸಿದೆ
ಧರಣಿ ಮುನಿದು ನೊಂದವರ ನೆರಳು ನೀನಾದೆ.
ತನುವ ನುಂಗಿ ನೀರ್ಕುಡಿದ ಕೊರೊನಾ ಮಾರಿಯ
ಅಟ್ಟಹಾಸಕ್ಕೆ ಸಿಕ್ಕವರ ನೋವಿಗೂ ಮಿಡಿದ
ನಿನ್ನ ಹೃದಯ ವೈಶಾಲ್ಯಕೆ ಎಣೆಯುಂಟೆ ಹೇಳಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಅರಸ ದಕ್ಷನಾಗಿದ್ದೊಡೆ ಆಡಳಿತ ಚೆನ್ನ
ಗೃಹಿಣಿ ದಕ್ಷಳಾಗಿದ್ದೊಡೆ ಕುಟುಂಬ ಚೆನ್ನ
ಮಗನು ದಕ್ಷನಾಗಿದ್ದೊಡೆ ಮನೆವಾರ್ತೆ ಚೆನ್ನ
ನಿನ್ನನುಗ್ರಹ ಅನುಪಮವಾಗಿದ್ದೊಡೆ
ಅಂತರಂಗದ ಅರಮನೆಯು ಚೆನ್ನ ಕಾಣಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಎಷ್ಟುಬಾರಿ ನೋಡಿದರೂ ಮತ್ತೆ ಮತ್ತೆ
ನೋಡಬೇಕೆನ್ನುವ ದಿವ್ಯ ಮಂಗಳಮೂರ್ತಿ ನೀವಯ್ಯ
ಎಷ್ಟು ಬಾರಿ ಕೇಳಿದರೂ ಮತ್ತೆ ಮತ್ತೆ ಕೇಳಬೇಕೆಂಬ
ನುಡಿ ನಿಮ್ಮದಯ್ಯ
ಅಯ್ಯಾ ಇದು ಹೊಗಳಿಕೆಯ ಹೊನ್ನಶೂಲವಲ್ಲಯ್ಯ
ಅಂತರಂಗದ ಭಾವ ಕಾಣಾ ಇದಕ್ಕೆ ನೀವೇ ಸಾಕ್ಷಿ,
ಎನ್ನ ಗುರು ಸಾಕ್ಷಿ ಕೇಳಾ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಆಗಸದ ವಿಸ್ತಾರಕ್ಕೆ ಆಗಸವೇ ಸಾಟಿ
ಸಾಗರದ ಹರಹಿಗೆ ಸಾಗರವೇ ಸಾಟಿ
ಹಿಮಗಿರಿಯ ಔನತ್ಯಕ್ಕೆ ಹಿಮಗಿರಿಯೇ ಸಾಟಿ
ನಿಮ್ಮ ಬಣ್ಣಿಸಲಳವೇನಯ್ಯ. ಅಂಧಕನು ಮತ್ತೆ
ಆನೆಯ ಬಣ್ಣಿಸಿದಂತೆ ಕಾಣಾ
ಶಿವರಾತ್ರಿ ದೇಶಿಕೇಂದ್ರ ಪ್ರಭುವೇ.

ಹೆಚ್ಚು ಮಾತಿಲ್ಲದ. ಕಣ್ಣಲ್ಲೇ ಎಲ್ಲ ಹೇಳಿಬಿಡುವ
ಕೊಡುವುದೆಲ್ಲವ ಕೊಟ್ಟು ಮೌನವಾಗಿ ಬಿಡುವ
ನಿಮ್ಮ ಮೌನವೂ ಬಂಗಾರ; ಕಣ್ಣನೋಟದ ಕಿರಣದ
ಕರುಣೆಯ ತೋರಿ ಸದಾ ಎಮ್ಮ ಸಲಹಯ್ಯ
ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಕಲೆಗೆ ನೆಲೆಯಾದಿರಿ; ಸಂಗೀತಕ್ಕೆ ಸ್ವರವಾದಿರಿ
ವಿಜ್ಞಾನಕ್ಕೆ ರೆಕ್ಕೆ ಕಟ್ಟಿದಿರಿ; ಜ್ಞಾನಶಾಖೆಗಳನ್ನೆಲ್ಲ
ವಿಸ್ತರಿಸಿದ ನಿಮ್ಮ ದೂರದೃಷ್ಟಿಗೆ ಶರಣು
ಶರಣೆಂದೆನಯ್ಯ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಅಯ್ಯಾ ನಿಮಗೆ ಗೊತ್ತು..ನೈಜ ಭಕ್ತರಾರು
ಡಾಂಭಿಕರಾರೆಂಬ ನಿತ್ಯಸತ್ಯ.
ಡಾಂಭಿಕರ ದೂರಸರಿಸಿ; ನೈಜಭಕ್ತರ
ಹೃದಯಕ್ಕೆ ಅಪ್ಪಿಕೊಳ್ಳುವ ಭಕ್ತರ ಬಂಧು
ನೀನಯ್ಯಾ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಸಕಲ ಮತಗಳಲೂ ಶಿವನನ್ನೇ ಕಂಡೆ
ಸಕಲ ಆಚರಣೆಗಳಲ್ಲೂ ಷಟ್‌ಸ್ಥಲವನ್ನೇ ಕಂಡೆ
ಎಲ್ಲ ವಿಧಿಗಳಲ್ಲೂ ಪಂಚಾಚಾರವನ್ನೇ ಕಂಡೆ
ಶಿವ ಸಾಕ್ಷಾತ್ಕಾರಕ್ಕೆ ಮತಬೇರೆ ಗುರಿ ಒಂದೇ ಎಂಬ
ಸತ್ಯವ ಅರುಹಿದೆಯಯ್ಯಾ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲವೆಂಬ
ಶರಣಸತ್ಯದ ರಾಯಭಾರಿ ನೀವಯ್ಯ
ಚಿತ್ತ ಬಂದೆಡೆ ಸುತ್ತಿಬಿಡುವ, ಭಕ್ತ ಕರೆದೆಡೆ
ತೆರಳಿಬಿಡುವ ನಿಮ್ಮ ಕರುಣೆಗೆ ಕೊನೆಯುಂಟೆ
ಹೇಳಾ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

ಕ್ಷರವಾಗದ. ಅಕ್ಷರದಲ್ಲಿ ನಿನ್ನ ಕಂಡೆನಯ್ಯ
ಬರಿದಾಗದ ಭಾವಗಳಲ್ಲಿ ನಿನ್ನ ಕಂಡೆನಯ್ಯ
ಪ್ರಕೃತಿಯ ಸೊಗಸಿನಲ್ಲಿ ನಿನ್ನ ಕಂಡೆನಯ್ಯ
ಮುಗ್ಧ ಮಗುವೊಂದರ ನಗೆಯಲ್ಲಿ ನಿನ್ನ ಕಂಡು
ನಮಿಸಿ ನಲಿದೆನಯ್ಯ ಶಿವರಾತ್ರಿ ದೇಶಿಕೇಂದ್ರ ಪ್ರಭುವೆ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ನಾಡಿನ ಶ್ರೀಮಂತಿಕೆಗೆ ಮಠಮಾನ್ಯಗಳೇ ಕಾರಣ**

ಸಾಂಸ್ಕೃತಿಕ, ಶೈಕ್ಷಣಿಕ, ಔದ್ಯೋಗಿಕ ಹಾಗೂ ಆರ್ಥಿಕವಾಗಿ ಈ ನಾಡು ಶ್ರೀಮಂತವಾಗಿರಲು ಮಠ–ಮಾನ್ಯಗಳು ಕಾರಣ ಎಂದು ಬಿಜೆಪಿ ರಾಜ್ಯಾಧ್ಯಕ್ಷರು ಮತ್ತು ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಅಕ್ಟೋಬರ್ 5ರಂದು ಮೈಸೂರು ಹುಲ್ಲಿನಬೀದಿ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ವಿದ್ಯಾರ್ಥಿನಿಲಯದ ನೂತನ ಕಟ್ಟಡಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರು ಹೇಳಿದಂತೆ ಎಲ್ಲಾ ಸಮುದಾಯಗಳನ್ನೂ ನಮ್ಮವರು ಎಂದು ಮಠಮಾನ್ಯಗಳು ಭಾವಿಸಿದ್ದರಿಂದಲೇ ಇಂದು ಕೋಟ್ಯಾಂತರ ಮಂದಿ ವಿದ್ಯಾವಂತರಾಗಿದ್ದಾರೆ. ನೂರಾರು ವರ್ಷಗಳಿಂದ ಈ ನಾಡಿನಲ್ಲಿ ಅನ್ನ ಹಾಗೂ ಅಕ್ಷರ ದಾಸೋಹ ನೀಡುವುದನ್ನು ಮಠಮಾನ್ಯಗಳು ದೀಕ್ಷೆಯಂತೆ ನಡೆಸಿಕೊಂಡು ಬಂದಿವೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಭಾಗದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಾಕಷ್ಟು ಜನರು ಕೊಡುಗೆ ನೀಡಿದ್ದಾರೆ. ಹುಲ್ಲಿನಬೀದಿಯ ಮಠಕ್ಕೆ ಶ್ರೀಮತಿ ಪಾರ್ವತಮ್ಮ ಎಂಬುವರು ಜಾಗ ನೀಡಿದ್ದರು. ಇಲ್ಲಿ ಇಂದು 108 ವಿದ್ಯಾರ್ಥಿಗಳಿಗೆ ವಾಸ್ತವ್ಯದ ಅವಕಾಶ ಕಲ್ಪಿಸುವ ವಿದ್ಯಾರ್ಥಿನಿಲಯ ನಿರ್ಮಾಣವಾಗಿದೆ. ಅಂತಹ ಮಹನೀಯರನ್ನು ಸ್ಮರಿಸಬೇಕಿದೆ ಎಂದು ತಿಳಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಸಿದ್ಧೇಶ್ವರ ಮಹಾಸ್ವಾಮಿಗಳು, ದೇವನೂರು ಶ್ರೀ ಮಹಾಂತ ಸ್ವಾಮಿಗಳು, ಪಡುಗೂರು ಶ್ರೀಗಳು, ಹುಲ್ಲಹಳ್ಳಿ ಶ್ರೀಗಳು ಶುಭಸಂದೇಶ ನೀಡಿದರು. ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಎಚ್.ವಿ. ರಾಜೀವ್ ಮಾತನಾಡಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಉಪನ್ಯಾಸ ಮಾಡಿದರು. ಮಾಜಿ ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ಎಂ. ಪ್ರದೀಪ್‌ಕುಮಾರ್, ಶ್ರೀ ಬಿ.ವಿ. ಮಂಜುನಾಥ್ ಉಪಸ್ಥಿತರಿದ್ದರು.

**ಲಕ್ಷಾಂತರ ವಿದ್ಯಾರ್ಥಿಗಳ ಜೀವನಕ್ಕೆ ಬೆಳಕಾದ ರಾಜೇಂದ್ರ ಶ್ರೀಗಳು**

ರಾಜೇಂದ್ರ ಶ್ರೀಗಳು ತ್ರಿವಿಧ ದಾಸೋಹದ ಮೂಲಕ ಲಕ್ಷಾಂತರ ವಿದ್ಯಾರ್ಥಿಗಳ ಜೀವನಕ್ಕೆ ದಾರಿ ದೀಪವಾಗಿದ್ದರು ಎಂದು ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪನವರು ಅಕ್ಟೋಬರ್ 8ರಂದು ಟಿ. ನರಸೀಪುರದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಸೇವಾ ಪ್ರತಿಷ್ಠಾನದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ರಾಜೇಂದ್ರ ಶ್ರೀಗಳ ಶತೋತ್ತರ ದಶಮಾನೋತ್ಸವವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಶಿಕ್ಷಣ ಹಾಗೂ ಜ್ಞಾನದಿಂದ ಸಮಾಜದ ಎಲ್ಲರ ಉದ್ಧಾರ ಸಾಧ್ಯ ಎಂದು ರಾಜೇಂದ್ರ ಶ್ರೀಗಳು ನಂಬಿದ್ದರು. ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಹಸಿವು ಇರುವಾಗ ಕಲಿಸಲು ಮತ್ತು ಕಲಿಯಲು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದ ಶ್ರೀಗಳು ಅನ್ನ ದಾಸೋಹದ ಜೊತೆಗೆ ಶಿಕ್ಷಣವನ್ನು ನೀಡಿದರು. ಶ್ರೀಗಳು ಸಮಾಜಕ್ಕೆ ಸಲ್ಲಿಸಿದ ಸೇವೆ ಅವಿಸ್ಮರಣೀಯ. ವಿದ್ಯಾರ್ಥಿಗಳ ಊಟಕ್ಕೆ ಅಕ್ಕಿ ಇಲ್ಲದ ಸಂದರ್ಭದಲ್ಲಿ ಪೂಜ್ಯರು ಚಿನ್ನದ ಕರಡಿಗೆಯನ್ನು ಅಡವಿಟ್ಟು ವಿದ್ಯಾರ್ಥಿಗಳಿಗೆ ಊಟಕ್ಕೆ ವ್ಯವಸ್ಥೆ ಮಾಡಿ ವಿದ್ಯಾರ್ಜನೆಗೆ ಅವಕಾಶ ನೀಡಿದ್ದಾರೆ. ನೂರಾರು ಸಂಸ್ಥೆಗಳನ್ನು ಕಟ್ಟಿ ಲಕ್ಷಾಂತರ ಜನರಿಗೆ ವಿದ್ಯಾದಾನ ಮಾಡಿದ್ದಾರೆ. ಕತ್ತಲಿನಿಂದ ಬೆಳಕಿನೆಡೆಗೆ ಹೋಗುವಂತಹ ದೊಡ್ಡ ಕೊಡುಗೆಯನ್ನು ಸಮಾಜಕ್ಕೆ ರಾಜೇಂದ್ರ ಶ್ರೀಗಳು ನೀಡಿದ್ದಾರೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳವರು ರಾಜೇಂದ್ರ ಶ್ರೀಗಳು ದಣಿವರಿಯದ ಕಾಯಕಯೋಗಿಗಳಾಗಿದ್ದರು. ಅವರು ಬದುಕಿನಲ್ಲಿ ಶಾಂತಿ, ಸಾಮರಸ್ಯ, ದಯೆ, ನಿಸ್ವಾರ್ಥತೆಯನ್ನು ಅಳವಡಿಸಿಕೊಂಡಿದ್ದರು. ಪರಮಪೂಜ್ಯ ರಾಜೇಂದ್ರ ಶ್ರೀಗಳು ಹಾಕಿಕೊಟ್ಟ ಹಾದಿಯಲ್ಲಿ ಮಠ ಸಾಗುತ್ತಿದೆ ಎಂದು ತಿಳಿಸಿದರು.

ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾದ ಡಾ. ದಿನೇಶ್‌ರವರನ್ನು ಸನ್ಮಾನಿಸಲಾಯಿತು. ಶ್ರೀ ಸಿದ್ಧಗಂಗಾ ಮಠದ ಶ್ರೀ ಶಿವಸಿದ್ಧೇಶ್ವರ ಮಹಾಸ್ವಾಮಿಗಳು, ವಾಟಾಳು, ಪಾಂಡೋಮಟ್ಟಿ, ಮದ್ದಾಗರಲಿಂಗಯ್ಯನಹುಂಡಿ ಹಾಗೂ ಹಲವಾರು ಮಠಗಳ ಶ್ರೀಗಳು, ಶಾಸಕರುಗಳಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಹೆಚ್.ಎಂ. ರೇಣುಕಪ್ರಸನ್ನ, ಶ್ರೀ ಹೆಳವರಹುಂಡಿ ಸಿದ್ದಪ್ಪ, ಶ್ರೀ ಕೆ.ಪಿ. ಮಹದೇವಸ್ವಾಮಿ, ಶ್ರೀ ಬೆನಕನಹಳ್ಳಿ ಶಿವಮಲ್ಲಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಲೋಕಕಲ್ಯಾಣಕ್ಕಾಗಿ ಸೇವೆ ಸಲ್ಲಿಸಿದ ರಾಜೇಂದ್ರ ಶ್ರೀಗಳು**

ರಾಜೇಂದ್ರ ಶ್ರೀಗಳು ಲೋಕಕಲ್ಯಾಣಕ್ಕಾಗಿ ಸೇವೆ ಸಲ್ಲಿಸಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 9ರಂದು ಗುಂಡ್ಲುಪೇಟೆಯಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ತಾಲ್ಲೂಕು ಹಾಗೂ ಯುವ ಘಟಕ, ಅಖಿಲ ಭಾರತ ಶರಣ

ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ, ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ರಾಜೇಂದ್ರ ಶ್ರೀಗಳು ತಮ್ಮ ಇಡೀ ಬದುಕನ್ನು ಈ ಸಮಾಜಕ್ಕಾಗಿ ಮುಡಿಪಾಗಿಟ್ಟವರು. ತಾವು ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು ಅವಕಾಶವಿದ್ದರೂ ಸಮಾಜದ ಉದ್ಧಾರಕ್ಕಾಗಿ ಗ್ರಾಮೀಣ ಪ್ರದೇಶದ ಬಡ ಮಕ್ಕಳ ಶಿಕ್ಷಣಕ್ಕಾಗಿ ಆ ಅವಕಾಶವನ್ನು ತ್ಯಾಗ ಮಾಡಿದರು. ಲೌಖಿಕ ಮತ್ತು ಪಾರಮಾರ್ಥಿಕ ಸಾಧನೆಯನ್ನು ಒಟ್ಟಾಗಿ ಸಮತೂಕದಲ್ಲಿ ನಡೆಸಿಕೊಂಡು ಹೋದವರು. ದೈಹಿಕ ಆರೋಗ್ಯದ ಸಮಸ್ಯೆಯ ನಡುವೆಯೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಶ್ರೀಗಳವರು ಮಾತೃ ಹೃದಯಿಗಳು. ಪ್ರಸಾದನಿಲಯದಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳೊಂದಿಗೆ ಆಪ್ತವಾಗಿ ನಡೆದುಕೊಳ್ಳುತ್ತಿದ್ದರು. ಅವರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದರು. ತಾವು ಮಾಡುವಂತಹ ಸಾಮಾಜಿಕ ಕಾರ್ಯಗಳಲ್ಲೇ ಸಂತೋಷ ಪಡೆಯುತ್ತಿದ್ದರು. ಉದ್ಯೋಗಕ್ಕೆ ಪೂರಕವಾದ ಶಿಕ್ಷಣವನ್ನು ಪಡೆದರೆ ವಿದ್ಯಾರ್ಥಿಗಳು ತಮ್ಮ ಬದುಕನ್ನು ಉಜ್ವಲವಾಗಿ ರೂಪಿಸಿಕೊಳ್ಳಬಹುದು, ಪ್ರತಿಭೆಯ ವಿಕಾಸಕ್ಕೆ ಅವಕಾಶವನ್ನು ಕೊಟ್ಟಾಗ ಮಾತ್ರ ಮನುಷ್ಯ ಸಾಧನೆಯ ಶಿಖರವನ್ನು ಏರಲು ಸಾಧ್ಯ. ಇಂತಹ ಅವಕಾಶವನ್ನ ಜೆಎಸ್‌ಎಸ್ ಮಹಾವಿದ್ಯಾಪೀಠ ನೀಡುತ್ತಲೇ ಬಂದಿದೆ ಎಂದು ತಿಳಿಸಿದರು.

ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್‌ರವರು ಶಿಕ್ಷಣ ಇಂದು ಜೀವನ ರೂಪಿಸುವುದಕ್ಕೆ ಅತ್ಯಗತ್ಯವಾಗಿದೆ. ಜೆಎಸ್‌ಎಸ್ ಸಂಸ್ಥೆ ಪ್ರಾಥಮಿಕದಿಂದ ಉನ್ನತ ಪದವಿಯವರೆಗೆ ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ನೀಡಿ ದೇಶ ವಿದೇಶಗಳಲ್ಲಿ ಉದ್ಯೋಗವನ್ನು ಪಡೆದುಕೊಳ್ಳಲು ನೆರವಾಗಿದೆ. ಸಮಾಜಮುಖಿಯಾಗಿ ಆಲೋಚಿಸಿದ ರಾಜೇಂದ್ರ ಶ್ರೀಗಳು ತಮ್ಮ ಬದುಕನ್ನು ಬಡಮಕ್ಕಳ ಉದ್ಧಾರಕ್ಕಾಗಿ ಮುಡುಪಿಟ್ಟವರು. ಸುತ್ತೂರು ಶ್ರೀಮಠದ ದಿವ್ಯ ಗುರುಪರಂಪರೆ ನಾಡಿಗೆ ಸಂಸ್ಕಾರ ನೀಡುವ ಮೂಲಕ ಸಮಾಜಕ್ಕೆ ಶ್ರೇಷ್ಠ ಮಾರ್ಗದರ್ಶನ ಮಾಡುತ್ತಾ ಬಂದಿದೆ. ನಮ್ಮ ಬದುಕನ್ನು ಹಸನು ಮಾಡಿಕೊಳ್ಳಬೇಕಾದರೆ ಪೂಜ್ಯರು ಹಾಕಿಕೊಟ್ಟ ಆದರ್ಶದ ದಾರಿಯಲ್ಲಿ ನಡೆದರೆ ಸಾಧ್ಯವಾಗುತ್ತದೆ. ಶ್ರೀಗಳವರು ಸಮಾಜಕ್ಕೆ ಕೊಟ್ಟ ಕೊಡುಗೆಯನ್ನು ಮರೆಯಲು ಸಾಧ್ಯವಿಲ್ಲ. ಪೂಜ್ಯ ರಾಜೇಂದ್ರ ಶ್ರೀಗಳವರು ಸದಾ ಸ್ಮರಣೀಯರು, ಪ್ರಸ್ತುತ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ನಮಗೆ ಸದಾ ಮಾರ್ಗದರ್ಶನ ಮಾಡುತ್ತಾ ಬಂದಿದ್ದಾರೆ ಎಂದು ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ.ಎನ್ ನಂದೀಶ್ ಹಂಚೆರವರು ನುಡಿನಮನ ಸಲ್ಲಿಸಿದರು. ಗುಂಡ್ಲುಪೇಟೆ ಪುರಸಭೆ

ಅಧ್ಯಕ್ಷರಾದ ಶ್ರೀ ಶಶಿಧರ, ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀ ರವಿ ಕಮರಹಳ್ಳಿಯವರು ಮಾತನಾಡಿದರು.

ಬೆಳಗ್ಗೆ ಶ್ರೀಗಳವರ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಿ ವಿವಿಧ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ತಾಲ್ಲೂಕಿನ ಭಕ್ತವೃಂದ, ಸಂಸ್ಥೆಯ ನೌಕರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ತರಗತಿಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ದತ್ತಿ ಪುರಸ್ಕಾರ ಹಾಗೂ ನಗದು ಬಹುಮಾನ ವಿತರಿಸಲಾಯಿತು. ರಾಜೇಂದ್ರ ಶ್ರೀಗಳವರ 110ನೇ ಜಯಂತಿಯ ಸ್ಮರಣಾರ್ಥ ಆಯೋಜಿಸಿದ್ದ ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

ಕು. ಸ್ನೇಹ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಪಿ. ಮಹದೇವಮ್ಮ ಸ್ವಾಗತಿಸಿದರು. ಶ್ರೀ ಹೆಚ್.ಪಿ. ಪಶುಪತಿ ವಂದಿಸಿದರು. ಶ್ರೀ ಹೆಚ್.ಎಸ್. ಸಿದ್ಧಮಲ್ಲಿಕಾರ್ಜುನಸ್ವಾಮಿ ನಿರೂಪಿಸಿದರು.

**ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ದೂರದೃಷ್ಟಿವುಳ್ಳ ನಾಯಕರು**

ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ದೂರದೃಷ್ಟಿವುಳ್ಳ ನಾಯಕರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 11ರಂದು ಮೈಸೂರು ದಿ ಇನ್ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ಮತ್ತು ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಸಿಂಧ್ಯರವರ 77ನೇ ಹುಟ್ಟುಹಬ್ಬ ಹಾಗೂ 'ಧ್ವನಿ ಕೊಟ್ಟ ಧಣಿ ಪ್ರಶಸ್ತಿ' ಪ್ರದಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ರಾಜಕೀಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿ ಛಾಪು ಮೂಡಿಸಿದ್ದಾರೆ. ಸಾಮಾನ್ಯ ಬಡ ಕುಟುಂಬದ ಯುವಕ ಕೂಡ ರಾಜಕೀಯಕ್ಕೆ ಬರಬಹುದು ಎಂಬುದಕ್ಕೆ ಅವರು ಸಾಕ್ಷಿಯಾಗಿದ್ದಾರೆ ಎಂದು ಹೇಳಿದರು.

ಮಾಜಿ ಸಚಿವರು ಹಾಗೂ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಚುನಾವಣಾ ರಾಜಕೀಯದಿಂದ ನಾನು ದೂರವಾಗಿದ್ದರೂ ನನ್ನ ರಾಜಕೀಯ ಅನುಭವವನ್ನು ಯುವ ರಾಜಕಾರಣಿಗಳು ಸೇರಿದಂತೆ ನಾಡಿನ ಜನತೆಗೆ ಸಂಪೂರ್ಣವಾಗಿ ಧಾರೆ ಎರೆಯಲು ಸಿದ್ಧನಿದ್ದೇನೆ. ಈ ಹಿಂದೆ ಇದ್ದ ಚುನಾವಣಾ ವ್ಯವಸ್ಥೆಗೂ ಈಗಿನ ಚುನಾವಣಾ ವ್ಯವಸ್ಥೆಗೂ ಬಹಳ ವ್ಯತ್ಯಾಸವಿದೆ. ಈಗಿನ ಚುನಾವಣಾ ಪದ್ಧತಿಯಲ್ಲಿ ಬದಲಾವಣೆ ಆಗಬೇಕಿದೆ ಎಂದರು.

ವಿವಿಧ ಕ್ಷೇತ್ರಗಳ ಸಾಧಕರಾದ ಶ್ರೀ ಐತಿಚಂಡ ರಮೇಶ್ ಉತ್ತಪ್ಪ, ಶ್ರೀ ಶ್ರೀನಿವಾಸ ಬಹದ್ದೂರ್, ಶ್ರೀಮತಿ ಜಾಹ್ನವಿ ಸೀತಾಲಕ್ಷ್ಮಿ ವರ್ಮರವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶಾಸಕರಾದ ಶ್ರೀ ತನ್ವೀರ್ ಸೇಠ್, ಮಾಜಿ ಸಚಿವರಾದ ಶ್ರೀ ಕೋಟೆ ಎಂ. ಶಿವಣ್ಣನವರು ಮಾತನಾಡಿದರು. ಶ್ರೀ ಎಚ್.ಎ. ವೆಂಕಟೇಶ್, ಡಾ. ಆರ್. ದೀಪು, ಶ್ರೀ ಎ.ಎಸ್. ಸತೀಶ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಡಾ. ಎಂ.ಜಿ.ಆರ್. ಅರಸ್, ಶ್ರೀ ಅಮರನಾಥ್ ರಾಜೇ ಅರಸು ಮೊದಲಾದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ವಿವಾಹವೇದಿಕೆಯ ನವೀಕೃತ ವೆಬ್‌ಸೈಟ್ ಲೋಕಾರ್ಪಣೆ**

ನೂತನ ಸಂಬಂಧಗಳನ್ನು ಬೆಸೆಯಲು ಆಯ್ಕೆಗಳಿಗೆ ಅವಕಾಶ ಕಲ್ಪಿಸಲು ನವೀಕೃತ ವೆಬ್‌ಸೈಟ್‌ನ್ನು ಸಿದ್ಧಪಡಿಸಲಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 17ರಂದು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ವಿವಾಹವೇದಿಕೆಯ ನವೀಕೃತ ವೆಬ್‌ಸೈಟ್‌ನ್ನು ಅನಾವರಣಗೊಳಿಸಿ ಆಶೀರ್ವದಿಸುತ್ತಾ ತಿಳಿಸಿದರು. ಜೆಎಸ್‌ಎಸ್ ವಿವಾಹವೇದಿಕೆ ಮೂವತ್ತು ವರ್ಷಗಳಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಮೈಸೂರು, ಬೆಂಗಳೂರುಗಳಲ್ಲಿ ವಧುವರರ ಸಮಾವೇಶಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಚಾಮರಾಜನಗರದಲ್ಲಿ ಸದ್ಯದಲ್ಲಿಯೇ ವ್ಯವಸ್ಥೆ ಮಾಡಲಾಗುತ್ತಿದೆ. ವಿವಾಹದ ಆಯ್ಕೆಯ ವಿಧಾನಗಳು ಕಾಲಮಾನಕ್ಕೆ ತಕ್ಕಂತೆ ಬದಲಾಗುತ್ತಿರುತ್ತವೆ. ಇಂದಿನ ದಿನಮಾನದಲ್ಲಿ ಸಮಾನ ಮನಸ್ಕರು ಮತ್ತು ಸಮಾನ ಆಲೋಚನೆಗಳನ್ನು ಹೊಂದಿರುವವರನ್ನು ಸಂಗಾತಿಗಳಾಗಿ ಪಡೆಯಲು ಇಚ್ಛಿಸುತ್ತಾರೆ. ಬದಲಾದ ಕಾಲಘಟ್ಟದಲ್ಲಿ ಆನ್‌ಲೈನ್ ವಿವಾಹ ವೇದಿಕೆಯ ಜಾಲತಾಣಗಳ ಸಹಾಯದೊಂದಿಗೆ ವಿವಾಹಗಳು ನಿಶ್ಚಯಗೊಳ್ಳುತ್ತಿವೆ. ಜೆಎಸ್‌ಎಸ್ ವಿವಾಹ ವೇದಿಕೆಯ ನವೀಕೃತ ವೆಬ್‌ಸೈಟ್‌ನಲ್ಲಿ ತಂತ್ರಜ್ಞಾನವನ್ನು ಬಳಸಿಕೊಂಡು ಎಲ್ಲ ತರಹದ ಅವಕಾಶಗಳನ್ನು ನೀಡಲಾಗಿದೆ. ಈ ವೆಬ್‌ಸೈಟ್‌ನ್ನು ಕನ್ನಡ, ತಮಿಳು, ತೆಲಗು ಮತ್ತು ಹಿಂದಿ ಭಾಷೆಗಳಿಗೂ ಸಹ ಅನುವಾದಗೊಳಿಸಿ ಗ್ರಾಮಾಂತರ ಪ್ರದೇಶಗಳಿಗೂ ತಲುಪುವಂತೆ ಮಾಡಲು ಸೂಚಿಸಲಾಗಿದೆ ಎಂದು ಹೇಳಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮೊದಲೆಲ್ಲ ಸಾಂಪ್ರದಾಯಿಕವಾಗಿ ಜೀವನ ಸಂಗಾತಿಗಳನ್ನು ಆಯ್ಕೆಮಾಡಿಕೊಳ್ಳಲಾಗುತ್ತಿತ್ತು. ಈಗ ತಂತ್ರಜ್ಞಾನದ ಆವಿಷ್ಕಾರದಿಂದ ಅದು ಬದಲಾಗಿದೆ. ಆನ್‌ಲೈನ್ ವಿವಾಹ ಜಾಲತಾಣ ಗಳ ಮೂಲಕ ಮದುವೆಗಳು ಏರ್ಪಡುತ್ತಿವೆ. ನವೀಕೃತ ವೆಬ್‌ಸೈಟ್ ಇಂದಿನ ದಿನಮಾನಕ್ಕೆ ಅವಶ್ಯವಿರುವ ಎಲ್ಲ ಆಯ್ಕೆ ಮತ್ತು ವಿಷಯಗಳನ್ನು ಒಳಗೊಂಡಿದೆ. ಅವಶ್ಯಕತೆಯಿರುವ ಎಲ್ಲರೂ ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕುಲಪತಿಗಳಾದ ಡಾ. ಹೆಚ್. ಬಸವನಗೌಡಪ್ಪನವರು ಜೀವನದಲ್ಲಿ ವಿವಾಹ ಪ್ರಮುಖವಾದ ಘಟ್ಟ. ಲಿಂಗಾನುಪಾತದಲ್ಲಿ ವ್ಯತ್ಯಾಸವಿರುವುದರಿಂದ ಸರಿಯಾದ ವಯಸ್ಸಿಗೆ ವಿವಾಹಗಳು ಏರ್ಪಡುತ್ತಿಲ್ಲ. ಇಂತಹ ವೆಬ್‌ಸೈಟ್‌ಗಳಿಂದ ವಿವಾಹಗಳು ನಿಶ್ಚಯವಾಗಲು ಸಹಾಯಕವಾಗಲಿದೆ. ವಿವಾಹವಾಗಲು ಕಾಯುತ್ತಿರುವವರಿಗೆ ಇದರಿಂದ ಸಾಕಷ್ಟು ನೆರವಾಗಲಿದೆ ಎಂದು ಹೇಳಿದರು.

ಎಸ್‌ಜೆಸಿಇ ಸ್ಟೆಪ್‌ನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸಿ. ಶಿವಶಂಕರ್‌ರವರು ವೆಬ್‌ಸೈಟ್‌ನ ಬಗ್ಗೆ ಮಾಹಿತಿ ನೀಡಿ ಸಂಸ್ಕೃತಿಯೊಂದಿಗೆ ತಂತ್ರಜ್ಞಾನವನ್ನು ಸಮ್ಮಿಳತಗೊಳಿಸಿ ವಿವಾಹವೇದಿಕೆಯ ವೆಬ್‌ಸೈಟ್‌ನ್ನು ನವೀಕೃತಗೊಳಿಸಲಾಗಿದೆ. ಜಗತ್ತಿನ ಎಲ್ಲ ಭಾಗಗಳಲ್ಲೂ ಇದಕ್ಕೆ ಪ್ರವೇಶ ಪಡೆದು ವಿವಾಹವಾಗಬಯಸುವವರು ನೋಂದಾಯಿಸಿಕೊಳ್ಳಬಹುದಾಗಿದೆ. ವೈಯಕ್ತಿಕ ಮಾಹಿತಿಗಳು ಸೋರಿಕೆಯಾಗದಂತೆ ಜಾಗರೂಕವಾಗಿ ಇರುವಂತೆ ಮಾಡಲಾಗಿದೆ. ಜೀವನ ಸಂಗಾತಿಗಳನ್ನು ಪಡೆಯಲು ಬಯಸುವವರಿಗೆ ಎಲ್ಲ ರೀತಿಯ ಆಯ್ಕೆಗಳನ್ನು ಅಳವಡಿಸಿ ಸುಲಭಗೊಳಿಸಲಾಗಿದೆ. ಸ್ಟೆಪ್‌ನ ಸ್ಟಾರ್ಟ್‌ಅಪ್ ಮೂಲಕ ಇದನ್ನು ಪ್ರಸ್ತುತ ದಿನಮಾನಕ್ಕೆ ತಕ್ಕಂತೆ ನವೀಕೃತಗೊಳಿಸಲಾಗಿದೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಉಪಸ್ಥಿತರಿದ್ದರು. ಶ್ರೀ ಎಸ್. ಶಿವಕುಮಾರಸ್ವಾಮಿಯವರು ಸ್ವಾಗತಿಸಿದರು. ವಿವಾಹವೇದಿಕೆಯ ಸ್ವಯಂಸೇವಕರಾದ ಶ್ರೀಮತಿ ಎನ್. ಮಲ್ಲಿಕಾರವರು ಮಾತನಾಡಿದರು. ಕು. ವೈಶಾಲಿ ಮತ್ತು ಕು. ಕುಶಲ ಪ್ರಾರ್ಥಿಸಿದರು. ಶ್ರೀಮತಿ ಪಲ್ಲವಿ ಕಾರ್ಯಕ್ರಮ ನಿರೂಪಿಸಿದರು.

ಆಸಕ್ತಿಯುಳ್ಳವರು ನವೀಕೃತ ವೆಬ್‌ಸೈಟ್ https://jssmatrimony.com/login ವಿಳಾಸದಲ್ಲಿ ನೋಂದಾಯಿಸಿಕೊಳ್ಳಬಹುದಾಗಿದೆ.

**ಭಾಷೆಗೆ ವ್ಯಾಕರಣಶುದ್ಧಿ ಮುಖ್ಯ**

ಯಾವುದೇ ಭಾಷೆಗಾದರೂ ವ್ಯಾಕರಣಶುದ್ಧಿ ಬಹಳ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 17ರಂದು ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಸಂಸ್ಕೃತೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಸಂಸ್ಕೃತ ಭಾಷೆ ಜಗತ್ತಿನ ಅನೇಕ ಭಾಷೆಗಳಿಗೆ ಮಾತೃಸ್ಥಾನವನ್ನು ಹೊಂದಿದೆ. ಅದನ್ನು ಭಾಷೆಯಾಗಿ ಕಲಿತರೆ ಸುಲಭ, ಅಲ್ಲದಿದ್ದರೆ ಕಠಿಣವಾಗಿದೆ. ಪ್ರತಿಯೊಬ್ಬರೂ ವ್ಯಾಕರಣಶುದ್ಧವಾಗಿ ಮಾತನಾಡುವುದನ್ನು ಶ್ರದ್ಧೆಯಿಂದ ಕಲಿಯಬೇಕು. ವಿದ್ಯಾರ್ಥಿಗಳು ಕೇಶಿರಾಜನ ಶಬ್ದಮಣಿದರ್ಪಣ ಕೃತಿಯನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಬೇಕು. ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಇವು ಸಹಾಯಕವಾಗಲಿವೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ವಿ ಗಿರೀಶ್‌ಚಂದ್ರರವರು ಸಂಸ್ಕೃತ ಭಾಷೆಗೆ ಪ್ರಾಚೀನ ಪರಂಪರೆಯಿದ್ದು, ಎಲ್ಲಾ ಮೌಲ್ಯಗಳ ಮಹಾನಿಧಿಯಾಗಿದೆ. ಮನುಷ್ಯನ ಮನಸ್ಸನ್ನು ಸಂಸ್ಕಾರಗೊಳಿಸುವಲ್ಲಿ ಉತ್ಸವಗಳು ಸಹಕಾರಿಯಾಗಿವೆ ಎಂದರು.

ವಿದ್ವಾಂಸರಾದ ಡಾ ಎಚ್.ವಿ. ನಾಗರಾಜರಾವ್‌ರವರು ಸಂಸ್ಕೃತವು ಹಲವಾರು ಭಾಷೆಗಳ ಸಾಹಿತ್ಯ ಕೃತಿಗಳಿಗೆ ಗುರುತರ ಕೊಡುಗೆ ನೀಡಿದೆ. ಈ ಭಾಷೆಯನ್ನು ಕಲಿಯಲು ಸತತವಾದ ಪ್ರಯತ್ನವಿದ್ದರೆ ಮಾತ್ರ ಸಾಧ್ಯ. ಭಾಷೆ ಕಲಿಯುವಾಗ ಭಯಪಡದೆ ದೃಢ ವಿಶ್ವಾಸ ಮತ್ತು ಶ್ರದ್ಧೆಯಿಂದ ಅಧ್ಯಯನ ಮಾಡಬೇಕು ಎಂದರು.

ಇದೇ ಸಂದರ್ಭದಲ್ಲಿ ವಿದ್ವಾಂಸರುಗಳಾದ ಡಾ ಎಚ್.ವಿ. ನಾಗರಾಜರಾವ್, ಪ್ರೊ. ಮಲ್ಲಣ್ಣ, ಡಾ. ಕೆ.ಜಿ. ಪುಟ್ಟಹೊನ್ನಯ್ಯನವರುಗಳನ್ನು ಸನ್ಮಾನಿಸಲಾಯಿತು. ಶಾಸಕರಾದ ಶ್ರೀ ಟಿ.ಎಸ್. ಶ್ರೀವತ್ಸರವರು ಮಾತನಾಡಿದರು. ಕರಾಟೆಯಲ್ಲಿ ಸಾಧನೆ ಮಾಡಿರುವ ಕಾಲೇಜಿನ ಅಂತಿಮ ಬಿಬಿಎ ವಿದ್ಯಾರ್ಥಿನಿ ಕು. ಆರ್ ಪ್ರಕೃತಿ ಗೌಡರವರನ್ನು ಅಭಿನಂದಿಸಲಾಯಿತು. ಸಂಸ್ಕೃತೋತ್ಸವದಲ್ಲಿ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ನಾರೀಶಕ್ತಿ ನಾಟಕ ಪ್ರದರ್ಶನಗೊಂಡಿತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿ ವರ್ಗದವರು, ಪ್ರಾಂಶುಪಾಲರಾದ ಡಾ. ರೇಚಣ್ಣ ಉಪಸ್ಥಿತರಿದ್ದರು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಸ್ಕೃತ ಶಿಕ್ಷಕರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜೆಎಸ್‌ಎಸ್ ಸಂಸ್ಕೃತ ಕಾಲೇಜು ವಿದ್ಯಾರ್ಥಿಗಳ ವೇದಘೋಷದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕು. ಧಾತ್ರಿ ಮತ್ತು ವೃಂದದವರು ಪ್ರಾರ್ಥಿಸಿದರು. ಡಾ. ಬಿ.ಪಿ ಷಡಕ್ಷರಿ ಸ್ವಾಗತಿಸಿದರು. ಡಾ. ಕೃಷ್ಣ ಭಟ್ ವಂದಿಸಿದರು. ಶ್ರೀ ಎಸ್. ಚಂದ್ರಮೌಳೇಶ್ವರ ಕಾರ್ಯಕ್ರಮ ನಿರೂಪಿಸಿದರು.

**ರಾಜೇಂದ್ರ ಶ್ರೀಗಳು ಪರಂಪರೆ ಮತ್ತು ಆಧುನಿಕತೆಯ ಸಮನ್ವಯದ ಸೇತುವೆ**

ರಾಜೇಂದ್ರ ಶ್ರೀಗಳು ಪರಂಪರೆ ಮತ್ತು ಆಧುನಿಕತೆಯ ಸಮನ್ವಯದ ಸೇತುವೆಯಾಗಿ ಸೇವೆ ಸಲ್ಲಿಸಿದರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 23ರಂದು ನಂಜನಗೂಡು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ವಿವಿಧ ಸಂಘ ಸಂಸ್ಥೆಗಳು ಹಾಗೂ ನಾಗರಿಕರ ಸಹಯೋಗದೊಂದಿಗೆ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಾರತ ದೇಶವು ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕವಾಗಿ ಶ್ರೀಮಂತ ಇತಿಹಾಸವನ್ನು ಹೊಂದಿರುವ ಕಾರಣಕ್ಕೆ ಜಗತ್ತಿನ

ಮುಂದುವರೆದ ದೇಶಗಳೂ ಕೂಡ ಭಾರತದತ್ತ ತಿರುಗಿ ನೋಡುವಂತಾಗಿದೆ. ಇಲ್ಲಿನ ಸಂತರು, ಋಷಿಮುನಿಗಳು ಅಧ್ಯಾತ್ಮ, ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿ ಸೇರಿದಂತೆ ವಿವಿಧ ರಂಗಗಳಿಗೆ ತಪಃಶಕ್ತಿಯನ್ನು ಧಾರೆಯೆರೆದು ಸೇವೆ ಸಲ್ಲಿಸಿದ್ದಾರೆ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಕಷ್ಟದ ದಿನಗಳಲ್ಲೂ ಪ್ರಸಾದ ನಿಲಯಗಳನ್ನು ಮುನ್ನಡೆಸಿ ಅನ್ನ ದಾಸೋಹ, ಅಕ್ಷರ ದಾಸೋಹ ಹಾಗೂ ಆರೋಗ್ಯ ದಾಸೋಹ ಕ್ಷೇತ್ರಗಳಲ್ಲಿ ಶ್ರೀಮಠದ ಸೇವಾಕಾರ್ಯವನ್ನು ವಿಸ್ತರಿಸಿದ್ದಾರೆ ಎಂದರು.

ಶಾಸಕರಾದ ಶ್ರೀ ದರ್ಶನ್ ಧ್ರುವನಾರಾಯಣ್‌ರವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 12ನೆಯ ಶತಮಾನದ ಜಗಜ್ಯೋತಿ ಬಸವೇಶ್ವರರ ಕಾಯಕ ತತ್ವದ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಅನ್ನ, ಅಕ್ಷರ, ಆರೋಗ್ಯ ದಾಸೋಹದ ಮೂಲಕ ಜನರಿಗೆ ನಿಸ್ವಾರ್ಥ ಸೇವೆ ಒದಗಿಸಿ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದ್ದಾರೆ. ಪೂಜ್ಯರ ಆಶಯದಂತೆ ಇಂದಿನ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸುತ್ತೂರು ಶ್ರೀಕ್ಷೇತ್ರದ ಸೇವಾ ಕಾರ್ಯವನ್ನು ರಾಜ್ಯ, ದೇಶ ಹಾಗೂ ವಿದೇಶಗಳಿಗೂ ವಿಸ್ತರಿಸಿದ್ದಾರೆ ಎಂದು ಹೇಳಿದರು.

ಪ್ರಗತಿಪರ ರೈತರಾದ ಶ್ರೀ ಜಿ. ಮಂಜೇಶ್‌ಕುಮಾರ್‌ರವರನ್ನು ಸನ್ಮಾನಿಸಲಾಯಿತು. ಜೆಎಸ್‌ಎಸ್ ಪಾಲಿಟಕ್ನಿಕ್‌ನ 'ನವ್ಯ 2025' ವಾರ್ಷಿಕ ಸಂಚಿಕೆ ಹಾಗೂ ಅನುರಾಗ್ ಮಕ್ಕಳ ಮನೆಯ ಸಂಸ್ಥಾಪಕರಾದ ಶ್ರೀ ಡಿ.ಜಿ. ಸೋಮಶೇಖರಮೂರ್ತಿಯವರ 'ಶರಣ ಭಾರತ' ದ್ವೈಮಾಸಿಕ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಮಾಜಿ ಶಾಸಕರುಗಳಾದ ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಬಿ. ಹರ್ಷವರ್ಧನ್ ಮಾತನಾಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ ಸೋಮಶೇಖರ್‌ರವರು ನುಡಿನಮನ ಸಲ್ಲಿಸಿದರು. ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ಜಶಿರಾ ಹವ್ಯಾಸಿ ಭಜನಾ ಸಂಘದವರು ಪ್ರಾರ್ಥಿಸಿದರು. ಡಾ. ಸಿ ಎಸ್ ಹೊನ್ನೇಗೌಡ ಸ್ವಾಗತಿಸಿದರು. ಶ್ರೀ ಎಸ್.ಎಂ. ಕೆಂಪಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ.ವಿ. ನಾಗೇಶ್ ವಂದಿಸಿದರು. ಶ್ರೀಮತಿ ಎಂ.ಎನ್. ಜಯಶೀಲ ಕಾರ್ಯಕ್ರಮ ನಿರೂಪಿಸಿದರು.

ಬೆಳಗ್ಗೆ ಹಿಂದಿನ ಜೆಎಸ್‌ಎಸ್ ಕಾಲೇಜು ಆವರಣದಿಂದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪುತ್ತಳಿಯ ಬೆಳ್ಳಿರಥದ ಮೆರವಣಿಗೆಯು ನಾನಾ ಜನಪದ ಕಲಾ ತಂಡಗಳೊಂದಿಗೆ ರಾಷ್ಟ್ರಪತಿ ರಸ್ತೆಯ ಮೂಲಕ ಸಾಗಿ ಜೆಎಸ್‌ಎಸ್ ಮಂಗಳ ಮಂಟಪವನ್ನು ತಲುಪಿತು.

**ದ್ವಂದ್ವ ಬಿಟ್ಟರೆ ಸಮಾಜ ಸುಭಿಕ್ಷ**

ಭಗವಂತನ ಕುರಿತಾಗಿರುವ ಮಾನಸಿಕ ದ್ವಂದ್ವಗಳನ್ನು ಬಿಟ್ಟು ದೇವನೊಬ್ಬ ನಾಮ ಹಲವು ಎಂಬಂತೆ ಜೀವನ ಸಾಗಿಸಿದರೆ ಸಮಾಜ ಸುಭಿಕ್ಷವಾಗಿರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 24ರಂದು ಉಡುಪಿ ಶ್ರೀಕೃಷ್ಣ ಮಠದ ಪರ್ಯಾಯ ಶ್ರೀ ಪುತ್ತಿಗೆ ಮಠದ ನರಸಿಂಹ ಸಭಾಭವನವನ್ನು ಲೋಕಾರ್ಪಣೆಗೊಳಿಸಿ ಮಾತನಾಡುತ್ತಾ ತಿಳಿಸಿದರು. ಎಲ್ಲ ದೇವರನ್ನು ಗೌರವಿಸುವ ಸದ್ಭಾವನೆ ಬೆಳೆದರೆ ಸಮಾಜದಲ್ಲಿ ಸೌಹಾರ್ದತೆ ಬೆಳೆಯುತ್ತದೆ. ಸಂಕುಚಿತ ಭಾವನೆಯಿಂದ ಹೊರಗೆ ಬಂದು ವಿಶಾಲವಾದ ದೃಷ್ಟಿಯಿಂದ ನೋಡಿದರೇ ಜಗತ್ತೇ ಸರ್ವಂ ದೇವಮಯಂ ಆಗಿ ಕಾಣುತ್ತದೆ. ನಮ್ಮ ಭಾವದಂತೆ ದೇವನಿರುತ್ತಾನೆ. ಉಡುಪಿ ಹರಿಹರರ ಪುಣ್ಯಕ್ಷೇತ್ರ. ಅದೇ ರೀತಿ ಸುತ್ತೂರು ಶ್ರೀಕ್ಷೇತ್ರದಲ್ಲಿ ಚೋಳರ ಕಾಲದಲ್ಲಿ ನಿರ್ಮಾಣವಾದ ಶಂಕರನಾರಾಯಣ ದೇವಾಲಯವಿದೆ. ಅದರಲ್ಲಿ ಒಂದು ಕಡೆಯಲ್ಲಿ ವಿಷ್ಣುವಿನ ದಶವಾತಾರಗಳು, ಇನ್ನೊಂದು ಕಡೆಯಲ್ಲಿ ಶಿವನ ಏಕಾದಶ ಅವತಾರಗಳ ಕೆತ್ತನೆಗಳಿವೆ. ಪುತ್ತಿಗೆ ಶ್ರೀಗಳು ಎರಡು ವರ್ಷಗಳ ಹಿಂದೆ ತಮ್ಮ ಕೋಟಿ ಗೀತಾ ಲೇಖನ ಯಜ್ಞದ ಪುಸ್ತಕಗಳನ್ನು ಅಮೆರಿಕದ ಶಿಕಾಗೋ ನಗರದಲ್ಲಿ ಬಿಡುಗಡೆಗೊಳಿಸಿದ್ದರು. ವಿಶ್ವದ ಮೂಲೆಮೂಲೆಗೆ ಕೃಷ್ಣ ಮತ್ತು ಗೀತೆಯನ್ನು ತಲುಪಿಸಿದ ಕೀರ್ತಿ ಪುತ್ತಿಗೆ ಶ್ರೀಗಳಿಗೆ ಸಲ್ಲುತ್ತದೆ ಎಂದು ಹೇಳಿದರು.

ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳು, ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದಂಗಳವರು ಸಾನ್ನಿಧ್ಯ ವಹಿಸಿದ್ದರು. ಒರಿಸ್ಸಾದ ಹೈಕೋರ್ಟ್ ನ್ಯಾಯಧೀಶರಾದ ಶ್ರೀ ಕೃಷ್ಣ ದೀಕ್ಷಿತ್ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಯೋಗಿನಿ ದೀಕ್ಷಿತ್, ಸಂಸದರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಶ್ರೀ ಯಶ್‌ಪಾಲ್ ಸುವರ್ಣ, ಶ್ರೀ ಶಂಭು ಶೆಟ್ಟಿ, ಶ್ರೀ ರವೀಂದ್ರ ಜೋಷಿ ಉಪಸ್ಥಿತರಿದ್ದರು. ವಿದ್ವಾನ್ ಗೋಪಾಲಾಚಾರ್ಯರು ಕಾರ್ಯಕ್ರಮ ನಿರೂಪಿಸಿದರು.

**ಮಠಗಳು ಸಮಾಜದ ಏಳಿಗೆಗೆ ನಿರಂತರವಾಗಿ ಶ್ರಮಿಸುತ್ತಿವೆ**

ಮಠಗಳು ಸಮಾಜದ ಏಳಿಗೆಗೆ ನಿರಂತರವಾಗಿ ಶ್ರಮಿಸುತ್ತಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 24ರಂದು ಮಂಗಳೂರು ಜಿಲ್ಲೆಯ ಗುರುಪುರ ಶ್ರೀ ಜಂಗಮ ಸಂಸ್ಥಾನ ಮಠದ ಶ್ರೀ ನೀಲಕಂಠೇಶ್ವರಸ್ವಾಮಿ ದೇವಸ್ಥಾನದ ಶಿಲಾನ್ಯಾಸದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಂದಲೇ ಜಗತ್ತು ಭಾರತದತ್ತ ನೋಡುವಂತಾಗಿದೆ. ಹಿಂದೆ ಧಾರ್ಮಿಕ ಕೇಂದ್ರಗಳು ನ್ಯಾಯಾಸ್ಥಾನ ಮತ್ತು ಕಲಾಕೇಂದ್ರಗಳಾಗಿದ್ದವು. ಅಂತಹ ಅವತರಣಿಕೆಯ

ಪುನರುತ್ಥಾನವಾಗಬೇಕು. ಭಗವಂತನ ಮೇಲೆ ನಂಬಿಕೆ ಇಟ್ಟು ಮಾಡುವ ಪ್ರತಿ ಕೆಲಸಕ್ಕೂ ಆತನ ಕೃಪೆ ಇದ್ದೇ ಇರುತ್ತದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಗುರುಪುರ ಶ್ರೀ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮಿಗಳು, ತಣ್ಣೀರುಹಳ್ಳ, ಬೇವೂರು, ಅರಮೇರಿ, ಹೆಬ್ಬಣಿ, ಹುಲಿಯೂರುದುರ್ಗ, ಸಿಡಿಗಳಲೆ ಮಠಗಳ ಶ್ರೀಗಳು, ಸಂಸದರಾದ ಕ್ಯಾ. ಬ್ರಿಜೇಶ್ ಚೌಟ ಮೊದಲಾದವರು ಉಪಸ್ಥಿತರಿದ್ದರು.

**ರಾಜೇಂದ್ರ ಶ್ರೀಗಳಿಗೆ ಚಾಮರಾಜನಗರದೊಂದಿಗೆ ಅವಿನಾಭಾವ ಸಂಬಂಧ**

ರಾಜೇಂದ್ರ ಶ್ರೀಗಳು ಚಾಮರಾಜನಗರ ಜಿಲ್ಲೆಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಅಕ್ಟೋಬರ್ 28ರಂದು ಚಾಮರಾಜನಗರದಲ್ಲಿ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಬಹಳ ವರ್ಷಗಳ ಹಿಂದೆಯೇ ಚಾಮರಾಜನಗರದಲ್ಲಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು. ಇಲ್ಲಿ ವ್ಯಾಸಂಗ ಮಾಡಿದವರು ಅನೇಕ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಶ್ರೀಗಳು ಇಲ್ಲಿನ ವಿದ್ಯಾರ್ಥಿ ನಿಲಯಕ್ಕೆ ಭೇಟಿಕೊಟ್ಟು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸುತ್ತಿದ್ದರು. ವಿದ್ಯಾರ್ಥಿನಿಲಯಗಳು ಪ್ರಾರಂಭವಾದಾಗ ಭಕ್ತಾದಿಗಳು, ಸಾರ್ವಜನಿಕರು ಉದಾರವಾಗಿ ಕೊಡುಗೆಯನ್ನು ಕೊಟ್ಟಿದ್ದನ್ನು ಪೂಜ್ಯರು ಯಾವಾಗಲೂ ಸ್ಮರಿಸುತ್ತಿದ್ದರು. ಜ್ಞಾನ ಸಂಪಾದನೆ ಮಾಡುವಾಗ ಮನಸ್ಸನ್ನು ಕೇಂದ್ರೀಕರಿಸಿ ಸದಾ ಜಾಗೃತವಾಗಿರುವ ಸಂಕಲ್ಪ ಮಾಡಿದರೆ ಏಳಿಗೆ ಸಾಧ್ಯವಾಗುತ್ತದೆ. ಜ್ಞಾನವಿಲ್ಲದ ಮನುಷ್ಯ ಪಶುವಿಗೆ ಸಮಾನ ಎಂಬ ಮಾತಿದೆ. ಮನುಷ್ಯ ಜ್ಞಾನವನ್ನು ಸಂಪಾದಿಸಿದರೆ ಲೋಕಪೂಜ್ಯನಾಗಲು ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ಅಧ್ಯಯನದ ಕಡೆಗೆ ಹೆಚ್ಚಿನ ಗಮನ ಕೊಟ್ಟು ಸುಶಿಕ್ಷಿತರಾಗಿ, ಸುಸಂಸ್ಕೃತರಾಗಿ ಜೀವನವನ್ನು ರೂಪಿಸಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು ದೇಶ ವಿದೇಶಗಳಲ್ಲಿ ಶೈಕ್ಷಣಿಕವಾಗಿ ಪ್ರಭಾವ ಬೀರಿರುವ ಸುತ್ತೂರು ಮಠಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ಐತಿಹಾಸಿಕವಾಗಿ ಹತ್ತನೆಯ ಶತಮಾನದಲ್ಲಿ ಸ್ಥಾಪನೆಯಾದ ಶ್ರೀಮಠದ ಕೊಡುಗೆ ಅಪಾರವಾದದ್ದು. ಪೂಜ್ಯರಾದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು 23ನೆಯ ಪೀಠಾಧಿಪತಿಗಳಾಗಿ ಮಠದ ಏಳಿಗೆಗೆ ಶ್ರಮಿಸಿದರು. ಮಾರ್ಗದರ್ಶಕರಾಗಿ ಮಠದ ಬೆಳವಣಿಗೆಯ ಮೂಲಕ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ಪೂಜ್ಯರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚು ಪರಿಣಾಮಕಾರಿಯಾದ ಬದಲಾವಣೆಯನ್ನು ತಂದು ಮಠದ ಶ್ರೇಯಸ್ಸಿಗೆ

ಶ್ರಮಿಸುತ್ತಿದ್ದಾರೆ. ಶಿಕ್ಷಣ ಒಂದು ದೊಡ್ಡ ತಪಸ್ಸಿದ್ದಂತೆ, ಮಠಮಾನ್ಯಗಳಿಂದ ಧಾರ್ಮಿಕ ಸಂದೇಶ ಮತ್ತು ಜಾಗೃತಿ ಮೂಡಿಸುವ ಶೈಕ್ಷಣಿಕ ಬೆಳವಣಿಗೆ ಸಾಧ್ಯವಾಗಿದೆ. ಚಾಮರಾಜನಗರದಂತಹ ಪ್ರದೇಶದಲ್ಲಿ ಶೈಕ್ಷಣಿಕವಾಗಿ ಕ್ರಾಂತಿಯನ್ನು ಮತ್ತು 300ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ನೀಡಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಮೂಲಕ ಹೆಚ್ಚಿನ ವಿದ್ಯಾರ್ಥಿಗಳಿಗೆ ತ್ರಿವಿಧ ದಾಸೋಹ ಕಲ್ಪಿಸಿಕೊಟ್ಟಿದ್ದಾರೆ. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಮಾತಿನಂತೆ ಕೆಲಸವೇ ಪೂಜೆ ಮತ್ತು ನಿಸ್ವಾರ್ಥ ಸೇವೆಯೇ ಭಗವಂತನ ಸೇವೆ ಎಂದು ಭಾವಿಸಿದವರು ಎಂದು ಹೇಳಿದರು.

ಪ್ರೊ. ಎಂ. ಕೃಷ್ಣೇಗೌಡರು ನುಡಿನಮನ ಸಲ್ಲಿಸಿದರು. ಸಂಸದರಾದ ಶ್ರೀ ಸುನಿಲ್ ಬೋಸ್, ಶಾಸಕರು ಹಾಗೂ ಎಂಎಸ್‌ಐಎಲ್‌ನ ಅಧ್ಯಕ್ಷರಾದ ಶ್ರೀ ಸಿ. ಪುಟ್ಟರಂಗಶೆಟ್ಟಿ, ಶಾಸಕರಾದ ಶ್ರೀ ಎಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷರಾದ ಶ್ರೀ ಪಿ. ಮರಿಸ್ವಾಮಿಯವರು ಮಾತನಾಡಿದರು. ಶ್ರೀ ಮಹಮ್ಮದ್ ಅಸ್ಗರ್, ಶ್ರೀ ಹೆಚ್.ವಿ. ಚಂದ್ರು, ಶ್ರೀ ಎಂ. ನಂಜುಂಡಸ್ವಾಮಿ, ಶ್ರೀ ಎಸ್. ಸುರೇಶ್, ಶ್ರೀಮತಿ ಕುಮುದ ಕೇಶವಮೂರ್ತಿ ಉಪಸ್ಥಿತರಿದ್ದರು.

ಶ್ರೀಮತಿ ಬಿ.ಪಿ. ಸೌಮ್ಯ ಮತ್ತು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ಎನ್. ಮಹದೇವಸ್ವಾಮಿ ಸ್ವಾಗತಿಸಿದರು. ಶ್ರೀ ಗಿರೀಶ್ ವಂದಿಸಿದರು. ಶ್ರೀಮತಿ ಅರುಣಶ್ರೀ ಕಾರ್ಯಕ್ರಮ ನಿರೂಪಿಸಿದರು ಚಾಮರಾಜನಗರ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಅಧಿಕಾರಿಗಳು, ಮುಖ್ಯಸ್ಥರುಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ಪೋಷಕರು, ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು, ಭಕ್ತವೃಂದ ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಳಗ್ಗೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಹರವೆ, ಮರಿಯಾಲ, ಚಾಮರಾಜನಗರ, ಮೂಡಗುರು ಹಾಗೂ ಕಬ್ಬಹಳ್ಳಿ ಮಠಗಳ ಶ್ರೀಗಳು ಉತ್ಸವಕ್ಕೆ ಚಾಲನೆ ನೀಡಿದರು. ನಂದಿಕಂಬ, ಮಂಗಳವಾದ್ಯ, ವೀರಗಾಸೆ, ಬ್ಯಾಂಡ್‌ಸೆಟ್, ನಗಾರಿ, ಗೊರವರ ಕುಣಿತ ಹಾಗೂ ಡೊಳ್ಳು ಕುಣಿತ ತಂಡಗಳೊಂದಿಗೆ ಚಾಮರಾಜೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಟು ಜೋಡಿ ರಸ್ತೆಯ ಮೂಲಕ ಸಾಗಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣವನ್ನು ತಲುಪಿತು.

□

# ಪ್ರಸಾದ



## ಕೃತಿ–ಸ್ವೀಕೃತಿ

---

**ಲಾಲ್‌ಬಹದ್ದೂರ್ ಶಾಸ್ತ್ರಿ**
ಮೂಲ : ಡಿ.ಆರ್. ಮಾಂಕೇಕರ್
ಅನು : ಎಂ.ಕೆ. ಕೆಂಪೇಗೌಡ
ಪ್ರ: ವಿಸ್ಮಯ ಬುಕ್‌ಹೌಸ್
ಕುವೆಂಪುನಗರ, ಮೈಸೂರು
ಪು : 296, ಬೆಲೆ : 300/–

**ಗ್ರಾಮ ಸುರಾಜ್ಯ**
ಮೂಲ : ಎಂ.ಕೆ. ಕೆಂಪೇಗೌಡ
ಅನು : ಪ್ರೊ. ಸಿ. ನಾಗಣ್ಣ
ಪ್ರ: ವಿಸ್ಮಯ ಬುಕ್‌ಹೌಸ್
ಕುವೆಂಪುನಗರ, ಮೈಸೂರು
ಪು : 480, ಬೆಲೆ : 600/–

**ಕಾಲಯಾತ್ರೆ (ಕಾದಂಬರಿ)**
ಕೃಷ್ಣಮೂರ್ತಿ ಹನೂರು
ಪ್ರ: ಅಂಕಿತ ಪುಸ್ತಕ
ಬಸವನಗುಡಿ
ಬೆಂಗಳೂರು
ಪು : 120, ಬೆಲೆ : 120/–

**ಸಿದ್ಧಿಯ ಕೈ ಚಂದ್ರನತ್ತ (ಕಾದಂಬರಿ)**
ಕೃಷ್ಣಮೂರ್ತಿ ಹನೂರು
ಪ್ರ: ಅಭಿರುಚಿ ಪ್ರಕಾಶನ
ಸರಸ್ವತಿಪುರಂ
ಮೈಸೂರು
ಪು : 264, ಬೆಲೆ : 220/–

**ಕನ್ನಮರಿ (ಕಾದಂಬರಿ)**
ಕೃಷ್ಣಮೂರ್ತಿ ಹನೂರು
ಪ್ರ: ಅಂಕಿತ ಪುಸ್ತಕ
ಬಸವನಗುಡಿ
ಬೆಂಗಳೂರು
ಪು : 212, ಬೆಲೆ : 230/–

**ಸತ್ಯ ವಿಠಲ ಅವರ ಸಮಗ್ರ ಕಾವ್ಯಗಳ ಅಧ್ಯಯನ**
ಡಾ. ಬೆಳವಾಡಿ ಮಂಜುನಾಥ
ಪ್ರ: ಉದ್ಭವ ಪ್ರಕಾಶನ
ಕಾಳಿದಾಸ ನಗರ
ಚಿಕ್ಕಮಗಳೂರು
ಪು : 800, ಬೆಲೆ : 650/–

**ಚುಂಬಕ ಗಾಳಿ (ಚನ್ನಬಸವಣ್ಣನ ಗುಣವಿಮರ್ಶೆ)**
ಸಂ. ಚಂದ್ರಕಾಂತ ವಡ್ಡು
ಪ್ರ: ಅಂಕುರ ಪ್ರಕಾಶನ
ನಾಗರಬಾವಿ 2ನೇ ಹಂತ
ಬೆಂಗಳೂರು
ಪು : 116, ಬೆಲೆ : 100/–

**ಸಮತಾವಾದ ಒಂದು ವಿವೇಚನೆ**
ಶಿವಸ್ವಾಮಿ ಚೀನಕೇರಾ
ಪ್ರ: ಬಸವಧರ್ಮ ಪ್ರಸಾರ ಸಂಸ್ಥೆ
ಹಿರೇಮಠ ಸಂಸ್ಥಾನ, ಭಾಲ್ಕಿ
ಬೀದರ ಜಿಲ್ಲೆ
ಪು : 150, ಬೆಲೆ : 180/–

**ಸಹಸ್ಪಂದನ**
ಸಂ. ಗಿರಿಜಾಶಂಕರ
ಸಾಹಿ ಮಧುವನ ಲೇಔಟ್
ಚಿಕ್ಕಮಗಳೂರು
ಪು : 560, ಬೆಲೆ : 400/–

**ವಿಶ್ವಬಂಧು**
**(ಮರುಳಸಿದ್ಧ ಕಾವ್ಯ – ಭಾಮಿನಿ ಷಟ್ಪದಿ)**
ಡಾ. ಮಹದೇವ ಬಣಕಾರ
ಪ್ರ: ಸಾಹಿತ್ಯ ಸಿರಿ
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ
ಸಿರಿಗೆರೆ, ಚಿತ್ರದುರ್ಗ ಜಿಲ್ಲೆ
ಪು : 619, ಬೆಲೆ : 300/–

**ಸಂಗಾತ (ವಿಮರ್ಶಾ ಲೇಖನಗಳು)**
ಕೊತ್ತಲವಾಡಿ ಶಿವಕುಮಾರ್
ಪ್ರ: ಮಹರ್ಷಿ ಪ್ರಕಾಶನ
ಶಾರದೇವಿ ನಗರ
ಮೈಸೂರು
ಪು : 216, ಬೆಲೆ : 300/–

## ಲೇಖಕರ ವಿಳಾಸ

**ಪ್ರೊ. ವಿ. ಗಿರೀಶ್‌ಚಂದ್ರ**
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ
ಬೆಂಗಳೂರು 560 018
ಮೊ : 94480 23240

**ಡಾ. ಬಿ. ನಂಜುಂಡಸ್ವಾಮಿ**
ಪಂಡಿತ ತಾರಾನಾಥ ಆಯುರ್ವೇದ
ಚಿಕಿತ್ಸಾಲಯ ಬಿ.ಹೆಚ್. ರಸ್ತೆ
ತುಮಕೂರು 572 102
ಮೊ : 98809 96196

**ಪ್ರೊ. ಎಚ್.ಎಸ್. ಉಮಾದೇವಿ**
ನಿವೃತ್ತ ಗ್ರಂಥಪಾಲಕಿ
ನಂ.1704, 'ಶಿವಶಕ್ತಿ'
ಉತ್ತರ ಅನಿಕೇತನ ರಸ್ತೆ
3ನೇ ತಿರುವು, ಕುವೆಂಪುನಗರ
ಮೈಸೂರು
ಮೊ : 94495 10617

**ಶ್ರೀ ಬೇಲೂರು ರಾಮಮೂರ್ತಿ**
ನಂ.96, 2ನೇ ಅಡ್ಡ ರಸ್ತೆ
20ನೇ ಮುಖ್ಯ ರಸ್ತೆ
ಬಿಟಿಎಂ 1ನೇ ಹಂತ
ಬೆಂಗಳೂರು 560 068
ಮೊ : 98860 61400

**ಡಾ. ಎಸ್.ಜಿ. ರಾಮದಾಸ ರೆಡ್ಡಿ**
ನಿವೃತ್ತ ಪ್ರಾಧ್ಯಾಪಕರು
ಎಚ್.ಐ.ಜಿ. 32, ಗ್ರೂಪ್–1
ಕೆ.ಎಚ್.ಬಿ. ಕಾಲೋನಿ
ಹೂಟಗಳ್ಳಿ, ಮೈಸೂರು 570 018
ಮೊ : 98453 09081

**ಶ್ರೀ ರಂಗನಾಥ್ ಮೈಸೂರು**
ನಂ.75,ಇ ಬ್ಲಾಕ್, 15ನೇ ಕ್ರಾಸ್
11ನೇ ಮುಖ್ಯರಸ್ತೆ
ಜೆ.ಪಿ.ನಗರ
ಮೈಸೂರು 570 008
ಮೊಬೈಲ್ : 98457 91252

ಹಿಂಬದಿ ಪುಟದ ಚಿತ್ರ

ಉಡುಪಿ ಶ್ರೀಕೃಷ್ಣ ಮಠದ ಪರ್ಯಾಯ ಶ್ರೀ ಪುತ್ತಿಗೆ ಮಠದ ನರಸಿಂಹ ಸಭಾಭವನವನ್ನು ಪರಮಪೂಜ್ಯ ಜಗದ್ಗುರುಗಳವರು ಜ್ಯೋತಿ ಬೆಳಗಿಸುವ ಮೂಲಕ ಪುತ್ತಿಗೆ ಮಠದ ಪೂಜ್ಯದ್ವಯರ ಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಿದರು. ಶ್ರೀಮತಿ ಯೋಗಿನಿ ದೀಕ್ಷಿತ್, ಗೌ.ನ್ಯಾ. ಶ್ರೀ ಕೃಷ್ಣ ದೀಕ್ಷಿತ್, ಶ್ರೀ ಯಶ್‌ಪಾಲ್ ಸುವರ್ಣ ಹಾಗೂ ಶ್ರೀ ರವೀಂದ್ರ ಜೋಷಿಯವರುಗಳಿದ್ದಾರೆ (24 ಅಕ್ಟೋಬರ್ 2025)



ಮೈಸೂರು ರಾಜ್‌ಕುಮಾರ್ ರಸ್ತೆಯ ಶಿಕ್ಷಕರ ಬಡಾವಣೆಯಲ್ಲಿ ಎಸ್‌ಎನ್‌ಟಿ ಕಂಟ್ರೋಲ್ಸ್‌ರವರ ಎಲ್‌ಜಿ ಬೆಸ್ಟ್ ಶಾಪ್ ನೂತನ ಮಳಿಗೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮಾಲೀಕರಾದ ಶ್ರೀಮತಿ ತೀರ್ಥಾ ಎಸ್. ಸ್ವಾಮಿ, ಶ್ರೀ ಸಿದ್ಧಲಿಂಗಸ್ವಾಮಿ ಕುಟುಂಬವರ್ಗದವರು ಹಾಗೂ ಇತರರಿದ್ದಾರೆ (4 ಅಕ್ಟೋಬರ್ 2025)



ಮೈಸೂರು ಹುಲ್ಲಿನಬೀದಿಯ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠ ಹಾಗೂ ವಿದ್ಯಾರ್ಥಿನಿಲಯದ ನೂತನ ಕಟ್ಟಡವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಬಿ.ವೈ. ವಿಜಯೇಂದ್ರರವರು ಉದ್ಘಾಟಿಸಿದರು. ಶ್ರೀ ಹೆಚ್.ವಿ. ರಾಜೀವ್, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ಪಡುಗೂರು ಹಾಗೂ ದೇವನೂರು ಮಠಗಳ ಶ್ರೀಗಳು, ಶ್ರೀ ಎಂ. ಪ್ರದೀಪ್‌ಕುಮಾರ್, ಶ್ರೀ ಟಿ.ಎಸ್. ಶ್ರೀವತ್ಸ ಹಾಗೂ ಶ್ರೀ ಬಿ. ನಾಗರಾಜುರವರುಗಳಿದ್ದಾರೆ (5 ಅಕ್ಟೋಬರ್ 2025)



ಟಿ. ನರಸೀಪುರದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ನಡೆದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್. ನಿಶಾಂತ್, ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಹೆಚ್.ಸಿ, ಮಹದೇವಪ್ಪ, ಪಾಂಡೋಮಟ್ಟಿ ಶ್ರೀಗಳು, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ವಾಟಾಳು ಶ್ರೀಗಳು, ಶ್ರೀ ಶಿವಮಲ್ಲಪ್ಪ, ಶ್ರೀ ಹೆಚ್.ಎಂ. ರೇಣುಕಪ್ರಸನ್ನ ಮೊದಲಾದವರಿದ್ದಾರೆ (8 ಅಕ್ಟೋಬರ್ 2025)



ಮೈಸೂರು ಅರವಿಂದನಗರದಲ್ಲಿ ರವಿತೇಜ ಕನ್ವೆನ್ಷನ್ ಹಾಲ್‌ನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಸಿದ್ಧಗಂಗಾ ಕಿರಿಯ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಎನ್. ರವೀಶ ಕುಟುಂಬವರ್ಗದವರು, ದೇವನೂರು ಶ್ರೀಗಳು, ಡಾ. ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಶ್ರೀ ಕೆ.ಎಸ್. ಮಹದೇವಪ್ರಸಾದ್, ಮುರುಘಾಮಠದ ಶ್ರೀಗಳು, ಡಾ. ಶ್ರೀ ಶಾಂತವೀರ ಸ್ವಾಮಿಗಳು, ಗಾವಡಗೆರೆ ಶ್ರೀಗಳು, ಶ್ರೀ ಟಿ.ಎಸ್. ಶ್ರೀವತ್ಸ ಮತ್ತು ಅಥಣಿ ಗಚ್ಚಿನಮಠದ ಶ್ರೀಗಳಿದ್ದಾರೆ (6 ಅಕ್ಟೋಬರ್ 2025)




ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದ ಗ್ಯಾಲರಿಯಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ವಿವಾಹವೇದಿಕೆಯ ನವೀಕೃತ ವೆಬ್‌ಸೈಟ್‌ನ್ನು ಅನಾವರಣಗೊಳಿಸಲಾಯಿತು. ಆ ಸಂದರ್ಭದಲ್ಲಿ ವಿದ್ಯಾಪೀಠದ ಅಧಿಕಾರಿಗಳು ಹಾಗೂ ವೆಬ್‌ಸೈಟ್ ಸಿದ್ಧಪಡಿಸಿದ ತಂಡದವರು ಉಪಸ್ಥಿತರಿದ್ದರು (17 ಅಕ್ಟೋಬರ್ 2025)




ಮಂಗಳೂರು ಜಿಲ್ಲೆ ಗುರುಪುರ ಶ್ರೀ ಜಂಗಮ ಸಂಸ್ಥಾನ ಮಠದ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದ ಶಿಲಾನ್ಯಾಸವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ತಣ್ಣೀರುಹಳ್ಳ, ಬೇವೂರು, ಚನ್ನಪಟ್ಟಣ, ಅರಮೇರಿ, ವಜ್ರದೇಹಿ ಮತ್ತು ಜಂಗಮ ಮಠಗಳ ಶ್ರೀಗಳು, ಡಾ. ವೈ. ಭರತ್ ಶೆಟ್ಟಿ ಮೊದಲಾದವರುಗಳಿದ್ದಾರೆ (24 ಅಕ್ಟೋಬರ್ 2025)





ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಆಯೋಜಿಸಿದ್ದ ಸಂಸ್ಕೃತೋತ್ಸವದಲ್ಲಿ ವಿದ್ವಾಂಸರುಗಳಾದ ಡಾ. ಹೆಚ್.ವಿ. ನಾಗರಾಜರಾವ್, ಡಾ. ಕೆ.ಜಿ. ಪುಟ್ಟಹೊನ್ನಯ್ಯ ಮತ್ತು ಪ್ರೊ. ಎಂ. ಮಲ್ಲಣ್ಣನವರುಗಳನ್ನು ಸನ್ಮಾನಿಸಲಾಯಿತು. ಶ್ರೀ ಟಿ.ಎಸ್, ಶ್ರೀವತ್ಸ, ಪ್ರೊ. ವಿ. ಗಿರೀಶ್ ಚಂದ್ರ, ಹರವೆ ಶ್ರೀಗಳು, ಡಾ. ರೇಚಣ್ಣ ಹಾಗೂ ಸಂಸ್ಕೃತ ಆಧ್ಯಾಪಕರುಗಳಿದ್ದಾರೆ (17 ಅಕ್ಟೋಬರ್ 2025)



ಸುತ್ತೂರು ಶ್ರೀಮಠದಲ್ಲಿ ಜರುಗಿದ 128ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಹದಿನೈದು ಜೋಡಿಗಳು ಸತಿಪತಿಗಳಾದರು. ವಿದ್ಯಾಪೀಠದ ಅಧಿಕಾರಿಗಳು ಮತ್ತು ಮೈಸೂರು ಚಾಮರಾಜೇಶ್ವರಿ ಅಕ್ಕನ ಬಳಗದ ಸದಸ್ಯರಿದ್ದಾರೆ (29 ಅಕ್ಟೋಬರ್ 2025)



ಚಾಮರಾಜನಗರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ಉದ್ಘಾಟಿಸಿದರು. ಶ್ರೀ ಹೆಚ್.ವಿ. ಚಂದ್ರು, ಶ್ರೀ ಎಸ್. ಸುರೇಶ್, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಸಿ. ಪುಟ್ಟರಂಗಶೆಟ್ಟಿ, ಶ್ರೀಮತಿ ಕುಮುದ ಕೇಶವಮೂರ್ತಿ, ಶ್ರೀ ಪಿ. ಮರಿಸ್ವಾಮಿ, ಶ್ರೀ ಮಹಮ್ಮದ್ ಅಸ್ಗರ್, ಶ್ರೀ ಎಂ. ನಂಜುಡಸ್ವಾಮಿಯವರುಗಳಿದ್ದಾರೆ (28 ಅಕ್ಟೋಬರ್ 2025)




ಬೆಂಗಳೂರು ಸುಮಂಗಲಿ ಸೇವಾ ಆಶ್ರಮದ ಸುವರ್ಣ ಸಂಭ್ರಮದಲ್ಲಿ ಅಧ್ಯಕ್ಷರಾದ ಡಾ. ಎಸ್.ಜಿ. ಸುಶೀಲಮ್ಮನವರು ಹಾಗೂ ಶ್ರೀಮತಿ ಕಾಂತಮ್ಮನವರುಗಳನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನಿಸಲಾಯಿತು. ಶ್ರೀ ಕೆ.ವಿ. ನಾಗರಾಜಮೂರ್ತಿ, ಬೇಲಿಮಠದ ಶ್ರೀಗಳು, ಭಾಲ್ಕಿ ಶ್ರೀಗಳು, ಶ್ರೀ ವಿ. ಸೋಮಣ್ಣ, ಶ್ರೀ ಕೆ. ನಾರಾಯಣ, ಶ್ರೀ ಬಿ.ಟಿ. ಮುನಿಯಪ್ಪ, ಡಾ. ಸಿ. ಸೋಮಶೇಖರ್ ಹಾಗೂ ಶ್ರೀಮತಿ ರಾಣಿ ಸತೀಶ್‌ರವರುಗಳಿದ್ದಾರೆ (30 ಅಕ್ಟೋಬರ್ 2025)




ಬೆಂಗಳೂರಿನಲ್ಲಿ ಡಾ. ಸಿ. ಸೋಮಶೇಖರ್ – ಶ್ರೀಮತಿ ಎನ್. ಸರ್ವಮಂಗಳ ಸಾಹಿತ್ಯ ಸೇವಾ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ 2025ನೇ ಸಾಲಿನ ಸಂಸ್ಕೃತಿ ಸಂಗಮ ಪ್ರಶಸ್ತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಮತಿ ಕಸ್ತೂರಿ ಶಂಕರ್, ಶ್ರೀ ಬೋರಲಿಂಗಯ್ಯ, ಶ್ರೀ ರಂಜಾನ್ ದರ್ಗಾ, ಶ್ರೀ ಕಾ.ತ. ಚಿಕ್ಕಣ್ಣ ಹಾಗೂ ಶ್ರೀ ಶ್ರೀನಿವಾಸ್ ಜಿ. ಕಪ್ಪಣ್ಣನವರುಗಳಿಗೆ ಪ್ರದಾನ ಮಾಡಲಾಯಿತು. ಶ್ರೀಮತಿ ಎನ್. ಸರ್ವಮಂಗಳ, ಡಾ. ಸಿ. ಸೋಮಶೇಖರ್, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಕೆ.ವಿ. ನಾಗರಾಜಮೂರ್ತಿ ಹಾಗೂ ಡಾ. ಪುರುಷೋತ್ತಮ ಬಿಳಿಮಲೆ ಮೊದಲಾದವರುಗಳಿದ್ದಾರೆ (31 ಅಕ್ಟೋಬರ್ 2025)



ನಂಜನಗೂಡು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ವಿವಿಧ ಸಂಘ ಸಂಸ್ಥೆಗಳು ಹಾಗೂ ನಾಗರಿಕರ ಸಹಯೋಗದೊಂದಿಗೆ ಆಯೋಜಿಸಿದ್ದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವ ಶತೋತ್ತರ ದಶಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಸಿ. ಸೋಮಶೇಖರ್, ಶ್ರೀ ದರ್ಶನ್ ಧ್ರುವನಾರಾಯಣ್, ಶ್ರೀ ಬಿ. ಹರ್ಷವರ್ಧನ್ ಹಾಗೂ ಶ್ರೀ ಕಳಲೆ ಕೇಶವಮೂರ್ತಿಯವರುಗಳಿದ್ದಾರೆ (23 ಅಕ್ಟೋಬರ್ 2025)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ವಿಜಯದಶಮಿಯಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಭೇಟಿ ನೀಡಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿ ಸನ್ಮಾನಿಸಿದರು. ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಮೊದಲಾದವರುಗಳಿದ್ದಾರೆ (2 ಅಕ್ಟೋಬರ್ 2025)

Registered with the Registrar of Newspapers in India Under No. 50622 / 1986
'Prasada' Monthly, Vol. 40 Issue No. 10, October 2025




ISSN 2583-7

ಬಿಡಿ ಪ್ರತಿ : ರೂ.10/–

e-mail: prasada@jssonline.org * www.jssonline.org